ರಾಮಾಯಣವೂ ಭಗವದ್ಗೀತೆಯೂ

ಬರೆದವರು :
ದೇವುಡು

ಪ್ರಕಾಶಕರು :
ಮೈಸೂರು ಸಂಸ್ಥಾನದ
ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆ
ವಿಧಾನಸೌಧ, ಬೆಂಗಳೂರು-೧.

ಬೆಲೆ: ೮೭ ನಯೇ ಪೈಸೆ.

ರಾಮಾಯಣವೂ ಭಗವದ್ಗೀತೆಯೂ

ಬರೆದವರು :

ದೇವುಡು

ಪ್ರಕಾಶಕರು :

ಮೈಸೂರು ಸಂಸ್ಥಾನದ

ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆ

ವಿಧಾನಸೌಧ, ಬೆಂಗಳೂರು-೧.

ಮುದ್ರಕರು :

ಮೈಸೂರು ಸರ್ಕಾರದ ಮುದ್ರಣಾಲಯದ ಡೈರೆಕ್ಟರವರು

ಬೆಂಗಳೂರು-೧.

೧೯೫೮.

ರಾ ಮಾ ಯ ಣ

ಪೀಠಿಕೆ

ನನಗೆ ರಾಮಾಯಣದ ಹುಚ್ಚು ಹಿಡಿದು ಸುಮಾರು ೨೦ ವರ್ಷಗಳಾಯಿತು. ಆಗಿನಿಂದ ಆ ಸದ್ಗ್ರಂಥವನ್ನು ಆಶ್ರಯಿಸಿದ್ದೇನೆ. ರಾಮಾಯಣದ ಮಹಾಪುರುಷರು, ರಾಮಾಯಣ ಸಂಗ್ರಹ, ಎಂಬ ಗ್ರಂಥಗಳೂ ಬಂದಿವೆ.

ಸಂಸ್ಕೃತಿ ಪ್ರಚಾರ ಸಂಬಂಧವಾಗಿ ಈ ರಾಮಾಯಣವನ್ನು ಕುರಿತು ಹಲವೆಡೆಗಳಲ್ಲಿ ಉಪನ್ಯಾಸಮಾಡುತ್ತಾ ನನ್ನ ಅಭಿಪ್ರಾಯಗಳನ್ನು ಪುನರ್ವಿಮರ್ಶೆಮಾಡಿ, ಚಿಂತನಮಾಡಿ ಇದು ಸರಿಯೆಂಬ ನಿರ್ಧರಕ್ಕೆ ಬಂದಿದ್ದೇನೆ. ಅದೇ ಅಭಿಪ್ರಾಯಗಳನ್ನು ಯಥಾಮತಿ, ಯಥೋಚಿತವಾಗಿ ನಿರೂಪಿಸಿರುವ ಲೇಖನವಿದು ಸಾಮಾನ್ಯರಿಗೂ ಹಿಡಿಯಬೇಕೆಂಬ ಆಶೆಯಿಂದ ಬರೆದುದು. ಅಲ್ಲಲ್ಲಿ ಶ್ಲೋಕಗಳನ್ನು ಕೊಟ್ಟಿರುವುದುಂಟು. ಅದು ಮನಸ್ಸಿನ ಸಮಾಧಾನಕ್ಕಾಗಿ. ಶ್ಲೋಕ ಹೇಳಿದರೆ ಕೇಳಿದರೆ ನಮಗೊಂದು ಸಂತೋಷ.

" ಸಂಸ್ಕೃತಿ ಪ್ರಚಾರಕರು ಅಲ್ಲಲ್ಲಿ ಮಾಡುವ ಉಪನ್ಯಾಸಗಳನ್ನು ಗುರುತು ಹಚ್ಚಿದ್ದರೆ ಒಳ್ಳೆಯದು. ಯಾರಾದರೂ ಸಹೃದಯರು ಬೇಕೆಂದರೆ ಮತ್ತೊಮ್ಮೆ ಅನುಸಂಧಾನ ಮಾಡಲು ಅನುಕೂಲವಾಗುವುದು " ಎಂದು ಮುಖ್ಯಮಂತ್ರಿಗಳು ಅಪ್ಪಣೆ ಕೊಡಿಸಿದರು. " ಅದು ಸರಿ. ಯಾವ ವಿಷಯವಾದರೂ ಶ್ರವಣಮನನಗಳಿಂದ ಆರಾಧಿತವಾದರೇನೇ ಉತ್ತೇಜಿತವಾಗಿ ವೀರ್ಯವತ್ತಾಗುವುದು. ಸಂಸ್ಕೃತಿ ಪುನರುಜ್ಜೀವನದಲ್ಲಿ ಇದೇ ಆಗಬೇಕಾದುದು ' ಎಂದು ಈ ಲೇಖನವನ್ನು ಸಿದ್ಧಪಡಿಸಿದ್ದೇನೆ.

ಇದನ್ನು ಓದಲು ಸುಮಾರು ಎರಡು ಗಂಟೆಯಾದೀತು. ಸಹೃದಯರು ದಯವಿಟ್ಟು ಓದಲಿ.

"ರಾಮಾಯಣದ ಮೇಲೆ ಈ ಲೇಖನವೇ ಕೊನೆಯಾಗದಿರಲಿ. ರಾಮಾಯಣವು ವಿದ್ವದ್ವರೇಣ್ಯರ ವಿಚಾರಕ್ಕೆ ಸಾಧನವಾಗಿ, ತದ್ವಿಷಯಗಳಾದ ಲೇಖನಗಳ ಮಳೆಯಾಗಲಿ" ಎಂದು ಹಾರೈಸುತ್ತೇನೆ.

ಈ ಲೇಖನವನ್ನು ಪ್ರಕಟಿಸಿದ ಮೈಸೂರು ಸರ್ಕಾರದವರಿಗೆ ಅನಂತ ವಂದನೆಗಳು.

ಶ್ರೀ ಗೀರ್ವಾಣ ವಿದ್ಯಾಪೀಠ,
ಬೆಂಗಳೂರು-4.
20-9-1955

ದೇವುಡು

ರಾಮಾಯಣ

ಗೋಷ್ಪದೀಕೃತವಾರಾಶಿಂ ಮಶಕೀಕೃತರಾಕ್ಷಸಂ ||
ರಾಮಾಯಣಮಾಹಾಮಾಲಾ ರತ್ನಂ ವಂದೇಽನಿಲಾತ್ಮಜಂ ||

೧. ಜನಸಾಮಾನ್ಯರೂ ಶ್ರೀರಾಮನೂ

ಭರತಖಂಡದಲ್ಲಿ ಆಸೇತು ಹಿಮಾಚಲ ಪರ್ಯಂತವಾಗಿ ಜನರೆಲ್ಲರೂ ಶ್ರೀರಾಮನನ್ನು ಪೂಜಿಸುತ್ತಾರೆ. ಚೈತ್ರಶುದ್ಧ ನವಮಿ ದಿನವಾದರೂ ಪೂಜಿಸುತ್ತಾರೆ. ರಾಮನಾಮವನ್ನು ಗ್ರಂಥಗಳಲ್ಲಿ ಬರೆದಿಡುತ್ತಾರೆ. ರಾಮಾಯಣವನ್ನು ಪಾರಾಯಣ ಮಾಡುತ್ತಾರೆ : ಮಾಡಿಸುತ್ತಾರೆ : ಓದಿಸುತ್ತಾರೆ: ಮಂಗಳ ಮಾಡುತ್ತಾರೆ. ರಾಮಮಂತ್ರವನ್ನು ನಾನಾವಿಧಗಳಲ್ಲಿ ಇಂದಿಗೂ ಕೋಟಿ ಕೋಟಿ ಜನರು ಜಪಿಸುತ್ತಾರೆ. ರಾಮನಾಮವನ್ನು ಜಪಿಸಿ ಕೃತಾರ್ಥರಾದವರಲ್ಲಿ ಸಮರ್ಥ ರಾಮ ದಾಸರು ಪ್ರಸಿದ್ಧರಾದವರು. ರಾಮದರ್ಶನವನ್ನು ಪಡೆದು ಕೃತಾರ್ಥರಾದವರಂತೂ ಒಬ್ಬರು ಇಬ್ಬರಲ್ಲ. ಗಾಂಧಿಯವರಂತೂ ರಘುಪತಿ ರಾಘವ ರಾಜಾರಾಂ | ಪತಿತಪಾವನ ಸೀತಾರಾಂ|| ಎಂದು ನಿತ್ಯಭಜನೆ ಮಾಡಿದ ಮಹಾತ್ಮರು.

ಶ್ರೀರಾಮನು ದೇವರು ಎಂಬ ಭಾವನೆ ಇವೊತ್ತಿನದಲ್ಲ. ಎರಡು ಸಾವಿರ ವರ್ಷದ ಹಿಂದಿನ ಮಹಾಕವಿಯಾದ ಕಾಲಿದಾಸನು ಶ್ರೀರಾಮನು ದೇವರು ಎಂದು ಹಾಡಿದ. ದಾರ್ಶನಿಕ ಶ್ರೇಷ್ಠರಾದ ಆಚಾರ್ಯ ಶಂಕರರು ಶ್ರೀರಾಮನು ದೇವರು ಎಂದು ಒಪ್ಪಿಕೊಂಡರು. ಈಗಲೂ ಊರೂರಿನಲ್ಲಿಯೂ ಶ್ರೀರಾಮನ ದೇವಸ್ಥಾನವಿಲ್ಲದಿದ್ದರೂ ಶ್ರೀರಾಮ ಭಕ್ತನ ದೇವಸ್ಥಾನವಾದರೂ ಇದ್ದೇ ಇರುತ್ತದೆ. ಜೊತೆಗೆ ಶ್ರೀರಾಮತಾಪಿನೀ ಮೊದಲಾದ ಉಪನಿಷತ್ತುಗಳು ಇದ್ದು ರಾಮ ಮಂತ್ರಜಪದಿಂದ ಲಭಿಸುವ ಫಲಗಳನ್ನು ಒಕ್ಕಣಿಸುತ್ತವೆ.

ಗೀತೆಯಲ್ಲಿ ಶ್ರೀಕೃಷ್ಣನು ರಾಮಶ್ಶಸ್ತ್ರ ಭೃತಾಂವರಃ-ಶಸ್ತ್ರಧಾರಿಗಳಾದವರಲ್ಲಿ ಶ್ರೇಷ್ಠನಾದ ರಾಮನು ನಾನು ಎನ್ನುತ್ತಾನೆ. ಜೈಮಿನಿಯಲ್ಲಿ ಸುಧನ್ವನ ಕಾಳಗದ ಸಂದರ್ಭದಲ್ಲಿ ಶ್ರೀಕೃಷ್ಣನು ಎರಡನೆಯ ಬಾಣಕ್ಕೆ ತನ್ನ ಪುಣ್ಯವನ್ನೆಲ್ಲಾ ಕೊಟ್ಟು ಅದು ವ್ಯರ್ಥವಾಗಲು, ಮೂರನೆಯ ಬಾಣಕ್ಕೆ ರಾಮಾವತಾರದ ಪುಣ್ಯವನ್ನು ಕೊಟ್ಟು ಅರ್ಜುನನನ್ನು ಗೆಲ್ಲಿಸುತ್ತಾನೆ. ಶ್ರೀ ಸೀತಾರಾಮಾಂಜನೇಯವೆಂಬ ವೇದಾಂತ ಗ್ರಂಥವು ಮುಮುಕ್ಷುಗಳಿಗೆ ಅತಿಪ್ರಿಯವಾಗಿದೆ. ನಾವೂ ಅದೇ ಭಾವನೆಯನ್ನು ಪುಷ್ಟೀಕರಿಸುವ ಕಾರ್ಯವನ್ನು ಮಾಡಲು ಹೊರಟಿದ್ದೇವೆ.

ಆಯಿತು. ಜನಸಾಮಾನ್ಯವು ಒಪ್ಪಿರುವ ಒಂದು ಭಾವನೆಯನ್ನು ಗೌರವಿಸಿದಮೇಲೆ ಮತ್ತೆ ಆ ವಿಷಯವನ್ನು ನಿರೂಪಿಸುವುದರಿಂದ ಏನು ಲಾಭ? ಎಂದು ಕೇಳುವುದೂ ಸರಿ. ಜನಸಾಮಾನ್ಯವು ರೂಢಿಯನ್ನು ಅನುಸರಿಸಿ, ಒಂದು ಸಿದ್ಧಾಂತವನ್ನು ಒಪ್ಪಿಕೊಳ್ಳುತ್ತದೆ. ವಿದ್ವಾಂಸರು ಆ ಸಿದ್ಧಾಂತವು ಸರಿಯೇ ತಪ್ಪೇ ಎಂದು ವಿಚಾರ ಮಾಡಿ ಒಪ್ಪುತ್ತಾರೆ. ಕವೀಂದ್ರನು ಹೇಳಿದಂತೆ—ಸಂತಃ ಪರೀಕ್ಷ್ಯ ಅನ್ಯತರದ್ ಭಜಂತೇ। ಮೂಢಃ ಪರಪ್ರತ್ಯಯನೇಯ ಬುದ್ಧಿಃ॥ ಸಂತರು ಯಾವ ಸಿದ್ಧಾಂತ ಬಂದರೂ ಅದನ್ನು ಪರೀಕ್ಷಿಸಿ, ಸಾಧುವಾದರೆ ಒಪ್ಪುತ್ತಾರೆ: ಮೂಢರು ಅವರಿವರು ಹೇಳಿದರೆಂದು ಒಪ್ಪುತ್ತಾರೆ.

ಭಾರತೀಯರು ಸತ್ಯವನ್ನು ಶಾಸ್ತ್ರ, ಆಚಾರ್ಯೋಪದೇಶ, ಯುಕ್ತಿ ಎಂಬ ಮೂರು ತೆರನಾಗಿ ಪರೀಕ್ಷಿಸುತ್ತಾರೆ. ಶಾಸ್ತ್ರವು ಯಾರೊಬ್ಬರನ್ನೂ ಲಕ್ಷೀಕರಿಸದೆ, ಅತೀಂದ್ರಿಯ ವಿಚಾರವನ್ನು ಎಂದರೆ ಇಂದ್ರಿಯಗಳಿಗೆ ಗೋಚರವಾಗದ ವಿಚಾರವನ್ನು ತೋರಿಸುವುದು. ಆಚಾರ್ಯನು ತನ್ನ ಶಿಷ್ಯನಿಗೆ "ಉದ್ಧಾರದ ಹಾದಿಯಿದು: ನಾನು ಉದ್ಧಾರವಾಗಿರುವೆನು: ನೀನೂ ಹೀಗೆ ಮಾಡಿದರೆ ಉದ್ಧಾರವಾಗುವೆ"ಯೆಂದು ಹೇಳುವುದು ಉಪದೇಶ. ಶಾಸ್ತ್ರವನ್ನೂ ಉಪ

ದೇಶವನ್ನೂ ಹಿಡಿದು ಅಥವಾ ಶಾಸ್ತ್ರವೆಂಬ ಮಲ್ಲಿಗೆಯ ಹೂವನ್ನೂ ಆಚಾರ್ಯೋಪದೇಶವೆಂಬ ಪಾದರಿಯ ಹೂವನ್ನೂ ಜಾಣತನದಿಂದ ಕಟ್ಟುವ ನಾರು ಯುಕ್ತಿ. ತನಗೆ ಶಾಸ್ತ್ರವು ಸರಿಯೆಂಬ ಅನುಭವವೂ ಬಂದಿದೆ: ಆಚಾರ್ಯೋಪದೇಶವು ಅದನ್ನು ತನಗೆ ತಿಳಿಸಿಕೊಟ್ಟಿದೆಯೆಂಬ ನಂಬಿಕೆಯೂ ಇದೆ. ಆಗ, ತನಗೆ ಅನುಭವ ಗೋಚರವಾಗಿರುವ ಅಲೌಕಿಕಾಂಶವನ್ನು ತನ್ನಂತಹ ಇತರರಿಗೆ ಲೌಕಿಕ ರೀತಿಯಲ್ಲಿ ಹೇಳುವ ಮಾತು ಯುಕ್ತಿ.* ಅದರಿಂದ ಜನಸಾಮಾನ್ಯವು ರೂಢಿಯ ಬಲದಿಂದ, ಶಾಸ್ತ್ರ, ಉಪದೇಶ, ಯುಕ್ತಿಗಳ ಬಲವಿಲ್ಲದೆ ಹಿಡಿದ ಸಿದ್ಧಾಂತವು, ಪಂಡಿತಮಾನ್ಯರು ಎಂದರೆ, ತಾವು ಪಂಡಿತರೆಂದುಕೊಂಡವರಿಂದ, ಬಲು ಹಗುರವಾಗಿ ಉಪೇಕ್ಷೆಗೆ ಗುರಿಯಾಗುವುದು: ಆದರೆ ಶಾಸ್ತ್ರ, ಉಪದೇಶ, ಯುಕ್ತಿಗಳ ಬಲವಿರುವ ಸಿದ್ಧಾಂತವನ್ನು ಲಘುವಾಗಿ ಗಣಿಸಲಾಗುವುದಿಲ್ಲ. ಅದರಿಂದ, ಜನಸಾಮಾನ್ಯದ ಸಿದ್ಧಾಂತವನ್ನು ಒರೆಗೆ ಹಚ್ಚುವ ಈ ಪ್ರಯತ್ನ.

೨. ಅವತಾರವೆಂದರೇನು?

ಶ್ರೀ ರಾಮನು ದೇವರು, ಮಹಾವಿಷ್ಣುವಿನ ಅವತಾರ, ಎಂದು ಎಲ್ಲರೂ ಎನ್ನುತ್ತಾರೆ. ಹಾಗೆಂದರೇನು? ಸರ್ವಶಕ್ತನಾದ ಮಹಾವಿಷ್ಣುವು ತಾನು ಇರುವ ಎಡೆಯಿಂದಲೇ ಹೀಗಾಗಲಿ ಎಂದು ಸಂಕಲ್ಪ ಮಾಡಿದರೆ ಎಲ್ಲವೂ ಆಗುವಾಗ, ಆತನು ಅವತಾರ ಮಾಡಬೇಕಾದ ಹಗರಣವನ್ನು ಪಡಲೇಕೆ? ಅಲ್ಲದೆ ನಿರ್ಗುಣವು ಸಗುಣವಾಗಬೇಕಾದ ಆವಶ್ಯಕತೆಯೇನು? ಎಂದು ಹಲವಾರು ಪ್ರಶ್ನೆಗಳನ್ನು ಕೇಳುವುದುಂಟು. ಅವೆಲ್ಲಕ್ಕೂ ಉತ್ತರವಿದೆ. ಅದೇ ಅವತಾರ ರಹಸ್ಯ.

---

*ದೃಷ್ಟಸಾಮ್ಯೇನ ಚಾದೃಷ್ಟಮರ್ಥಂ ಸಮರ್ಥಯಂತೀ ಯುಕ್ತಿಃ ಬ್ರಹ್ಮಸೂತ್ರ: ಶಾಂಕರ ಭಾಷ್ಯ-೨೨-ಪಾ೧-ಸೂ೪.

ಈ ಅವತಾರ ರಹಸ್ಯವನ್ನು ಶ್ರೀ ಭಗವದ್ಗೀತೆಯು ಹೇಳುವಷ್ಟು ಸುಲಭವಾಗಿ, ಸಯುಕ್ತಿಕವಾಗಿ, ಇನ್ನೆಲ್ಲಿಯೂ ಹೇಳಿದಂತಿಲ್ಲ. ನಾಲ್ಕನೆಯ ಅಧ್ಯಾಯದ ಆದಿಯಲ್ಲಿ, "ಇಮಂ ವಿವಸ್ವತೇ ಯೋಗಂ ಪ್ರೋಕ್ತವಾನಹಮವ್ಯಯಂ—ನಾನು ಸನಾತನವಾದ ಈ ಯೋಗವನ್ನು ವಿವಸ್ವತನಿಗೆ ಹೇಳಿದೆನು" ಎಂದು ಭಗವಂತನು ಹೇಳಿದರೆ, ಅರ್ಜುನನಿಗೆ ಅರ್ಥವಾಗಲಿಲ್ಲ. ಅದಕ್ಕವನು "ಅಪರಂ ಭವತೋ ಜನ್ಮ ಪರಂ ಜನ್ಮ ವಿವಸ್ವತಃ। ಕಥಮೇತದ್ವಿಜಾನೀಯಾಂ ತ್ವಮಾದೌ ಪ್ರೋಕ್ತವಾನಿತಿ—ನೀನು ಈಗ ಇರುವವನು: ವಿವಸ್ವತನು ಆಗ ಇದ್ದವನು: ಹೀಗಿರಲು, ನೀನು ಆ ಮೊದಲಲ್ಲಿ (ಈ ಯೋಗವನ್ನು ಆತನಿಗೆ) ಹೇಳಿದೆಯೆಂದರೆ, ನನಗೆ ಅರ್ಥವಾಗುವುದು ಹೇಗೆ?" ಎಂದು ಕೇಳಿದನು. ಆಗ ಭಗವಂತನು ನಕ್ಕು ಆತನಿಗೆ ತನ್ನ ಅವತಾರ ರಹಸ್ಯವನ್ನು ಹೇಳುತ್ತಾನೆ: "ಅಜೋಽಪಿ ಸನ್ನವ್ಯಯಾತ್ಮಾ ಭೂತಾನಾಮೀಶ್ವರೋಽಪಿ ಸನ್॥ ಪ್ರಕೃತಿಂ ಸ್ವಾಮಧಿಷ್ಠಾಯ ಸಂಭವಾಮ್ಯಾತ್ಮಮಾಯಯಾ॥ ನಾನು ಜನ್ಮವಿಲ್ಲದವನು: ಯಾವ ವಿಕಾರಕ್ಕೂ ಒಳಪಡದವನು. ಹುಟ್ಟಿಬರುವ ಪ್ರಾಣಿಗಳಿಗೆ ನಾನೇ ಈಶ್ವರನು: (ಎಂದರೆ ಜನ್ಮಮರಣಗಳಿಗೆ ಕಾರಣನಾದವನೂ ನಾನೇ!) ಆದರೂ, ನನ್ನದೇ ಆದ ಪ್ರಕೃತಿಯನ್ನು ಹಿಡಿದು, ನನ್ನ ಮಾಯೆಯಿಂದ ನಾನು ಹುಟ್ಟುವೆನು."

ಇದರ ಅರ್ಥ ಹೀಗೆ:—ಮಿಕ್ಕ ಪ್ರಾಣಿಗಳೆಲ್ಲವೂ ಪ್ರಕೃತಿಯನ್ನು ಅನುಸರಿಸಿ ಹುಟ್ಟುವುವು: ಪ್ರಕೃತಿಂ ಸ್ವಾಮವಷ್ಟಭ್ಯ ವಿಸೃಜಾಮಿ ಪುನಃ ಪುನಃ। ಭೂತಗ್ರಾಮಮಿಮಂ ಕೃತ್ಸ್ನಂ ಅವಶಂ ಪ್ರಕೃತೇರ್ವಶಾತ್. 9-18. ಸದೃಶಂ ಚೇಷ್ಟತೇ ಸ್ವಸ್ಯಾಃ ಪ್ರಕೃತೇರ್ಜ್ಞಾನವಾನಪಿ। ಪ್ರಕೃತಿಂ ಯಾಂತಿಭೂತಾನಿ।—3-33: ಸ್ವಭಾವಜೇನ ಕೌಂತೇಯ ನಿಬದ್ಧಃ ಸ್ವೇನ ಕರ್ಮಣಾ। ಕರ್ತುಂ ನೇಚ್ಛಸಿ ಯನ್ಮೋಹಾತ್ ಕರಿಷ್ಯಸ್ಯವಶೋಽಪಿ ತತ್ 18-60. ಪ್ರಾಣಿಗಳು ಹುಟ್ಟುವುದು ಪರಮೇಶ್ವರನಿಂದ: ಹುಟ್ಟಿಬಂದವು ಪ್ರಕೃತಿವಶವಾದವು: ಜ್ಞಾನಿಯೇ ಆದರೂ ತನ್ನ ಪ್ರಕೃತಿಯನ್ನು ಮೀರಲಾರ: ಪ್ರಾಣಿಪ್ರಾಣಿಗೂ ಒಂದು ಸ್ವಭಾವವಿದೆ:

ಅದು ಅವನನ್ನು ತನ್ನ ಕರ್ಮದಿಂದ ಕಟ್ಟುತ್ತದೆ : ಅದರಿಂದ ಅವನು ಇಷ್ಟವಿಲ್ಲದಿದ್ದರೂ, ಬೇಡವೆನ್ನುತ್ತಿದ್ದರೂ, ಕರ್ಮವನ್ನು ಮಾಡಿಯೇ ತೀರುವನು. ಅವು ಸ್ವತಂತ್ರಗಳಲ್ಲ : ಪ್ರಕೃತಿವಶವಾಗಿರುವ ಪರತಂತ್ರಗಳು. ಅವು ಹಿಂದಿನ ಜನ್ಮಗಳಲ್ಲಿ ತಾವು ಮಾಡಿರುವ ಪಾಪಪುಣ್ಯಗಳನ್ನೂ ಅನುಭವಿಸಲು ಪ್ರಕೃತಿಯು ಕತ್ತು ಹಿಡಿದು ತಳ್ಳಲು ಈ ಜನ್ಮಕ್ಕೆ ಬಂದವು. ಪರಮೇಶ್ವರನು ಹಾಗಲ್ಲ. ಇನ್ನೆಲ್ಲರನ್ನೂ ಹಿಡಿದಾಳುವ ಪ್ರಕೃತಿಯನ್ನು ಆಳುವವನಾಗಿ, ಇತರರಿಗೆ ಗೋಚರವಾಗದ ಯೋಗಮಾಯಾ ರಹಸ್ಯದಿಂದ ಹುಟ್ಟಿಬಂದವನು. ಪ್ರಕೃತಿಯು ಆತನ ವಶವಲ್ಲದೆ, ಆತನು ಆಕೆಯ ವಶವಲ್ಲ. ಮಿಕ್ಕವರು ಜನ್ಮವೆತ್ತುವುದು ಯತ್ನವಿಲ್ಲದೆಯಾದರೆ, ಆತನು ತನ್ನ ಉದ್ದೇಶವನ್ನು, ಸಂಕಲ್ಪವನ್ನು, ನೇರವೇರಿಸಿಕೊಳ್ಳಲು ತನ್ನ ಬಲದಿಂದ ಪ್ರಕೃತಿಯ ಕ್ಷೇತ್ರಕ್ಕೆ ಬರುತ್ತಾನೆ.

ಆ ಸಂಕಲ್ಪವನ್ನೂ ಆತನೇ ಹೇಳುತ್ತಾನೆ :—ನಾನು ಧರ್ಮಸಂಸ್ಥಾಪನೆಗೋಸ್ಕರ ಯುಗಯುಗದಲ್ಲೂ ಹುಟ್ಟುತ್ತೇನೆ. ಆ ಧರ್ಮವು ಯಾವುದು ಎನ್ನುವೆಯಾ ? ಸಾಧುಗಳನ್ನು ಕಾಪಾಡುವುದು : ದುಷ್ಟರನ್ನು ಧ್ವಂಸಮಾಡುವುದು–ಇದೇ ಧರ್ಮಸಂಸ್ಥಾಪನೆ. ಪರಮಾತ್ಮನು ಅವತಾರ ಮಾಡುವುದು ತನ್ನ ಹಿಂದಿನ ಜನ್ಮದ ಫಲಗಳನ್ನು ಅನುಭವಿಸುವುದಕ್ಕಲ್ಲ : ವೀಣೆಯ ತಂತಿಯ ಶ್ರುತಿಯಂತೆ ಸಹಜವಾಗಿ ಇಳಿದು ಹೋಗುತ್ತಿರುವ ಧರ್ಮಜ್ಯೋತಿಯನ್ನು ಬೆಳಗುವುದಕ್ಕೆ.

ಈ ಅರ್ಥವನ್ನು ಮತ್ತೆ ಸ್ಥಿರೀಕರಿಸುತ್ತ ಇನ್ನೂ ಒಂದು ಮಾತೂ ಹೇಳಿದ : ಯಾರೂ ಮೋಸ ಹೋಗದಿರಲಿ ಎಂದು ಕೃಪೆಯಿಂದ, ವಿಶ್ವಾಸದಿಂದ, ಅಭಿಮಾನದಿಂದ, ತಾನಾಗಿ ಹೇಳಿದ : "ಜನ್ಮಕರ್ಮಚ-ಮೇ ದಿವ್ಯಂ ಯ ಏವಂ ವೇತ್ತಿ ತತ್ತ್ವತಃ। ತ್ಯಕ್ತ್ವಾದೇಹಂ ಪುನರ್ಜನ್ಮ ನೈತಿ ಮಾಮೇತಿ ಪಾಂಡವ ॥ 4–9.—ಅರ್ಜುನ, ನನ್ನ ಈ ಜನ್ಮವೂ ಕರ್ಮವೂ ದಿವ್ಯವೆಂಬ ರಹಸ್ಯವನ್ನು ಯಾವನು ಯಥಾ

ವತ್ತಾಗಿ ತಿಳಿಯುವನೋ ಅವನು ದೇಹಾಂತವಾದ ಮೇಲೆ ಪುನರ್ಜನ್ಮವನ್ನು ಹೊಂದದೆ ನನ್ನನ್ನೇ ಹೊಂದುವನು ” ಇದು ಅವತಾರ ರಹಸ್ಯ-ಇದು ಶಾಸ್ತ್ರದ ಮಾತು. ಇನ್ನುಮುಂದೆ ರಾಮಾಯಣದ ಕವಿಯ ವಿಚಾರವನ್ನು ಹೇಳುತ್ತ ಆಚಾರ್ಯೋಪದೇಶ ಅನುಭವ ರಸಾಯನವಾದ ಯುಕ್ತಿಗಳನ್ನು ವಿಚಾರ ಮಾಡೋಣ.

೩. ರಾಮಾಯಣದ ಕವಿ

ರಾಮಾಯಣಕ್ಕೆ ಆಚಾರ್ಯ ವಾಲ್ಮೀಕಿ-ವಾಲ್ಮೀಕಿ ಗಿರಿಸಂಭೂತಾ ರಾಮಸಾಗರ ಗಾಮಿನೀ। ಪುನಾತು ಭುವನಂ ಪುಣ್ಯಾ ರಾಮಾಯಣ ಮಹಾನದೀ॥—ವಾಲ್ಮೀಕಿ ಎಂಬ ಬೆಟ್ಟದಲ್ಲಿ ಹುಟ್ಟಿ ರಾಮನೆಂಬ ಸಾಗರವನ್ನು ಸೇರಲಿರುವ ರಾಮಾಯಣ ಮಹಾನದಿಯು ಮೂರು ಲೋಕವನ್ನೂ ಪಾವನ ಮಾಡುವಷ್ಟು ಪುಣ್ಯವು ಎಂಬುದು ಹಿರಿಯರ ಮಾತು. ಆತನು ಪೂರ್ವಜನ್ಮದಲ್ಲಿ ಬೇಡನಾಗಿದ್ದು ತಪಸ್ಸುಮಾಡಿ ಹಿರಿಯನಾದನಂತೆ. ಕೂಜಂತಂ ರಾಮರಾಮೇತಿ ಮಧುರಂ ಮಧುರಾಕ್ಷರಂ ॥.....ಯಃ ಪಿಬನ್ ಸತತಂ ರಾಮ। ಚರಿತಾಮೃತ ಸಾಗರಂ ॥ ರಾಮರಾಮ ಎಂಬ ಮಧುರಾಕ್ಷರಗಳುಳ್ಳ ಮಂತ್ರವನ್ನು ಮಧುರವಾಗಿ ಹಾಡುವವನು ; ಯಾವಾಗಲೂ ರಾಮ ಚರಿತವೆಂಬ ಅಮೃತ ಸಾಗರವನ್ನು ಕುಡಿಯುತ್ತಿರುವವನು ಎಂದು ಆತನನ್ನು ಸಂಪ್ರದಾಯವು ಗೌರವಿಸಿದೆ. ತಾನು ರಾಮಮಂತ್ರದಿಂದ ಕೃತಾರ್ಥನಾಗಿ ಇತರರನ್ನೂ ಕೃತಾರ್ಥರನ್ನು ಮಾಡಲು ರಾಮ ರಾಮ ಎನ್ನುತ್ತಿರುವ ಆತನು ಈ ಸದ್ಗ್ರಂಥಕ್ಕೆ ಆಚಾರ್ಯನಲ್ಲದಿದ್ದರೆ ಇನ್ನು ಯಾರು ಆಗಬೇಕು ? ಅದರಿಂದ ಆತನು ತಾನು ಹಾಡಿಹೊಗಳಿದ ರಾಮನ ವಿಚಾರವಾಗಿ ಏನು ಹೇಳಿರುವನು ಎಂಬುದನ್ನು ವಿಸ್ತಾರವಾಗಿ ವಿಮರ್ಶಿಸೋಣ.

ಆತನು ರಾಮಮಂತ್ರ ಜಪದಿಂದ ಮಹರ್ಷಿಯಾದವನು. ತಪಸ್ವಿಯಾಗಿ ರಾಮಮಂತ್ರವನ್ನು ಸದಾ ಜಪಮಾಡುತ್ತಿರುವವನು. ಇದನ್ನು ಮರೆಯದೆ ಮುಂದೆ ಹೋಗೋಣ.

ರಾಮಾಯಣದಲ್ಲಿ ಉಪೋದ್ಘಾತ ರೂಪವಾಗಿ ಕೆಲವು ಸರ್ಗ ಗಳಿವೆ. ಅಲ್ಲಿ ರಾಮಾಯಣದ ಪ್ರಾದುರ್ಭಾವವನ್ನು ಕುರಿತು ಅಷ್ಟು ಹೇಳಿದೆ. ಅಲ್ಲಿನ ಕಥೆ ಇಲ್ಲಿಗೆ ಬಹಳ ಬೇಕಾದುದು. ಅದನ್ನು ಅನುಸಂಧಾನಮಾಡೋಣ.

೪. ಮಹಾಪುರುಷನೋ ? ಅವತಾರವೋ ?

ವಾಲ್ಮೀಕಿಗಳು ಒಂದು ದಿನ ಆಶ್ರಮದಲ್ಲಿ ಕುಳಿತಿದ್ದಾರೆ. ನಾರದರು ದಯಮಾಡಿಸಿದರು. ಪರಮವೈಷ್ಣವರಾದ ನಾರದರಿಗೆ ವಾಲ್ಮೀಕಿಗಳು ಯಥೋಚಿತವಾಗಿ ಸತ್ಕಾರಮಾಡಿ ಒಂದು ಪ್ರಶ್ನೆ ಯನ್ನು ಕೇಳಿದರು. ಶಾಸ್ತ್ರಜ್ಞರು ದಯಮಾಡಿಸಿದರೆ ಅವರು ಆರಾಧಿಸುವ ಶಾಸ್ತ್ರದ ವಿಷಯವಾಗಿ ಪ್ರಶ್ನೆಯನ್ನು ಕೇಳುವುದು ಆ ಶಾಸ್ತ್ರಾಭಿಮಾನಿ ದೇವತೆಗೆ ಪೂಜೆಯೆಂದು ಹಿರಿಯರ ಸಂಪ್ರ ದಾಯ. ಅಲ್ಲದೆ, ದೊಡ್ಡವರು ದಯಮಾಡಿಸಿದರೆ, ಎಂಥವರೇ ಆಗಲಿ ಒಂದುಗಳಿಗೆ ಅತ್ತ ತಿರುಗಿ ಅವರ ವಶವರ್ತಿಗಳಾಗುವುದೂ ಸಹಜ. (ಮುಂದೆ ರಾಮಾಯಣದಲ್ಲಿ ವಿಶ್ವಾಮಿತ್ರರು ದಯಮಾಡಿಸಿದಾಗ, ದಶರಥನು ಹೇಗೆ ನಡೆದುಕೊಳ್ಳುವನು ನೋಡಿ). ಈ ಎರಡು ಪ್ರಭಾ ವಗಳಿಗೆ ಉತ್ತರವಾಗಿ ವಾಲ್ಮೀಕಿಗಳು ನಾರದರನ್ನು “ಕೋನ್ವಸ್ಮಿನ್ ಸಾಂಪ್ರತಂ ಲೋಕೇ ಗುಣವಾನ್ ಕಶ್ಚ ವೀರ್ಯವಾನ್, ॥ ಧರ್ಮ ಜ್ಞಶ್ಚ ಕೃತಜ್ಞಶ್ಚ ಸತ್ಯವಾಕ್ಯೋ ದೃಢವ್ರತಃ ॥ ಚಾರಿತ್ರೇಣ ಚ ಕೋ ಯುಕ್ತಃ ಸರ್ವಭೂತೇಷು ಕೋ ಹಿತಃ ॥ ವಿದ್ವಾನ್ ಕಃ ಸಮರ್ಥಶ್ಚ ಕಶ್ಚೈಕಪ್ರಿಯದರ್ಶನಃ॥ ಆತ್ಮವಾನ್ ಕೋ ಜಿತಕ್ರೋಧೋ ದ್ಯುತಿಮಾನ್ ಕೋಽನಸೂಯಕಃ। ಕಸ್ಯಬಿಭ್ಯತಿ ದೇವಾಶ್ಚಜಾತರೋಷಸ್ಯ ಸಂಯುಗೇ॥ ಏತದಿಚ್ಛಾಮ್ಯಹಂ ಶ್ರೋತುಂ ಪರಂ ಕೌತೂಹಲಂ ಹಿ ಮೇ।

ಮಹರ್ಷೇ ತ್ವಂ ಸಮರ್ಥೋಽಸಿ ಜ್ಞಾತುಮೇವಂವಿಧಂ ನರಂ ॥—ಈ ಕಾಲದಲ್ಲಿ ಗುಣವಂತನೂ ವೀರ್ಯವಂತನೂ ಧರ್ಮಜ್ಞನೂ ಕೃತಜ್ಞನೂ ಸತ್ಯವಾಕ್ಯನೂ ದೃಢವ್ರತನೂ ಚಾರಿತ್ರಸಂಪನ್ನನೂ ಸರ್ವಭೂತಹಿತನೂ ಆಗಿ, ವಿದ್ವಾಂಸನೂ ಸಮರ್ಥನೂ ಏಕಪ್ರಿಯದರ್ಶನೂ ಆಗಿ, ಆತ್ಮವಂತನೂ ಜಿತಕ್ರೋಧನೂ ತೇಜಸ್ವಿಯೂ ಅನಸೂಯಕನೂ ಆಗಿ, ರೇಗಿದರೆ ದೇವತೆಗಳನ್ನೂ ಹೆದರಿಸುವಂತಹ ಮನುಷ್ಯನು ಯಾರು ? ಆತನನ್ನು ಕುರಿತು ನನಗೆ ಹೇಳು. ಅಂಥವನನ್ನು ಬಲ್ಲವನು ನೀನೊಬ್ಬನೇ ! ” ಎಂದು ಕೇಳಿದರು. ಈ ನಾಲ್ಕು ಶ್ಲೋಕಗಳಲ್ಲಿ ರಾಮಾಯಣವನ್ನೆಲ್ಲ ಹೇಳಿದೆಯೆಂದರೂ ತಪ್ಪಿಲ್ಲ. ಆದರೆ ವಿಸ್ತಾರವಾಗಿ ವ್ಯಾಖ್ಯಾನಮಾಡುವುದು ಇಲ್ಲಿಗಲ್ಲ ಎಂದು ಅಲ್ಲಿರುವ ರಹಸ್ಯವನ್ನು ಮಾತ್ರ ಸೂಚಿಸಿ ಮುಂದೆ ಹೋಗೋಣ.

ಗುಣವಾನ್, ವೀರ್ಯವಾನ್ ಎಂಬಲ್ಲಿ ಪರಸ್ಪರ ವಿರೋಧವಿದೆ. ವೀರ್ಯವಂತನು ಇತರರನ್ನು ಲಕ್ಷಿಸದೆ ಮೆರೆಯಬಹುದು. ಅಂಥವನು ದೈವವಶದಿಂದ ಗುಣವಂತನೂ ಆದರೆ ಅದು ಗಂಧಯುಕ್ತವಾದ ಚಿನ್ನದಂತೆ ಅಪರೂಪ. ಅಂಥವನು ಮಹಾತ್ಮನು. ರಾಕ್ಷಸರು ವೀರ್ಯವಂತರು: ಆದರೆ ಅವರಲ್ಲಿ ಗುಣವಿತ್ತೇನು ?

ಧರ್ಮಜ್ಞಶ್ಚ ಕೃತಜ್ಞಶ್ಚ ಎಂಬುದು ನಮಗೆ ಅರ್ಥವಾಗಬೇಕಾದರೆ ಸುಧನ್ವನ ಕಥೆಯನ್ನು ಅನುಸಂಧಾನಮಾಡಬೇಕು. ಶಂಖಲಿಖಿತರು ಧರ್ಮಜ್ಞರು ನಿಜ, ಆದರೆ ಅವರು ಕೃತಜ್ಞರಲ್ಲ. ನಾವು ಕೃತಜ್ಞ ಎಂದರೆ ನಮಗೆ ಮಾಡಿದ ಉಪಕಾರವನ್ನು ಸ್ಮರಿಸುವುದು ಎಂಬ ಅರ್ಥ ಮಾಡುತ್ತೇವೆ. ಆದರೆ ಇತರರು ಮಾಡಿದ ಕಾರ್ಯದ ಯುಕ್ತಾಯುಕ್ತತೆಯನ್ನು ತಿಳಿಯುವುದು ಕೃತಜ್ಞತೆ. ಅವರು ಕೃತಜ್ಞರಾಗಿದ್ದರೆ ಸುಧನ್ವನು ಯುದ್ಧಕ್ಕೆ ಹೋಗದೆ ನಿಂತುದೂ ಧರ್ಮಕ್ಕಾಗಿ ಎಂದು ತಿಳಿಯುತ್ತಿದ್ದರು. ಧರ್ಮವು ಏಕಮುಖವಲ್ಲ : ಧರ್ಮವು ನಾನಾಮುಖವಾಗಿದೆ ಎಂದು ತಿಳಿದು, ಆ ನಾನಾಮುಖಧರ್ಮವನ್ನು ಅರಿತು ಆರಾಧಿಸುವುದು ಧರ್ಮಜ್ಞನೂ ಕೃತಜ್ಞನೂ ಆದವನ ಗುರುತು.

ಹೀಗಾಗಲು ವೃದ್ಧೋಪಸೇವಿಯಾಗಬೇಕು. ಧರ್ಮವು ಶಾಸ್ತ್ರ ಪಾಂಡಿತ್ಯಮಾತ್ರವಲ್ಲ. ಆಪಸ್ತಂಭರು "ಆವಾಂ ಧರ್ಮಾಧರ್ಮೌ ಇತಿ ನ ಚರತಃ—ಧರ್ಮ-ಅಧರ್ಮಗಳು ನಾವು ಎಂದು ಹಣೆಯ ಮೇಲೆ ಬರೆದುಕೊಂಡು ಚಲಿಸುತ್ತಿಲ್ಲ" ಎಂದರು: ಧರ್ಮವು ಅಧರ್ಮವಾದ, ಅಧರ್ಮವು ಧರ್ಮವಾದ ಪ್ರಸಂಗಗಳು ಎಷ್ಟೋ ಇವೆ. ಅದರಿಂದ ಒಂದು ಸಂದರ್ಭದಲ್ಲಿ ಧರ್ಮ_ಅಧರ್ಮಗಳನ್ನು ನಿರ್ಣಯಿಸಬೇಕಾದರೆ ಕೃತಜ್ಞನಾಗಿರಬೇಕು. (ಇನ್ನು ಈ ವಿಷಯ ವಾಗಿ ತಿಳಿಯಬೇಕು ಎನ್ನುವರು ಲಲಿತಾಸಹಸ್ರನಾಮದ ಕೃತಜ್ಞಾ ಎಂಬ ನಾಮದ ಮೇಲಿನ ವ್ಯಾಖ್ಯಾನವನ್ನು ನೋಡಿ. ಮುಂದೆ ವಾಲಿವಧ ಪ್ರಸಂಗ ನೋಡಿ).

ಸತ್ಯವಾಕ್ಯ ದೃಢವ್ರತಗಳಿಗೆ ಕೂಡ ಹೀಗೆಯೇ ವಿರೋಧ ಭಾವವುಂಟು: ಸತ್ಯವೆನ್ನುವುದು ಚಲನ ಧರ್ಮವುಳ್ಳದು : ದೃಢವ್ರತವೂ ಅಷ್ಟೇ ನಿಷ್ಠುರವಾಗಿ ಪಟ್ಟುಹಿಡಿದು ಆಚರಿಸಬೇಕಾದದು. 'ಅಪವ್ರತ' ವ್ರತವಿಲ್ಲದವನು ಎನ್ನುವುದು ವೈದಿಕ ಸಂಪ್ರದಾಯದಲ್ಲಿ ಬಲು ಕೆಟ್ಟ ಮಾತು. ಗೀತೆಯಲ್ಲಿ ಹೇಳುವ ಮೋಘಂ ಪಾರ್ಥ ಸ ಜೀವತಿ—ಪಾರ್ಥ ಅವನ ಬಾಳು ವ್ಯರ್ಥ ಎಂಬ ಮಾತಿಗೆ ಸರಿಯಾದುದು. ಹೀಗೆ ಚರ ಸ್ಥಿರಗಳೆರಡನ್ನೂ ಪರಸ್ಪರ ವಿರೋಧವಿಲ್ಲದಂತೆ ಆಚರಿಸುವುದಂತೂ ಇನ್ನೂ ಕಷ್ಟ. ಅದರಿಂದಲೇ ಮುಂದೆ ಚಾರಿತ್ರೇಣ ಚ ಕೋ ಯುಕ್ತಃ ಎಂಬ ಮಾತು. ಸತ್ಯ-ವ್ರತ ಎರಡನ್ನೂ ಗೌರವಿಸಿ ಅದನ್ನು ಆಚರಿಸು ತ್ತಿರುವವನು ಯಾರು ? ಎಂದು ಪ್ರಶ್ನೆ. ಮತ್ತೆ ಆ ಆಚರಣವು ಸರ್ವ ಭೂತಗಳಿಗೂ ಹಿತವಾಗುವಂತಿರಬೇಕು. ಲೋಕದಲ್ಲಿ ಒಂದು ವಸ್ತುವು ದೊಡ್ಡದಾದರೆ ಇನ್ನೊಂದು ಚಿಕ್ಕದಾಗಬೇಕು, ಹಾಗೆ ಇತರರನ್ನು ಚಿಕ್ಕದು ಮಾಡದೆ ತಾನು ದೊಡ್ಡವನಾಗುವುದು ಸನಾತನಧರ್ಮದ ಸಿದ್ಧಾಂತ. ಕೃಣ್ವಂತೋ ವಿಶ್ವಮಾರ್ಯಂ—ವಿಶ್ವವನ್ನೆಲ್ಲ ಆರ್ಯವನ್ನು ಮಾಡುವವರು ಎಂಬ ಸೂತ್ರದಲ್ಲಿ ಈ ಸಿದ್ಧಾಂತವಡಗಿದೆ. ಅದನ್ನು ವಾಲ್ಮೀಕಿಗಳು ಇಲ್ಲಿ ತೋರಿಸುತ್ತಿದ್ದಾರೆ.

ಹಾಗೆಯೇ ಮುಂದಿನಮಾತು. ವಿದ್ವಾನ್ ಕಃ, ಕಸ್ಸಮರ್ಥಶ್ಚ ಎಂಬುದು ವಿದ್ವಾನ್ ಎಂದರೆ ಈಗ ದೋಷಜ್ಞ, ಎಂಬ ಅರ್ಥದಲ್ಲಿ ಬಹುವಾಗಿ ಉಪಯೋಗಿಸುತ್ತಿದ್ದೇವೆ. ಆದರೆ ಇಲ್ಲಿ ಯ ಏವಂವೇದ ಎಂಬುವ ಉಪನಿಷತ್ತಿನ ವಾಕ್ಯವನ್ನು ಸ್ಮರಿಸಿ. ಅದನ್ನು ತೋರಿಸುವುದಕ್ಕಾಗಿಯೇ ಮುಂದಿನ ಸಮರ್ಥ ಎಂಬ ಮಾತು. ಅರ್ಥೀ ವಿದ್ವಾನ್ ಸಮರ್ಥೋ ಯಜೇತ ಎಂಬುದು ಒಂದು ವೇದವಿಧಿ ಎಂದರೆ ಆಜ್ಞೆ. ಒಂದು ಕಾರ್ಯವು ಆಗಬೇಕಾದರೆ ಮಾಡುವವನಲ್ಲಿ ಮೂರು ಗುಣಗಳಿರಬೇಕು: ಅರ್ಥಿ, ಈ ಕಾರ್ಯವನ್ನು ಈ ಫಲಕ್ಕಾಗಿ ಮಾಡಬೇಕು. ಎಂಬ ಆಸ್ತೆ : ಅಕ್ಕರೆ: ಮೊದಲನೆಯದು. ಎರಡನೆಯದು : ವಿದ್ವಾನ್, ಆ ಕಾರ್ಯವನ್ನು ಹೇಗೆ ಮಾಡುವುದು ? ಏಕೆ ಮಾಡುವುದು ? ಎಂಬ ಪೂರ್ವೋತ್ತರಗಳನ್ನು ತಿಳಿದಿರುವಿಕೆ. ಮೂರನೆಯದು : ಸಮರ್ಥ ಎಂದರೆ, ಕಾರ್ಯವನ್ನು ನಿರ್ವಾಹಮಾಡುವ ವಿಚಕ್ಷಣತೆ. ಸಂಪಾತಿಗೆ ಅಶೋಕವನದಲ್ಲಿ ಸೀತೆಯು ಕಾಣಿಸಿದಳು: ಆದರೆ ಅಲ್ಲಿಗೆ ಹೋಗುವುದಕ್ಕೆ ಸಾಮರ್ಥ್ಯವಿರಲಿಲ್ಲ. ಈ ಸಾಮರ್ಥ್ಯವಿಹೀನತೆಯು ವಿಶ್ವಾಮಿತ್ರರಿಗೆ ಯಜ್ಞಕಾಲದಲ್ಲಿ ಇದ್ದಂತೆ ದೀಕ್ಷಾದಿಗಳಿಂದ ಬಂದಿರಬಹುದು : ಅಥವಾ ಸಂಪಾತಿಗೆ ಇದ್ದಂತೆ ರೆಕ್ಕೆಗಳು ಇಲ್ಲದಿದ್ದುದರಿಂದ ಬಂದಿರಬಹುದು. ಇಲ್ಲಿ ವಾಲ್ಮೀಕಿಗಳು ಕೇಳಿದ ಪ್ರಶ್ನೆಯನ್ನು ನೋಡಿ. ವಿದ್ವಾನ್ ಸಮರ್ಥಃ ಎರಡೂ ಆಗಿರಬೇಕು. (ಮುಂದೆ ಭಾರ್ಗವ ರಾಮನ ಸಂಬಂಧವಾಗಿ ರಾಮನು ಆಡುವ ಮಾತನ್ನು ನೋಡಿ) (ಇಲ್ಲಿ ನಾವು ಸಾಧ್ಯಾರ್ಥವನ್ನು ಸೂಚಿಸಿ ಮುಂದೆಹೋಗುತ್ತಿದ್ದೇವೆ. ಆದ್ದರಿಂದ ವಾಚಕರು ತಮ್ಮ ಪ್ರತಿಭೆಯಿಂದ ಈ ಅಂಶಗಳನ್ನು ಇನ್ನೂ ಬೆಳೆಸಿಕೊಂಡು ಹೋಗಬೇಕು. ವಿಜಯನಗರದ ಮಂತ್ರಿ ಅಪ್ಪಾಜಿಯು ಅನೆ ಹಂಚಿದ ಕಥೆಯನ್ನು ನೆನೆಸಿಕೊಳ್ಳಿ. ಜೊತೆಗೆ ಈಗಿನ ಸೈನ್ಸ್ ಹೇಳುವ ಕೆಟಲೆಟಿಕ್ ಏಜೆಂಟ್ ಎಂಬುದನ್ನು ಗಮನಿಸಿ.)

ಮುಂದಿನ ಮಾತು ಕಶ್ಚೈಕಪ್ರಿಯದರ್ಶನಃ. ಈ ಹಿಂದಿನ ಮಾತುಗಳೆಲ್ಲ ಅರ್ಥವಾದ ಮೇಲೆ ಈ ಮಾತು. ಮಾಲವಿಕಾಗ್ನಿಮಿತ್ರದಲ್ಲಿ

ಕಾಲಿದಾಸನು ರಾಜವಿಚಾರವಾಗಿ ಒಂದು ಮಾತು ಹೇಳಿದ್ದಾನೆ : “ನ ಚ ನ ಪರಿಚಿತೋ ನ ಚಾಪ್ಯಗಮ್ಯಃ। ಚಕಿತಮುಪೈಮಿ ತಥಾಪಿ ಪಾರ್ಶ್ವಮಸ್ಯ—ಈ ರಾಜನು ನನಗೆ ಅಪರಿಚಿತನಲ್ಲ; ಅಥವಾ ಅಗಮ್ಯನೂ ಅಲ್ಲ ಆದರೂ ಈತನ ಬಳಿಸಾರಲು ಹೆದರಿಕೆಯಾಗುವುದು.—ಏಕೆಂದರೆ ದುರಾಸದೋ ರಾಜಮಹಿಮಾ: ರಾಜರ ಪ್ರಭಾವವು ದೂರ ನೂಕುವಂಥದು.” ಮತ್ತೆ ಆತನೇ ರಘುವಂಶದಲ್ಲಿ “ಭೀಮಕಾಂತೈರ್ನೃಪಗುಣೈಃ । ಯಾದೋರತ್ನೈರಿವಾರ್ಣವಃ—ದಿಲೀಪನು ಭಯಂಕರವೂ ಮನೋಹರವೂ ಆದ ನೃಪಗುಣಗಳಿಂದ, ಮೊಸಳೆಗಳಿಂದ ಭಯಂಕರವೂ ರತ್ನಗಳಿಂದ ಮನೋಹರವೂ ಆದ ಸಮುದ್ರದಂತೆ ಸಮಾರಾಧ್ಯನೂ ದುರಾಸದನೂ ಆಗಿದ್ದನು” ಎನ್ನುತ್ತಾನೆ. ಹಾಗೆ ಶ್ರೀರಾಮನೂ ಲೋಕೋತ್ತರ ಗುಣಗಳಿಂದ ಕೂಡಿದವನಾದುದರಿಂದ ಭಯಂಕರನೂ ಮನೋಹರನೂ ಆಗಬೇಕಾಗಿತ್ತು. ಆದರೆ ಆತನಲ್ಲಿ ತೇಜಸ್ಸು ಸೂರ್ಯನಂತೆ ಪ್ರಚಂಡವಾಗಿದ್ದರೂ ಚಂದ್ರನಂತೆ ಮನೋಹರವಾಗಿದೆ. ಭಯಂಕರತ್ವವು ತೊಲಗಿ ಆತನು ಪ್ರಿಯದರ್ಶನವಾಗಿದ್ದಾನೆ. “ಬೆಂಕಿಯು ಮಡಿಲಲ್ಲಿ ಕಟ್ಟಿಕೊಳ್ಳುವಷ್ಟು ಸೌಮ್ಯವಾಗಿದೆ” ಎಂಬಂತೆ ಈ ಮಾತು.

ಆ ಮೇಲೆ ಆತ್ಮವಾನ್ ಕೋ ಜಿತಕ್ರೋಧಃ. ಆತ್ಮವಾನ್ ಎಂದರೆ ಆತ್ಮವಿದ್ಯಾಸಂಪನ್ನಃ—ಇಂದ್ರಿಯ ಮನೋಬುದ್ಧಿಗಳನ್ನು ಗೆದ್ದವನು ಎಂದರ್ಥ. ಎಂದರೆ ಸತ್ವಗುಣವನ್ನು ರೂಢಿಸಿಕೊಂಡವನು ಎಂದರ್ಥ. ಜಿತಕ್ರೋಧ ಎಂಬಲ್ಲಿ ಗೀತೆಯ ವಚನವನ್ನು ಸ್ಮರಿಸಿ. ಅರ್ಜುನನು ಭಗವಂತನನ್ನು ಕೇಳುತ್ತಾನೆ: “ಅಥ ಕೇನ ಪ್ರಯುಕ್ತೋಽಯಂ ಪಾಪಂ ಚರತಿ ಪೂರುಷಃ— ಯಾರು ಪಾಪವನ್ನು ಮಾಡಲು ಪುರುಷನನ್ನು ಪ್ರೇರಿಸುವವರು ?”—ಸ್ವಾಮಿಯು ಅದಕ್ಕೆ ಹೇಳುತ್ತಾನೆ : “ಕಾಮಏಷ ಕ್ರೋಧಏಷ ರಜೋಗುಣಸಮುದ್ಭವಃ-ರಜೋಗುಣದಿಂದ ಹುಟ್ಟಿದ ಕಾಮಕ್ರೋಧವು ಪಾಪಕಾರಕವು” ಜಿತಕ್ರೋಧಃ ಎಂಬ ಮಾತಿನಿಂದ ಪಾಪಕಾರಕಗಳಾದ ಕಾಮ ಕ್ರೋಧಗಳನ್ನು ಗೆದ್ದವನು

ಎಂದರ್ಥ. (ಮುಂದೆ ಕೌಸಲ್ಯೆಯ ಅಂತಃಪುರದಲ್ಲಿ ಲಕ್ಷ್ಮಣನು "ನೀನು ಅರಸಾಗು. ನಾನು ರಕ್ಷಕನಾಗಿ ನಿಂತು ನಿನ್ನ ಶತ್ರುಗಳನ್ನು ಹತಮಾಡುವೆನು" ಎಂದಾಗ ರಾಮನು ಹೇಳುವ "ತದೇನಾಂ ವಿಸೃಜಾನಾರ್ಯಾಂ ಕ್ಷತ್ರಧರ್ಮಾಶ್ರಿತಾಂ ಮತಿಂ—ಕ್ಷತ್ರಧರ್ಮವನ್ನು ಆಶ್ರಯಿಸಿರುವ ಈ ಅನಾರ್ಯವಾದ ಮತಿಯನ್ನು ಬಿಡು" ಎಂಬ ಮಾತನ್ನು ಗಮನಿಸಿ). ಅರ್ಥಾತ್, ಶ್ರೀರಾಮನಲ್ಲಿ ಪಾಪವೃತ್ತಿಯೇ ಇರಲಿಲ್ಲ.

ಮುಂದೆ ದ್ಯುತಿಮಾನ್ ಕೋಽನಸೂಯಕಃ. ದ್ಯುತಿಮಾನ್ ಎಂದರೆ ತೇಜಸ್ವಿಯಾದವನು. ತೇಜಸ್ವಿಗಳ ಲಕ್ಷಣವೇನು ಎಂದರೆ ಇತರರಿಂದ ತಿರಸ್ಕಾರವನ್ನು ಹೊಂದದಿರುವುದು. ಹಾಗಾದರೆ ತನಗಿಂತ ಪ್ರಬಲನಾದವನನ್ನು ಕಂಡರೆ ತೇಜಸ್ವಿಯ ಚಿತ್ತವೃತ್ತಿಯು ಹೇಗಿರುವುದು ? ಸಹಜವಾಗಿ ವಿರೋಧಿಸುವುದು. "ನೀನೇನು ಮಹಾ ?" ಎನ್ನುವುದು. ಅದೇ ಅಸೂಯೆ. ಅದಿರಲಿಲ್ಲ ರಾಮನಿಗೆ. ದ್ಯುತಿಮಾನ್ ತೇಜಸ್ವಿಯಾಗಿದ್ದರೂ ಇತರರ ಹೆಚ್ಚುಗಾರಿಕೆಯನ್ನು ವಿರೋಧಿಸದವನಾಗಿರಬೇಕಂತೆ. ಅದು ಈ ನುಡಿಗಳ ಅರ್ಥ.

ಮುಂದಿನ ಮಾತಂತೂ ಇನ್ನೂ ವಿಚಿತ್ರ. "ಕಸ್ಯ ಬಿಭ್ಯತಿ ದೇವಾಶ್ಚ ಜಾತರೋಷಸ್ಯ ಸಂಯುಗೇ" ಕೋಪಮಾಡಿಕೊಂಡು ಯುದ್ಧಕ್ಕೆನಿಂತ ಯಾವನನ್ನುಕಂಡರೆ ದೇವತೆಗಳೂ ಹೆದರುವರು ? ಹಿಂದಿನ ಶ್ಲೋಕದಲ್ಲಿ ಜಿತಕ್ರೋಧ ಎಂದುದನ್ನು ವಾಲ್ಮೀಕಿಗಳು ಮರೆತರೇನು ? ಜಿತಕ್ರೋಧನಾದವನು ಜಾತರೋಷನಾಗುವುದು ಹೇಗೆ ? ಉಂಡೂ ಉಪವಾಸಿ, ಬಳಸಿಯೂ ಬ್ರಹ್ಮಚಾರಿ ಎಂಬ ಗಾದೆಯ ಹಾಗೆ ಇದು. ಲೋಕ ಲೋಕಗಳನ್ನೆಲ್ಲಾ ತುತ್ತುಗೊಂಡು ಮೆರೆಯುವ ಕ್ರೋಧವು ಅಡಿಯಾಳು ಆದವನನ್ನು ಕುರಿತ ಮಾತು ಇದು. ಕ್ರೋಧಕ್ಕೆ ಆತನು ವಶನಲ್ಲ: ಕ್ರೋಧವು ಆತನ ವಶ. ಅರ್ಥಾತ್ ಈ ಶ್ಲೋಕವನ್ನೆಲ್ಲ ಒಟ್ಟಿಗೆ ತೆಗೆದುಕೊಂಡರೆ, ಯೇಷಾಂ ಸಾಮ್ಯೇ ಸ್ಥಿತಂ ಮನಃ ಎಂಬ ಗೀತೋಕ್ತಿಯ ಉದಾಹರಣ. ನಿತ್ಯ ಸತ್ವಸ್ಥನಾದವನಿಗೆ ಮಾತ್ರ., ಎಂದರೆ

ಯಾವಾಗಲೂ ಸತ್ವಗುಣದಲ್ಲಿ ಇರುವವನಿಗೆ ಮಾತ್ರ ಸಾಧ್ಯವಾದ ಸ್ವಭಾವದ ವರ್ಣನೆ ಇದು.

ಇಲ್ಲಿ ಬರುವ ದೇವಾ ಬಿಭ್ಯತಿ ಎಂಬ ಮಾತು ಗಮನಾರ್ಹವಾದುದು. ಸೃಷ್ಟಿಯು ದೇವ ಮನುಷ್ಯ ತಿರ್ಯಕ್ ಎಂದು ಮೂರು ಗುಂಪು. ದೇವತೆಗಳು ಉತ್ತಮರು : ಅವರನ್ನು ಕಂಡರೆ ಮನುಷ್ಯರು, ದೇವ ಮನುಷ್ಯರನ್ನು ಕಂಡರೆ, ಅವರಿಗಿಂತ ಕೀಳಾದ ತಿರ್ಯಕ್ಕುಗಳೂ ಹೆದರುವುದು ಸಹಜ. ಹೀಗಿರಲು ಜಾತರೋಷನನ್ನು ಕಂಡು ದೇವತೆಗಳು ಹೆದರುವುದು ಎಂದರೇನು ? ಇಲ್ಲಿ ನಹುಷೋಪಾಖ್ಯಾನವನ್ನು ಚಿಂತಿಸಿ. ಇಂದ್ರನೊಮ್ಮೆ ತಾನು ಮಾಡಿದ ಬ್ರಹ್ಮಹತ್ಯಾ ಪಾಪಕ್ಕೆ ಹೆದರಿ ಸಿಂಹಾಸನವನ್ನು ಬಿಟ್ಟು ಓಡಿಹೋದನು. ಆಗ ಇಂದ್ರನೊಬ್ಬನು ಬೇಕೆಂದು ದೇವತೆಗಳೆಲ್ಲ ಅರಸಿದರು. ಕೊನೆಗೆ ಇಂದ್ರಪಟ್ಟಕ್ಕೆ ನಹುಷನು ಸರಿಯೆಂದು ಗೊತ್ತಾಯಿತು. ಅವರು ಬಂದು ಇಂದ್ರಪಟ್ಟವನ್ನು ಅಂಗೀಕರಿಸು ಎಂದರೆ, ನಹುಷನು ಆಗದು ಎಂದನು: "ನೀವು ದೇವತೆಗಳು ನಾನು ಮಾನವ. ನಿಮ್ಮನ್ನು ಕಂಡರೆ ನನಗೆ ಹೆದರಿಕೆಯಾಗುವುದು. ನೀವು ನನ್ನನ್ನು ಕಂಡು ಹೆದರುವುದಿಲ್ಲ. ಹೆದರದವರ ಮೇಲೆ ಆಳುವಿಕೆಯೆಂತು ?" ಎಂದನು. ಆಗ ದೇವತೆಗಳು "ನಿನ್ನ ಕಣ್ಣಿಗೆ ಬಿದ್ದವರೆಲ್ಲ ನಿನಗೆ ಸಗ್ಗಲಿ" ಎಂದು ವರವನ್ನು ಕೊಟ್ಟು ಆತನನ್ನು ಇಂದ್ರನನ್ನು ಮಾಡಿದರು. ನಹುಷವಾಕ್ಯವನ್ನು ಇಲ್ಲಿಗೆ ಅನ್ವಯಿಸಿದರೆ, ಈ ಮಾತು ಅರ್ಥವಾಗುವುದು. ಇಲ್ಲಿದೆ ರಾಮಾವತಾರದ ರಹಸ್ಯ–ಶ್ರೀರಾಮನ ತೇಜಸ್ಸು ದೇವತೆಗಳನ್ನೂ ನಡುಗಿಸಬಲ್ಲದು ಎಂದರೆ ಆತನು ಅತಿದೇವನಾಗಿರಬೇಕು. ಅರ್ಥಾತ್ ಆತನು ಪುರುಷೋತ್ತಮನೇ ಆಗಿರಬೇಕು.

ಆದರೆ ಅಂಥವನು ಸಾಂಪ್ರತಂ ಅಸ್ಮಿನ್ ಲೋಕೇ ನರಂ ಆಗಿರಬೇಕು. ಮನುಷ್ಯನಾಗಿ ಇಲ್ಲಿಗೆ ಬಂದಿರಬೇಕು. ಅಂಥವನ ಕಥೆಯನ್ನು ಹೇಳಿ ಎಂದುದರಿಂದ ವಾಲ್ಮೀಕಿಗಳು ಕೇಳುವಾಗಲೇ ಅವತಾರಿಯಾದ ಮಾನವನ ವಿಚಾರವನ್ನೇ ಕುರಿತು ಕೇಳಿದರು ಎನ್ನು

ವುದೇ ಸರಿ. ಏವಂ ವಿಧಂ ನರಂ ಎಂದಿರುವುದರಿಂದ "ನಮ್ಮಂತಹ ಮನುಷ್ಯ ಆದರೆ, ನಮಗಿಂತ ಇನ್ನು ಅಷ್ಟು ಹೆಚ್ಚು" ಎಂದು ಕೊಳ್ಳು ವುದಕ್ಕಿಂತ, ನರನಾಗಿ ಅವತಾರಮಾಡಿದವನು ಎನ್ನುವುದೇ ಸರಿ.

ಗೀತೆಯಲ್ಲಿ ವಿಭೂತಿಯನ್ನು ಕುರಿತು ಪ್ರಸ್ತಾಪಿಸುತ್ತಾ, "ಯದ್ಯದ್ ವಿಭೂತಿಮತ್ಸತ್ವಂ ಶ್ರೀಮದೂರ್ಜಿತಮೇವ ವಾ॥ ತತ್ತ ದೇವಾವಗಚ್ಛ ತ್ವಂ ಮಮ ತೇಜೋಽಂಶಸಂಭವಮ್" ಯಾವುದು ಯಾವುದು ವಿಭೂತಿಮತ್ ಆದುದೋ, ಶ್ರೀಮತ್ ಆದುದೋ, ಊರ್ಜಿತವಾದುದೋ, ಅವೆಲ್ಲವೂ ನನ್ನ ತೇಜಸ್ಸಿನ ಅಂಶದಿಂದ ಆದುದು ಎಂದು ತಿಳಿ" ಎಂದು ಭಗವಂತನು ಹೇಳುತ್ತಾನೆ. ಕೆಲವೆಡೆಗಳಲ್ಲಿ ಭಗವಂತನ ತೇಜಸ್ಸು ಗುಪ್ತ : ಇನ್ನು ಕೆಲವೆಡೆಗಳಲ್ಲಿ ಪ್ರಕಟ. ಪ್ರಕಟ ವಾದವುಗಳಲ್ಲಿ ಮನುಷ್ಯನ ಅಂತಸ್ತಿಗೆ ಮೀರಿ, ಬುದ್ಧಿಗೆ ಎಟಕದಷ್ಟು ದೂರವಾದುದು ವಿಭೂತಿಮತ್ : ತಂದೆತಾಯಿಗಳಿಂದ ಗುರುಹಿರಿಯ ರಿಂದ ಪ್ರಾಪ್ತವಾದುದು ಶ್ರೀಮತ್ : ತನ್ನ ಪೌರುಷದಿಂದ ಸಂಪಾ ದಿಸಿಕೊಂಡಿರುವುದು ಊರ್ಜಿತ. ಇವು ಮೂರೂ ಭಗವತ್ತೇಜವೇ ಹೌದು ರಾಮನಲ್ಲಿ ಈ ಮೂರೂ ಇದೆಯಾಗಿ, ಆತನು ಭಗವಂತನೇ ಎಂದರೆ ತಪ್ಪೇನು. ?

ಆಯಿತು. ಈ ಪ್ರತಿಜ್ಞಾವಾಕ್ಯದಲ್ಲಿರುವ ಅಂಶವು ಮುಂದೆ ರಾಮಾಯಣದಲ್ಲಿ ವ್ಯಕ್ತವಾಗಿದೆಯೋ ಇಲ್ಲವೆ ಎಂಬುದನ್ನು ಪರೀಕ್ಷಿ ಸೋಣ. ಸದ್ಯ ರಾಮಾಯಣದ ಅವತಾರವನ್ನು–ಈ ಮಾತನ್ನು ಉದ್ದೇಶಪೂರ್ವವಾಗಿ ಹೇಳುತ್ತಿದ್ದೇವೆ–ನೋಡೋಣ.

೫. ರಾಮಾಯಣದ ಅವತಾರ

ವಾಲ್ಮೀಕಿಗಳ ಪ್ರಶ್ನಕ್ಕೆ ನಾರದರು ಉತ್ತರವಿತ್ತರು : "ನೀನು ಹೇಳಿದ ಗುಣಗಳೆಲ್ಲ ಒಬ್ಬನಲ್ಲಿ ಇರುವುದು ದುರ್ಲಭವು. ಆದರೂ ಅವೆಲ್ಲ ಉಳ್ಳವನು ಒಬ್ಬನೇ ಒಬ್ಬನುಂಟು ಕೇಳು" ಎಂದು ಇಕ್ಷ್ವಾಕು ವಂಶ ಪ್ರಭವನಾದ ರಾಮನನ್ನು ಕುರಿತು ಹೇಳಿದರು. ರಾಮಾಯಣ

ವನ್ನೆಲ್ಲಾ ಹೇಳಿ "ಇದಂ ಪವಿತ್ರಂ ಪಾಪಘ್ನಂ ಪುಣ್ಯಂ ವೇದೈಶ್ಚ ಸಂಮಿತಂ, ಈ ರಾಮಾಯಣವು ಪವಿತ್ರವಾದುದು: ಪಾಪವನ್ನು ಹರಿಸುವುದು: ಪುಣ್ಯವನ್ನು ದೊರಕಿಸುವುದು: ವೇದಗಳೆಲ್ಲವೂ ಇದರಲ್ಲಿ ಇರುವುವು" ಎಂದರು. ವಾಲ್ಮೀಕಿಗಳು ಅದನ್ನೆಲ್ಲ ಕೇಳಿ ನಾರದರನ್ನು ಬೇಕಾದಹಾಗೆ ಸತ್ಕರಿಸಿ ಬೀಳ್ಕೊಟ್ಟರು.

ಅನಂತರ ವಾಲ್ಮೀಕಿಗಳು ಸ್ನಾನಾರ್ಥವಾಗಿ ತಮಸಾನದೀತೀರಕ್ಕೆ ಹೊರಟರು. ದಾರಿಯಲ್ಲಿ ಒಂದು ಸಂಘಟನೆಯಾಯಿತು. ಬೇಡನೊಬ್ಬನು ಒಂದು ಹಕ್ಕಿಯನ್ನು-ಹೊಡೆದನು. ಅದು ಆಗ ಹೆಣ್ಣಿನೊಡನೆ ಆಟವಾಡುತ್ತಿತ್ತು. ಏಟು ತಿಂದು ಕೆಳಕ್ಕೆಬಿದ್ದು ಸತ್ತು ಹೋಯಿತು. ಗಂಡನನ್ನು ಕಳೆದುಕೊಂಡ ಹೆಣ್ಣು ಹೋ ಎಂದು ಅತ್ತಿತು. ಅದನ್ನು ಕಂಡು ಮುನಿಹೃದಯವು ಕರಗಿತು. ಆ ಹಕ್ಕಿಯನ್ನು ಅಳಿಸಿದ ಬೇಡನಮೇಲೆ ಕೋಪ ಬಂದು "ಈ ಹಕ್ಕಿಯನ್ನು ಹೊಡೆದ ನಿನಗೂ ಆಯುಸ್ಸು ಕ್ಷಯವಾಗಲಿ" ಎಂದು ಶಾಪವೂ ಬಾಯಿಂದ ಹೊರಟೇ ಬಿಟ್ಟಿತು.

ಇಲ್ಲೊಂದು ಸ್ವಾರಸ್ಯವಿದೆ. ಬೇಡನು ಮಾಡಿದ ಅಪರಾಧವಾದರೂ ಏನು ? ಅವನು ಮಾಡಿದುದು ಸಹಜಕರ್ಮ. ಬೇಡನಿಗೆ ಬೇಟೆ ಸಹಜ. ಅದು ಸದೋಷವಿರಬಹುದು. ಆದರೂ ಅದವನಿಗೆ ಸಹಜ. ಇದನ್ನು ವಾಲ್ಮೀಕಿಗಳು ಅರಿಯರೇನು ? ಅಥವಾ ಹಕ್ಕಿಯು ಆಗ ಬೇಡನ ಬಾಣದಿಂದ ತಪ್ಪಿಸಿಕೊಂಡಿದ್ದರೂ ಅನಂತವಾಗಿ ಬದುಕುತ್ತಿತ್ತೇನು ? ಜೀವಿತವೆಲ್ಲ ಶ್ವೋಭಾವ. ಎಂದರೆ ಅಶಾಶ್ವತ. ಅದನ್ನು ವಾಲ್ಮೀಕಿಗಳು ತಿಳಿಯರೇನು ? ಅಲ್ಲದೆ ಮುನಿಯೂ ತಪಸ್ವಿಯೂ ಆದ ವಾಲ್ಮೀಕಿಗಳು ಶಾಂತರೂ ದಾಂತರೂ ಅಲ್ಲವೇನು? ಜಗತ್ತಿನಲ್ಲಿ ನಡೆಯುತ್ತಿರುವ ಅನರ್ಥಗಳನ್ನೆಲ್ಲ ನೋಡಿ, ಆ ಅನರ್ಥಕಾರಿಗಳನ್ನು ಶಾಪದಿಂದ ದಂಡಿಸುವುದೇ ಅವರ ಕಾರ್ಯವಾಗಿತ್ತೇನು ? ಇದಕ್ಕೆ ಉತ್ತರ ವಾಲ್ಮೀಕಿಗಳೇ ರಾಮವಾಕ್ಯದಲ್ಲಿ ಹೇಳಿದ್ದಾರೆ: "ಯದಚಿಂತ್ಯಂತು ತದ್ದೈವಂ। ಋಷಯೋಽಪ್ಯುಗ್ರತಪಸೋ ದೈವೇನಾಭಿಪ್ರಪೀಡಿ

ತಾಃ।ಉತ್ಸೃಜ್ಯ ನಿಯಮಾಂಸ್ತೀವ್ರಾನ್ ಭ್ರಶ್ಯಂತೇ ಕಾಮಮನ್ಯುಭಿಃ– ಯಾವುದು ಅಚಿಂತ್ಯವೋ ಚಿಂತಿಸಿದರೂ ತಿಳಿಯುವುದಿಲ್ಲವೋ ಅದು ದೈವವು : ಉಗ್ರತಪಸ್ವಿಗಳಾದ ಋಷಿಗಳೂ ದೈವಕ್ಕೆ ಸಿಕ್ಕಿ ತಲ್ಲಣಿ ಸುವರು : ತೀವ್ರನಿಯಮಗಳನ್ನೂ ಮೀರಿ ಕಾಮಕ್ರೋಧಗಳ ವಶವಾ ಗುವರು.'' ಇಲ್ಲಿಯೂ ಹಾಗೆಯೇ ಆಯಿತು. ದೈವವು ಅವರಿಂದ ಹಾಗೆ ಮಾಡಿಸಿತು.

ಆ ಶೋಕ, ಅದರ ಫಲವಾದ ಕೋಪ, ಅವರು ಸ್ನಾನಾದಿಗಳನ್ನು ಮಾಡಿದರೂ ಅವರನ್ನು ಬಿಡಲಿಲ್ಲ. ಹಾಗೆಯೇ ತಾವಾಡಿದ ನುಡಿ ಸಮಾಕ್ಷರವಾಗಿ ಹಾಡುವುದಕ್ಕೆ ಅನುಕೂಲವಾಗಿರುವುದೂ ಅವರ ಮನ ಸ್ಸಿಗೆ ಬಂತು. ಇದೇಕೆ ಹೀಗಾಯಿತು ? ಎಂದು ಅವರೂ ಯೋಚಿ ಸಿದರು. ಸ್ನಾನಾಹ್ನಿಕಗಳನ್ನು ಮುಗಿಸಿಕೊಂಡು ಬೇರೆ ವ್ಯವಹಾರ ದಲ್ಲಿ ತೊಡಗಿದರೂ ಆ ಪಕ್ಷಿದಂಪತಿಗಳಲ್ಲಿ ಗಂಡು ಬಿದ್ದುದು: ಹೆಣ್ಣು ಅತ್ತುದು : ಅದಕ್ಕೆ ಕಾರಣನಾದ ವ್ಯಾಧ, ಅವನಿಗೆ ತಾವು ಶಾಪ ಕೊಟ್ಟುದು ಮನಸ್ಸಿನಲ್ಲಿ ನಿಂತಿದೆ.

ಹೀಗಿರುವಾಗ ಚತುರ್ಮುಖನು ಅವರ ಆಶ್ರಮಕ್ಕೆ ಬಂದನು. ವಾಲ್ಮೀಕಿಗಳು ಸಂಭ್ರಮದಿಂದ ಆತನನ್ನು ಸ್ವಾಗತಿಸಿ ಯಥಾವಿಧಿ ಯಾಗಿ ಪೂಜಿಸಿ, ಆತನ ಅಪ್ಪಣೆ ಪಡೆದು ತಾವೂ ಕುಳಿತರು. ಬ್ರಹ್ಮ ನೆಂದರೆ ಸಾಮಾನ್ಯನೇ ? ಆತನ ಸಮ್ಮುಖದಲ್ಲಿರುವಾಗ ಸಹಜವಾಗಿ ವಾಲ್ಮೀಕಿಗಳ ಮನಸ್ಸು ಏಕಾಗ್ರವಾಗಬೇಕಾಗಿತ್ತು. ಆಗಲಿಲ್ಲ. ಹಿಂದಿನ ಚಿಂತೆಯನ್ನು ಹಿಡಿದೇ ಇದೆ. “ಪಾಪಾತ್ಮನಾ ಕೃತಂ ಕಷ್ಟಂ ವೈರಗ್ರಹಣಬುದ್ಧಿನಾ । ಯಸ್ತಾದೃಶಂ ಚಾರುರವಂ ಕ್ರೌಂಚಂ ಹನ್ಯಾದಕಾರಣಾತ್। ಶೋಚನ್ನೇವ ಮುಹುಃ ಕ್ರೌಂಚೀ ಮುಪಶ್ಲೋಕಮಿಮಂ ಪುನಃ। ಜಗಾವಂತರ್ಗತಮನಾ ಭೂತ್ವಾ ಶೋಕ ಪರಾಯಣಃ ‖–ಆ ಪಾಪಿಯು ಎಂಥಾ ಕಾರ್ಯ ವನ್ನು ಮಾಡಿದ ? ಅವನಿಗೇಕೆ ಹಕ್ಕಿಯ ಮೇಲೆ ಅಷ್ಟು ವೈರ ! ಆ ಹಕ್ಕಿಯು ಎಷ್ಟು ಮುದ್ದಾಗಿ ನುಡಿಯುತ್ತಿತ್ತು ! ಅಂಥಾ ಹಕ್ಕಿಯನ್ನು

ಅಕಾರಣವಾಗಿ ಕೊಂದನಲ್ಲ! ಆ ಹೆಣ್ಣು ಹಕ್ಕಿ ಎಷ್ಟು ಅತ್ತಿತು! ಅಯ್ಯೋ ಎಂದು ಶೋಕಪರಾಯಣನಾಗಿ ತನ್ನ ಬಾಯಿಂದ ಹೊರಟ ಶ್ಲೋಕವನ್ನು ಮತ್ತೆ ಮತ್ತೆ ಮನಸ್ಸಿನಲ್ಲಿ ನುಡಿಯುತ್ತಿದ್ದನು.

ಅದನ್ನರಿತ ಚತುರ್ಮುಖನು ನಕ್ಕು ಆತನಿಗೆ ಹೀಗೆ ಹೇಳಿದನು : "ತಮುವಾಚ ತತೋ ಬ್ರಹ್ಮ ಪ್ರಹಸ್ಯ ಮುನಿಪುಂಗವಂ। ಶ್ಲೋಕ ಏವ ತ್ವಯಾ ಬದ್ಧೋ ನಾತ್ರ ಕಾರ್ಯಾ ವಿಚಾರಣಾ। ಮಚ್ಛಂದಾದೇವ ತೇ ಬ್ರಹ್ಮನ್ ಪ್ರವೃತ್ತೇಯಂ ಸರಸ್ವತೀ॥"—ಎಲೈ ಮುನಿಪುಂಗವ, ಚಿಂತಿಸದಿರು. ನಿನ್ನ ಬಾಯಲ್ಲಿ ಬಂದುದು ಶ್ಲೋಕವಾಯಿತು. ಈ ಕಾವ್ಯ ಸರಸ್ವತಿಯು ನನ್ನ ಇಚ್ಛೆಯಂತೆ ನಿನ್ನ ಬಾಯಿಂದ ಬಂದಳು. ಇನ್ನುಮುಂದೆ ನೀನು ಮಾಡಬೇಕಾದ ಕೆಲಸವನ್ನೂ ಹೇಳುವೆನು ಕೇಳು. "ರಾಮಸ್ಯ ಚರಿತಂ ಕೃತ್ಸ್ನಂ ಕುರು ತ್ವಮೃಷಿಸತ್ತಮ। ಧರ್ಮಾತ್ಮನೋ ಗುಣವತೋ ಲೋಕೇ ರಾಮಸ್ಯ ಧೀಮತಃ। ವೃತ್ತಂ ಕಥಯ ವೀರಸ್ಯ ಯಥಾ ತೇ ನಾರದಾಚ್ಛ್ರುತಂ। ರಹಸ್ಯಂ ಚ ಪ್ರಕಾಶಂ ಚ ಯದ್ವೃತ್ತಂ ತಸ್ಯ ಧೀಮತಃ—ಧರ್ಮಾತ್ಮನೂ, ಗುಣವಂತನೂ, ಧೀಮಂತನೂ, ವೀರನೂ ಆದ ರಾಮನ ಚರಿತ್ರೆಯನ್ನು ನಾರದರಿಂದ ನೀನು ಕೇಳಿದಂತೆ, ಪೂರ್ಣವಾಗಿ ವಿರಚಿಸು. ಅದರಲ್ಲಿ ರಹಸ್ಯವೂ ಇರಲಿ: ಅದು ಪ್ರಕಾಶವೂ ಆಗಿರಲಿ. ಆತನ ಚರಿತ್ರೆಯನ್ನು ಚಿತ್ರಿಸು. ರಹಸ್ಯವನ್ನು ನಾನೆಂತು ಚಿತ್ರಿಸಲಿ ಎನ್ನಬೇಡ. ಯಚ್ಚಾಪ್ಯವಿದಿತಂ ಸರ್ವಂ ವಿದಿತಂ ತೇ ಭವಿಷ್ಯತಿ। ನ ತೇ ವಾಗನೃತಾ ಕಾವ್ಯೇ ಕಾಚಿದತ್ರ ಭವಿಷ್ಯತಿ—ಇತರರಿಗೆ ತಿಳಿಯದುದೂ ನಿನಗೆ ತಿಳಿಯುವುದು! ಈ ಕಾವ್ಯದಲ್ಲಿ ನೀನು ಆಡಿದ ಮಾತು ಎಂದಿಗೂ ಸುಳ್ಳಾಗುವುದಿಲ್ಲ: ಎಂದರೆ ನಿನ್ನ ಬಾಯಿಂದ ಸುಳ್ಳು ಬರುವುದಿಲ್ಲ. ಈ ಕಾವ್ಯವು ಸತ್ಯವಾಕ್ಯಾದುದರಿಂದ ಮಂತ್ರವಾಗುವುದು. ನೀನು ಬರೆದ ಶ್ಲೋಕಬದ್ಧವೂ ಮನೋರಮವೂ ಆದ ರಾಮಕಥೆಯು ಶಾಶ್ವತವಾಗಿರುವುದು. ಯಾವತ್ ಸ್ಥಾಸ್ಯಂತಿ ಗಿರಯಃ ಸರಿತಶ್ಚ ಮಹೀತಲೇ। ತಾವದ್ರಾಮಾಯಣಕಥಾ ಲೋಕೇಷು ಪ್ರಚರಿಷ್ಯತಿ॥

ಎಲ್ಲಿಯವರೆಗೆ ಪರ್ವತಗಳೂ ನದಿಗಳೂ ಇರುವುವೋ ಎಂದರೆ, ಪರ್ವತಗಳಂತಹ ಸ್ಥಾವರಗಳೂ ನದಿಗಳಂತಹ ಜಂಗಮಗಳೂ ಇರುವುವೋ ಅಲ್ಲಿಯವರೆಗೆ ನಿನ್ನ ರಾಮಾಯಣ ಕಥೆಯು ಲೋಕದಲ್ಲಿ ಪ್ರತಿಷ್ಠಿತವಾಗಿರುವುದು "—ಎಂದು ವರವನ್ನು ಕೊಟ್ಟು ಚತುರ್ಮುಖನು ಅಂತರ್ಧಾನವನ್ನು ಹೊಂದಿದನು. ಇದೆಲ್ಲವನ್ನು ನೋಡಿ ಕೇಳಿದ ವಾಲ್ಮೀಕಿಗಳು ವಿಸ್ಮಯಾವಿಷ್ಟರಾದರು. ಅವರ ಪವಿತ್ರ ಬುದ್ಧಿಯಲ್ಲಿ "ಸಂಪೂರ್ಣ ರಾಮಾಯಣವನ್ನು ಬರೆಯುವೆನು" ಎಂಬ ಸಂಕಲ್ಪವು ಮೂಡಿತು.

ಮುಂದಿನ ಕಥೆಯನ್ನು ಕೇಳಿ: "ಶ್ರುತ್ವಾ ವಸ್ತು ಸಮಗ್ರಂ ತದ್ಧರ್ಮಾತ್ಮಾ ಧರ್ಮಸಂಹಿತಂ। ಉಪಸ್ಪೃಶ್ಯೋದಕಂ ಸಮ್ಯಗ್ ಮುನಿಃ ಸ್ಥಿತ್ವಾ ಕೃತಾಂಜಲಿಃ। ಪ್ರಾಚೀನಾಗ್ರೇಷು ದರ್ಭೇಷು ಧರ್ಮೇಣಾವೇಕ್ಷತೇ ಗತಿಂ॥—ಧರ್ಮದಿಂದ ಕೂಡಿರುವ ಆ ಕಥೆಯನ್ನೆಲ್ಲಾ ಕೇಳಿ ಧರ್ಮಾತ್ಮನಾದ ಆತನು, ಸರಿಯಾಗಿ ಸ್ನಾನಮಾಡಿ, ಪೂರ್ವಾಭಿಮುಖವಾಗಿ ದರ್ಭೆಗಳನ್ನು ಹಾಕಿ ಅದರ ಮೇಲೆ ಕೃತಾಂಜಲಿಯಾಗಿ ಕುಳಿತು ಧರ್ಮಷಾಗಿ ಮುಂದೇನುಮಾಡಬೇಕೆಂದು ಯೋಚಿಸಿದನು."

"ಕಾಮಾರ್ಥಗುಣಸಂಯುಕ್ತಂ ಧರ್ಮಾರ್ಥ ಗುಣವಿಸ್ತರಂ। ಸಮುದ್ರಮಿವ ರತ್ನಾಢ್ಯಂ ಸರ್ವಶ್ರುತಿಮನೋಹರಂ। ರಘುವಂಶಸ್ಯ ಚರಿತಂ ಚಕಾರ ಭಗವಾನ್ನೃಷಿಃ।—ಕಾಮಾರ್ಥವೆಂದರೆ ಈ ಲೋಕದ ಭೋಗಭಾಗ್ಯಗಳಿಂದ ಕೂಡಿದ ಪ್ರೇಯಸ್ಸು–ಯಾವುದನ್ನು ಮನಸ್ಸು ಬೇಕು ಬೇಕು ಎನ್ನುವುದೋ ಅದು: ಧರ್ಮಾರ್ಥವೆಂದರೆ ಪರಲೋಕದ ಭೋಗಭಾಗ್ಯಗಳು, ಯಾವುದನ್ನು ಪಡೆಯಲು ಈ ಲೋಕದ ಸುಖಗಳನ್ನು ತಿರಸ್ಕರಿಸಲೂ ಮನಸ್ಸು ಸಿದ್ಧವಾಗುವುದೋ ಅದು: ಮತ್ತು ಯಾವುದು ಮನಸ್ಸನ್ನು ಶುದ್ಧಮಾಡಿ ಈ ಲೋಕದಿಂದ ಆಚೆಗೆ ಹೋಗುವುದೆಂಬ ಸಹಜಾವಸ್ಥೆಯನ್ನು ಕೊಡಬಲ್ಲುದೋ ಆ ಧರ್ಮ ಎಂದರೆ ಶ್ರೇಯಸ್ಸು: ಈ ಎರಡನ್ನೂ ಸೇರಿಸಿಕೊಂಡು ಶ್ರೀ ರಾಘವನ

ಕಥೆಯನ್ನು ವಿರಚಿಸಿದನು: ಅದು ಸಮುದ್ರದಂತೆ ರತ್ನಗಳಿಂದ ಕೂಡಿತ್ತು: ಸರ್ವಶ್ರುತಿಗಳೂ ವೇದಗಳೂ ಅದನ್ನು ಸರಿಸರಿಯೆಂದು ಒಪ್ಪಿಕೊಂಡುವು: ಕೇಳಿದವರಿಗೆಲ್ಲಾ ಅದು ಮನೋಹರವಾಗಿತ್ತು."

ಇಲ್ಲಿ ನೋಡಿ ಎಂತಹ ವಿಚಿತ್ರವಾದ ಅರ್ಥವಿದೆ! ಹಿಂದೆ ರಹಸ್ಯಂ ಎಂದು, ಇಲ್ಲಿ ಸಮುದ್ರಮಿವ ರತ್ನಾಢ್ಯಂ, ಸರ್ವಶ್ರುತಿಮನೋಹರಂ;—ಸಮುದ್ರದಲ್ಲಿರುವ ರತ್ನಗಳು ಸಿಕ್ಕಬೇಕಾದರೆ ಮುಳುಗಬೇಕು. ಈ ರಾಮಾಯಣವನ್ನು ಮೇಲಿಂದ ನೋಡಿದರೆ ಕಾವ್ಯ: ಹೌದು: ಆದರೆ ತದ್ಬುದ್ಧಯಃ ತದಾತ್ಮಾನಃ ತನ್ನಿಷ್ಠಾಃ ತತ್ಪರಾಯಣಾಃ ಆಗುವವರೆಗೆ, ಅವು ಹೇಗೆ ಸಿಕ್ಕಾವು? ಸಮುದ್ರವನ್ನು ನೋಡುತ್ತ, ಅಲೆಗಳನ್ನು ಎಣಿಸುತ್ತಾ ಕುಳಿತಿದ್ದರೆ, ತಳದಲ್ಲಿರುವ ರತ್ನಗಳು ಸಿಕ್ಕಾವೆ? ಎಲ್ಲವನ್ನೂ ಬಿಡಬೇಕು: ಮೃತ್ಯುವಿಗೂ ಹೆದರದೆ ಧೈರ್ಯದಿಂದ ಮುಳುಗಬೇಕು. ಆಗಲೂ ಅದೃಷ್ಟವಿದ್ದರೆ ರತ್ನ! ಆದರೆ, ಸಿಕ್ಕಿದರೆ ಬೇಕುಬೇಕಾದುದನ್ನೆಲ್ಲ ಕೊಡಲು ಒಂದು ರತ್ನ ಸಾಕು. ಅದಾದ ಮೇಲೆ, ಸರ್ವಶ್ರುತಿ ಮನೋಹರಂ. ಶ್ರುತಿ ಎಂದರೆ ಕಿವಿಯೂ ಹೌದು: ವೇದಗಳೂ ಹೌದು. ಶ್ರುತಿಮನೋಹರವೆಂದರೆ ಕಿವಿ ಮೆಚ್ಚು ಎಂದು ಸಾಮಾನ್ಯವಾದ ಅರ್ಥ ಮಾಡುವುದೇ? ರಸಾಯನವು ನಾಲಗೆ ಮೆಚ್ಚಲ್ಲ: ಆಯುಸ್ಸನ್ನು ಹೆಚ್ಚಿಸುವ ಸಾಧನ. ಹಾಗೆ ರಾಮಾಯಣವು ಬರಿಯ ಕಿವಿ ಮೆಚ್ಚು ಮನಮೆಚ್ಚಲ್ಲ. ಅದಷ್ಟೇ ಆದರೆ ಪವಿತ್ರಂ, ಪಾಪಘ್ನಂ, ಎಂತಾದೀತು? ಹಿಂದೆ ನಾರದರು ಹೇಳಿದ ವೇದೈಶ್ಚ ಸಂಮಿತಂ, ಎಂಬ ಮಾತೂ ಧರ್ಮ ಸಂಹಿತಂ ವಸ್ತು, ಎಂಬ ಮಾತೂ ಇಲ್ಲಿಗೆ ಅನ್ವಯಿಸಿಕೊಂಡು ವೇದವೆಂದೇ ಅರ್ಥ ಮಾಡಿದರೆ ಎಷ್ಟು ಚೆನ್ನ!

ರಾಮಾಯಣದ ರಚನೆಯಾಯಿತು: ಅದು ಪಾಠ್ಯವೂ ಆಯಿತು: ಗೇಯವೂ ಆಯಿತು. ಅದನ್ನು ರೂಪಲಕ್ಷಣಸಂಪನ್ನರೂ ಮಧುರ ಸ್ವರಶಾಲಿಗಳೂ ಆದ ಕುಶಲವರು ಕಲಿತು ಋಷಿಸಭೆಗಳಲ್ಲಿ

ಹಾಡಿದರು. ಹಾಗೆ ಹಾಡಿಸಿದುದರ ಉದ್ದೇಶವಾದರೂ ಏನು? ವೇದೋಪಬ್ರುಂಹಣಾರ್ಥಾಯ. ವೇದಗಳಲ್ಲಿ ರಹಸ್ಯವಾಗಿ ಥಟ್ಟನೆ ಗೋಚರವಾಗದಿರುವ ಅರ್ಥವನ್ನು ಉಪಬ್ರುಂಹಣ ಮಾಡುವುದಕ್ಕೆ: ಉಪಬ್ರುಂಹಣವೆಂದರೆ ದೊಡ್ಡದು ಮಾಡಿ ತೋರಿಸುವುದು. ಧರ್ಮ್ಯ ಎಂದರೆ ಧರ್ಮಸಮ್ಮತವಾದ ಆ ಆಖ್ಯಾನವನ್ನು ಎಲ್ಲರೂ ಕೇಳಿದರು. ಕೇಳಿದವರೆಲ್ಲರೂ "ಸರಿ ಸರಿ" ಎಂದರು. "ವೇದವೇದ್ಯೇ ಪರೇ ಪುಂಸಿ ಜಾತೇ ದಶರಥಾತ್ಮಜೇ ॥ ವೇದಃ ಪ್ರಾಚೇತಸಾದಾಸೀತ್ ಸಾಕ್ಷಾದ್ರಾಮಾಯಣಾತ್ಮನಾ—ವೇದವೇದ್ಯನಾದ ಪರಮಾತ್ಮನು ದಶರಥನ ಮಗನಾಗಿ ಹುಟ್ಟಿದನು: ವೇದವು ವಾಲ್ಮೀಕಿಯಿಂದ ರಾಮಾಯಣವಾಯಿತು" ಎಂದು ಹೊಗಳಿದರು.

ರಾಮಾಯಣದ ಕೀರ್ತಿಯು ಹಬ್ಬಿತು: ಶ್ರೀರಾಮನು ತನ್ನ ಸಭೆಗೆ ರಾಮಾಯಣದ ಕವಿಯನ್ನೂ ರಾಮಾಯಣವನ್ನು ಹಾಡುವ ಬಾಲಕರನ್ನೂ ಕರೆಸಿಕೊಂಡನು ವೇದಾತ್ಮರಾದ ಋಷಿಗಳು ಸಂತೋಷಪಟ್ಟಂತೆಯೇ ಲೌಕಿಕರಾದ ರಾಜಸಭಾಸದಸ್ಯರೂ ಅದನ್ನು ಕೇಳಿ ಆನಂದಪಟ್ಟರು. "ತೌ ಚಾಪಿ ಮಧುರಂ ವ್ಯಕ್ತಂ ಸ್ವಚಿತ್ತಾ[illegible] ಯತನಿಃಸ್ವನಂ। ತಂತ್ರೀಲಯವದತ್ಯರ್ಥಂ ವಿಶ್ರುತಾರ್ಥ ಮಗಾ[illegible] ಯತಾಂ॥ ಹ್ಲಾದಯತ್ಸರ್ವಗಾತ್ರಾಣಿ ಮನಾಂಸಿ ಹೃದಯಾನಿ [illegible] ಶ್ರೋತ್ರಾಯುಚ ಸುಖಂ ಗೇಯಂ ತದ್ಬಭೌ ಜನಸಂಸದಿ" ಆ ಕುಶ ಲವರು ಮಧುರವಾಗಿ ಸ್ಪಷ್ಟವಾಗಿ ಸಮವಾದ ಶ್ರುತಿಗೆ ಹೊಂದಿಕೊಂಡ ನುಡಿಯುತ್ತಿರುವ ತಂತಿಯಂತೆ, ಎಲ್ಲರಿಗೂ ಗೊತ್ತಿರುವ ವಿಶ್ರುತ ವಾದ ಅರ್ಥವಾಗಿದ್ದರೂ, ಅಲ್ಲಿಂದಾಚೆಗೂ ಒಯ್ಯುವ ಅರ್ಥವುಳ್ಳ ಆ ಕಾವ್ಯವನ್ನು ಹಾಡಿದರು: ಆ ಜನಸಭೆಯಲ್ಲಿ ಕಿವಿಗೆ ಇಂಪಾಗಿದ್ದ ಆ ಗೇಯಕಾವ್ಯವನ್ನು ಕೇಳುತ್ತ ಕೇಳುತ್ತ ಆ ಕೇಳಿದವರ ದೇಹ ಮನಸ್ಸು ಬುದ್ಧಿಗಳೆಲ್ಲವೂ ತನ್ಮಯವಾಗಿ ಸುಖಿಸಿದುವು." ಅತ್ಯರ್ಥ ವಿಶ್ರುತಾರ್ಥಂ ಆ ಎರಡೂ ಮಾತು ಗಮನಿಸಿ. ರಾಮಾಯಣ ಯಾರಿಗೆ ಗೊತ್ತಿಲ್ಲ? ಅದು ವಿಶ್ರುತಾರ್ಥ: ರಾಮಾಯಣವನ್ನು

ಯಾರು ಬಲ್ಲರು ! ಅದು ಅತ್ಯರ್ಥ. ಅರ್ಥವಾಗುವುದಕ್ಕಿಂತ ಆಚೆಯದು.

೬. ರಾಮಾಯಣ

ರಾಮಾಯಣವು ಆರು ಕಾಂಡಗಳುಳ್ಳ ಗ್ರಂಥ. ಆದರೂ ಉತ್ತರಕಾಂಡವನ್ನೂ ಇದರಲ್ಲಿ ಸೇರಿಸಿಕೊಳ್ಳುವುದು ವಾಡಿಕೆಯಾಗಿದೆ. ಸುಮಾರು ಒಂದು ಸಾವಿರ ವರ್ಷಗಳ ಹಿಂದಿನ ಭವಭೂತಿ ಎಂಬ ಮಹಾ ಕವಿಯು ಉತ್ತರಕಾಂಡದ ಕಥೆಯನ್ನು ಉತ್ತರರಾಮ ಚರಿತ ಎಂಬ ಹೆಸರಿನಿಂದ ನಾಟಕವಾಗಿ ಬರೆದಿದ್ದಾನೆ.

ಈ ಆರು ಕಾಂಡಗಳ ಕಥೆಯಲ್ಲಿ ನಾಲ್ಕು ಘಟ್ಟಗಳು. ಒಂದೊಂದು ಘಟ್ಟಕ್ಕೆ ಒಂದೊಂದು ಪಟ್ಟಾಭಿಷೇಕ. ಮೊದಲನೆಯದು ಪಾದುಕಾಪಟ್ಟಾಭಿಷೇಕ : ಎರಡನೆಯದು ಸುಗ್ರೀವ ಪಟ್ಟಾಭಿಷೇಕ : ಮೂರನೆಯದು ವಿಭೀಷಣ ಪಟ್ಟಾಭಿಷೇಕ : ನಾಲ್ಕನೆಯದು ಶ್ರೀರಾಮ ಪಟ್ಟಾಭಿಷೇಕ. ನಾವು ಈ ನಾಲ್ಕು ಘಟ್ಟಗಳಲ್ಲಿ ರಾಮಾಯಣವನ್ನು ಪರಿಚಯ ಮಾಡಿಕೊಂಡು ಹೋಗೋಣ.

ಕೋಸಲ ದೇಶದಲ್ಲಿ ಸರಯೂ ತೀರದಲ್ಲಿ ಅಯೋಧ್ಯೆಯೆಂಬ ನಗರಿಯುಂಟು. ಮಹರ್ಷಿಕಲ್ಪನಾದ ರಾಜರ್ಷಿ ದಶರಥನು ಅಲ್ಲಿ ರಾಜ್ಯವಾಳುತ್ತಿದ್ದನು. ಆತನು ಅಶ್ವಮೇಧವನ್ನು ಮಾಡಿ ನಾಲ್ವರು ಮಕ್ಕಳನ್ನು ಪಡೆದನು. ಅದರಲ್ಲಿ ಧರ್ಮಪತ್ನಿಯಾದ ಕೌಸಲ್ಯಾದೇವಿಯ ಮಗನಾಗಿ, ಎಲ್ಲರಿಗೂ ಹಿರಿಯನಾದವನೇ ಶ್ರೀರಾಮನು. "ಕೌಸಲ್ಯಾಜನಯದ್ರಾಮಂ ಸರ್ವಲಕ್ಷಣ ಸಂಯುತಂ। ವಿಷ್ಣೋರರ್ಧಂ ಮಹಾಭಾಗಂ ಪುತ್ರಮೈಕ್ಷ್ವಾಕ ವರ್ಧನಂ—ವಿಷ್ಣುವಿನ ಅರ್ಧಭಾಗವನ್ನು ಕೌಸಲ್ಯೆಯು ರಾಮನಾಗಿ ಹೆತ್ತಳು. ವಿಷ್ಣುವಿನ ನಾಲ್ಕನೆಯ ಭಾಗದಿಂದ ಭರತನು ಕೈಕೆಯೀ ಗರ್ಭದಲ್ಲಿ ಜನಿಸಿದನು. ಉಳಿದ ಕಾಲುಭಾಗದಿಂದ ಲಕ್ಷ್ಮಣಶತ್ರುಘ್ನರು ಜನಿಸಿದರು." ರಾಮಾಯಣದಲ್ಲಿ ರಾಮಾದಿಗಳಿಗೆ ವಿದ್ಯಾಭ್ಯಾಸವು ಎಲ್ಲಿ ಯಾರಲ್ಲಿ ನಡೆಯಿತು

ಎಂಬುದನ್ನು ಹೇಳಿಲ್ಲ: ಹಾಗೆಯೆ ಬಾಲಲೀಲೆಗಳ ವರ್ಣನೆಯೂ ಇಲ್ಲ.

ಒಂದು ದಿನ ವಿಶ್ವಾಮಿತ್ರರು ದಶರಥನನ್ನು ಕಾಣಲು ಬಂದರು. ದಶರಥನಿಗೆ ಪರಮಹರ್ಷವಾಯಿತು. "ಯಥಾಮೃತಸ್ಯ ಸಂಪ್ರಾಪ್ತಿರ್ಯಥಾ ವರ್ಷಮನೂದಕೇ—ಅಮೃತವು ಸಿಕ್ಕಿದಂತಾಯಿತು: ನೀರೇ ಇಲ್ಲದ ದೇಶದಲ್ಲಿ ಮಳೆಗರೆದಂತಾಯಿತು. ಎಲೈ ಬ್ರಹ್ಮರ್ಷಿಯೇ, ಕಂಚತೇ ಪರಮಂ ಕಾಮಂ ಕರೋಮಿ ಕಿಮು ಹರ್ಷಿತಃ—ನಾನು ಬಹಳ ಸಂತೋಷಪಟ್ಟಿರುವೆನು. ನಿನ್ನ ಯಾವ ಆಶೆಯನ್ನು ನೆರವೇರಿಸಲಿ? ಬ್ರೂಹಿ ಯತ್ಪ್ರಾರ್ಥಿತಂ ತುಭ್ಯಂ ಕಾರ್ಯವಾಗಮನಂ ಪ್ರತಿ। ಕಾರ್ಯಸ್ಯ ನ ವಿಮರ್ಶಂ ಚ ಗಂತುಮರ್ಹಸಿ ಕೌಶಿಕ—ನೀನು ಏನನ್ನು ಕೇಳಬೇಕೆಂದಿರುವೆ ಹೇಳು: ನೀನು ಯಾವ ಕಾರ್ಯಕ್ಕಾಗಿ ಬಂದಿರುವೆ ಹೇಳು: ಆ ಕಾರ್ಯವನ್ನು ಕುರಿತು, ಕೌಶಿಕ, ವಿಚಾರವನ್ನೂ ಮಾಡಬೇಡ. ಕರ್ತಾ ಚಾಹಮಶೇಷೇಣ ದೈವತಂ ಹಿ ಭವಾನ್ ಮಮ ॥—ನೀನು ನನ್ನ ದೇವರು. ನೀನು ಹೇಳಿದ ಕೆಲಸವನ್ನು ಪೂರ್ಣವಾಗಿ ಮಾಡುವೆನು. ಮಮ ಚಾಯಮನುಪ್ರಾಪ್ತೋ ಮಹಾನಭ್ಯುದಯೋ ದ್ವಿಜ। ತವಾಗಮನಜಃ ಕೃತ್ಸ್ನೋ ಧರ್ಮಶ್ಚಾನುತ್ತಮೋದ್ವಿಜ ॥ ನೀನು ಬಂದುದು ನನಗೆ ಮಹಾ ಅಭ್ಯುದಯವಾಯಿತು: ದೊಡ್ಡ ಧರ್ಮದ ಗಂಟು ಸಿಕ್ಕಿದಂತಾಯಿತು." ಎಂದನು.

ವಿಶ್ವಾಮಿತ್ರರು ಹೇಳಿದರು: "ನಾನೊಂದು ಸಿದ್ಧಿಗಾಗಿ ನಿಯಮವನ್ನು ಹಿಡಿದಿರುವೆನು. ಆ ನಿಯಮವು ಪೂರ್ಣವಾಗಿ, ಸಿದ್ಧಿಯು ಕರಗತವಾಗುವುದರೊಳಗಾಗಿ ಮಾರೀಚ ಸುಬಾಹು ಎಂಬ ಇಬ್ಬರು ರಾಕ್ಷಸರು ಬಂದು ವಿಘ್ನವನ್ನು ಮಾಡುತ್ತಿರುವರು. ನಾನು ನಿಯಮದಲ್ಲಿರುವಾಗ ಕೋಪಮಾಡಿಕೊಂಡು ಅವರನ್ನು ಧ್ವಂಸಮಾಡಲು ಸಾಧ್ಯವಿಲ್ಲ: ಆ ನಿಯಮದಲ್ಲಿರುವಾಗ ಶಾಪವನ್ನೂ ಕೊಡುವಂತಿಲ್ಲ. ಅದರಿಂದ, ಆ ರಾಕ್ಷಸರನ್ನು ವಿನಾಶಮಾಡಲು ನಿನ್ನ

ಜ್ಯೇಷ್ಠಪುತ್ರನೂ ಶೂರನೂ ಆದ ರಾಮನನ್ನು ಕಳುಹಿಸಿಕೊಡು. ಆತನು ದಿವ್ಯ ತೇಜಸ್ಸುಳ್ಳವನು. ನಾನೂ ಕಾವಲಿಗಿರುವೆನು. ಆತನಿಗೆ ಬಹುರೂಪವಾದ ಶ್ರೇಯಸ್ಸನ್ನು ದೊರಕಿಸಿಕೊಡುವೆನು. ಶ್ರೀರಾಮನಿಗೆ ಮೂರು ಲೋಕದಲ್ಲಿಯೂ ಖ್ಯಾತಿಯು ಬರುವುದು. ಅಲ್ಲದೆ ನೀನು ಶ್ರೀರಾಮನು ಸಾಮಾನ್ಯನೆಂದು ತಿಳಿಯಬೇಡ. ಅಹಂ ವೇದ್ಮಿ ಮಹಾತ್ಮಾನಂ ರಾಮಂ ಸತ್ಯಪರಾಕ್ರಮಂ ವಸಿಷ್ಠೋऽಪಿ ಮಹಾತೇಜಾ ಯೇ ಚೇಮೇ ತಪಸಿ ಸ್ಥಿತಾಃ—ಸತ್ಯಪರಾಕ್ರಮನಾದ ಶ್ರೀರಾಮನು ಮಹಾತ್ಮನು. ಅದನ್ನು ನಾನು ಬಲ್ಲೆನು. ಈ ವಸಿಷ್ಠಮಹರ್ಷಿಯು ಬಲ್ಲನು. ತಪಸ್ಸಿನಲ್ಲಿಯೇ ಇರುವ ಈ ಮಹರ್ಷಿಗಳೂ ಬಲ್ಲರು" ಎಂದನು. ರಾಮನನ್ನು ಬಲ್ಲವರು ಕೆಲವರು ಮಾತ್ರ: ಆತನನ್ನು ಅರಿಯಬೇಕಾದರೆ ತಪಸಿಸ್ಥಿತರಾಗಬೇಕು. ಅದು ವಿಶ್ವಾಮಿತ್ರರ ಮಾತು.

ಆ ಮಾತು ಕೇಳಿ ದಶರಥನು ಅಸ್ಥಿರನಾದನು. ಒಂದು ಗಳಿಗೆ ಮೈಮರೆತನು: ಮತ್ತೆ ಎಚ್ಚರಗೊಂಡು ಅಳುತ್ತ ಹೇಳಿದನು: ಊನಷೋಡಶವರ್ಷೋ ರಾಮಃ—ನನ್ನ ರಾಮನಿಗೆ ಹದಿನಾರು ವರ್ಷವೂ ತುಂಬಿಲ್ಲ. ನ ಯುದ್ಧ ಯೋಗ್ಯತಾಮಸ್ಯ ಪಶ್ಯಾಮಿ ಸಹ ರಾಕ್ಷಸೈಃ—ಈತನಿಗೆ ಇನ್ನೂ ರಾಕ್ಷಸರೊಡನೆ ಯುದ್ಧ ಮಾಡುವ ಯೋಗ್ಯತೆಯೂ ಇಲ್ಲ. ನ ರಾಮಂ ನೇತು ಮರ್ಹಸಿ—ಇಂತಹ ರಾಮನನ್ನು ನೀನು ಕರೆದುಕೊಂಡುಹೋಗುವುದೇ ?" ಎಂದು ಅತ್ತುಕೊಂಡನು. ಮತ್ತೆ "ಆ ರಾಕ್ಷಸರು ರಾವಣನ ಕಡೆಯವರು" ಎಂದು ತಿಳಿದ ಮೇಲಂತೂ ಆತನಿಗೆ ಉಸಿರೇ ಅಳಿದಂತಾಯಿತು. ಏನಾದರೂ ಆಗಲಿ ಎಂದು "ಬಾಲಂ ಮೇ ತನಯಂ ಬ್ರಹ್ಮನ್ನೈವ ದಾಸ್ಯಾಮಿ ಪುತ್ರಕಂ—ನನ್ನ ಮಗನು ಇನ್ನೂ ಹುಡುಗ. ಅವನನ್ನು ಕೊಡುವುದಿಲ್ಲ" ಎಂದೇಬಿಟ್ಟನು ಮೊದಲು ಆಡಿದ ಮಾತೆಲ್ಲಿ ? ಈಗ ಸ್ನೇಹಪರ್ಯಾಕುಲನಾಗಿ ಆಡಿದ ಈ ಮಾತೆಲ್ಲಿ ? ಅಬ್ಬಾ ! ಪುತ್ರಸ್ನೇಹವೆಂಬುದು ಎಂಥದು !

ಆಗ ಆತನ ಕುಲಗುರುಗಳಾದ ವಸಿಷ್ಠರು ಮಾತನಾಡಿದರು: "ಇಕ್ಷ್ವಾಕೂಣಾಂ ಕುಲೇ ಜಾತಃ ನ ಧರ್ಮಂ ಹಾತುಮರ್ಹಸಿ— ನೀನು ಇಕ್ಷ್ವಾಕುಗಳ ಕುಲದಲ್ಲಿ ಹುಟ್ಟಿದವನು. ಧರ್ಮವನ್ನು ಬಿಡುವುದು ಎಂದರೇನು? ಸಂಶ್ರುತ್ಯೈವಂ ಕರಿಷ್ಯಾಮೀತ್ಯಕುರ್ವಾಣಸ್ಯ ರಾಘವ। ಇಷ್ಟಾಪೂರ್ತವಧೋ ಭೂಯಾತ್ತಸ್ಮಾದ್ರಾಮಂ ವಿಸರ್ಜಯ—ಹೀಗೆ ಮಾಡುವೆನು ಎಂದು ಹೇಳಿಯೂ ಮಾಡದಿದ್ದರೆ ಅವನ ಇಷ್ಟಾಪೂರ್ತಗಳೆಲ್ಲವೂ ನಾಶವಾಗುವುವು. ಅದರಿಂದ ರಾಮನನ್ನು ಕಳುಹಿಸು" ಎಂದು ಗುಡುಗಿದರು. (ಇಷ್ಟವೆಂದರೆ ಯಾಗಾದಿಗಳು: ಪೂರ್ತ ಎಂದರೆ ಕೆರೆಕಟ್ಟೆ ಮೊದಲಾದ ಪುಣ್ಯಕಾರ್ಯಗಳು) ಅಷ್ಟೇ ಅಲ್ಲ; ಮತ್ತೆ ಹೇಳಿದರು: "ನಿನ್ನ ಮಗನು ಅಸ್ತ್ರಗಳನ್ನು ಬಲ್ಲನೋ ಇಲ್ಲವೋ ಅದಿರಲಿ: ರಾಕ್ಷಸರು ಇವನನ್ನು ಏನೂ ಮಾಡಲಾರರು. ಅದರಲ್ಲೂ ಕುಶಿಕ ಪುತ್ರನು ಕಾವಲಾಗಿರುವಾಗ ಹೇಳಬೇಕಾದುದೇನು? ಅಗ್ನಿಯು ಕಾದಿರಲು ಅಮೃತವನ್ನು ಕದಿಯುವವರೂ ಉಂಟೆ? ಈ ರಾಮನು ಆಕಾರವನ್ನು ಪಡೆದ ದರ್ಮ. ಏಷ ವಿಗ್ರಹವಾನ್ ಧರ್ಮಃ, ಈತನು ವೀರ್ಯವಂತರಲ್ಲಿ ಶ್ರೇಷ್ಠನು: ಏಷ ವೀರ್ಯವತಾಂ ವರಃ, ಈ ಕೌಶಿಕನು ಬುದ್ಧಿಯಲ್ಲಿ ಎಲ್ಲರಿಗಿಂತ ಹೆಚ್ಚಿನವನು: ತಪೋನಿಧಿಯಾದವನು: ಈತನು ಎಲ್ಲಾ ಅಸ್ತ್ರಗಳನ್ನು ಬಲ್ಲವನು. ಅಷ್ಟೇ ಅಲ್ಲ: ಅಪೂರ್ವಾಣಾಂಚ ಜನನೇ ಶಕ್ತೋ ಭೂಯಸ್ಸ ಧರ್ಮವಿತ್:—ಈತನು ಅಪೂರ್ವವಾದ ಅಸ್ತ್ರಗಳನ್ನು ನಿರ್ಮಿಸಲೂ ಬಲ್ಲ ಅಸ್ತ್ರಧರ್ಮಜ್ಞನು. ಅದರಿಂದ ಈ ವಿಶ್ವಾಮಿತ್ರನೊಡನೆ ರಾಮನನ್ನು ಕಳುಹಿಸು. ತೇಷಾಂ ನಿಗ್ರಹಣೇ ಶಕ್ತಃ ಸ್ವಯಂ ಚ ಕುಶಿಕಾತ್ಮಜಃ। ತವ ಪುತ್ರ ಹಿತಾರ್ಥಾಯ ತ್ವಾಮುಪೇತ್ಯಾಭಿಯಾಚತೇ—ಈ ವಿಶ್ವಾಮಿತ್ರನು ಆ ರಾಕ್ಷಸರನ್ನು ನಿಗ್ರಹಿಸಲಾರನೆಂದುಕೊಳ್ಳಬೇಡ. ಆದರೂ ನಿನ್ನ ಮಗನ ಹಿತಾರ್ಥವಾಗಿ ನಿನ್ನಲ್ಲಿಗೆ ಬಂದು ಬೇಡುತ್ತಿರುವನು—ಮೊದಲು ಕಳುಹಿಸು" ಎಂದನು.

ದಶರಥನು ಮರುಮಾತಾಡದೆ ಮಗನನ್ನು ಕಳುಹಿಸಿದನು. ರಾಮನು ಹೊರಡಲು ಲಕ್ಷ್ಮಣನೂ ಹೊರಟನು. ಇಬ್ಬರನ್ನೂ ಕರೆದು ಕೊಂಡು ವಿಶ್ವಾಮಿತ್ರರು ಹೊರಟರು. ಅನುಜಗ್ಮತುರಕ್ಷುದ್ರೌ ಪಿತಾಮಹಮಿವಾಶ್ವಿನೌ। ಕುಮಾರೌ ಚಾರುವಪುಷೌ ಭ್ರಾತರೌ ರಾಮಲಕ್ಷ್ಮಣೌ—ಅಕ್ಷುದ್ರರೂ (ಚೆನ್ನಾಗಿ ಬೆಳೆದವರು) ರಾಜಕುಮಾರರೂ ಸುಂದರರೂ ಆದ ರಾಮಲಕ್ಷ್ಮಣರೆಂಬ ಅಣ್ಣ ತಮ್ಮಂದಿರು ಚತುರ್ಮುಖನ ಹಿಂದೆ ಹೋಗುವ ಅಶ್ವಿನೀ ದೇವತೆಗಳಂತೆ ಆ ವಿಶ್ವಾಮಿತ್ರರ ಹಿಂದೆ ಹೋದರು. ಅಷ್ಟೇ ಅಲ್ಲ. ಅವರು ಸ್ಥಾಣುಂ ದೇವಮಿವಾಚಿಂತ್ಯಂ ಕುಮಾರಾವಿವ ಪಾವಕೀ—ಸನಾತನನೂ ಅಚಿಂತ್ಯನೂ ಆದ ಸ್ಥಾಣುವನ್ನು ಆಗ್ನೇಯ ಕುಮಾರರು ಇಬ್ಬರು ಅನುಸರಿಸಿದಂತೆ ಆತನ ಹಿಂದೆ ಹೋದರು.

ವಿಶ್ವಾಮಿತ್ರರು ಸರಯೂ ನದಿಯ ದಕ್ಷಿಣ ತೀರದಲ್ಲಿ ಶ್ರೀರಾಮನಿಗೆ ಬಲಾ—ಅತಿಬಲಾ ಎಂಬ ಎರಡು ವಿದ್ಯೆಗಳನ್ನು ಅನುಗ್ರಹಿಸಿದರು. "ನ ಶ್ರಮೋ ನ ಜ್ವರೋ ವಾ ತೇ ನ ರೂಪಸ್ಯ ವಿಪರ್ಯಯಃ। ನ ಚ ಸುಪ್ತಂ ಪ್ರಮತ್ತಂ ವಾ ಧರ್ಷಯಿಷ್ಯಂತಿ ನೈರ್‍ಋತಾಃ। ನ ಬಾಹ್ವೋಃ ಸದೃಶೋ ವೀರ್ಯೇ ಪೃಥಿವ್ಯಾಮಸ್ತಿ ಕಶ್ಚನ। ಬಲಾಚಾತಿಬಲಾ ಚೈವ ಸರ್ವಜ್ಞಾನಸ್ಯ ಮಾತರೌ। ತಪಸಾ ಸಂಭೃತೇ ಚೈತೇ ಬಹು ರೂಪೇ ಭವಿಷ್ಯತಃ—ಈ ಬಲಾ—ಅತಿಬಲಾ ಎಂಬ ವಿದ್ಯೆಗಳನ್ನು ನೀನು ಕಾಪಾಡಿಕೊಂಡರೆ, ನಿನಗೆ ದೇಹ ಶ್ರಮವಿರುವುದಿಲ್ಲ: ಮಾನಸಿಕ ಶ್ರಮವಿರುವುದಿಲ್ಲ; ನಿನಗೆ ಎಂದಿಗೂ ರೂಪವು ಅಳಿಯುವುದಿಲ್ಲ. ನೀನು ಮಲಗಿದ್ದರೂ ಮೈಮರೆತಿದ್ದರೂ ರಾಕ್ಷಸರು ನಿನ್ನನ್ನು ಏನೂ ಮಾಡಲಾರರು. ಬಾಹುವೀರ್ಯದಲ್ಲಿ ನಿನಗೆ ಸಮನಾದವರು ಇರುವುದಿಲ್ಲ: ಬಲಾ—ಅತಿಬಲಾ ಎಂಬಿವು ಸರ್ವಜ್ಞಾನಗಳಿಗೂ ಮಾತೃಸ್ಥಾನವು: ತಪಸ್ಸುಮಾಡಿ ಊರ್ಜಿತ

ಪಡಿಸಿಕೊಂಡರೆ ನಿನಗೆ ಬಹುರೂಪವಾದ ಸಿದ್ಧಿಗಳನ್ನು ಕೊಡುವುವು" ಎಂದು ಹೇಳಿ ಅನುಗ್ರಹ ಮಾಡಿದರು.*

೭. ವಧಾರ್ಥಿಗಳು

ಹಿಂದೆ ಸುಕೇತುವೆಂಬ ಯಕ್ಷರಾಜನಿದ್ದನು. ಆತನು ಪುತ್ರಾರ್ಥಿಯಾಗಿ ಬ್ರಹ್ಮನನ್ನು ಕುರಿತು ತಪಸ್ಸುಮಾಡಿದನು. ಆತನು ಪ್ರಸನ್ನನಾದರೂ ಸುಕೇತುವಿಗೆ ಮಗನನ್ನು ಕೊಡದೆ ಸಾವಿರಾನೆಗಳ ಬಲವುಳ್ಳ ತಾಟಕೆಯೆಂಬ ಕನ್ಯಾರತ್ನವನ್ನು ಕೊಟ್ಟನು. ಜಂಭಪುತ್ರನಾದ ಸುಂದನು ಅವಳನ್ನು ಮದುವೆಯಾಗಿ ಮಾರೀಚನೆಂಬ ಮಗನನ್ನು ಪಡೆದನು. ಸುಂದನು ಅಗಸ್ತ್ಯರನ್ನು ಕೆಣಕಿ ಹತನಾದನು. ಆಗ ತಾಟಕಾ ಮಾರೀಚರಿಬ್ಬರೂ ಅಗಸ್ತ್ಯರನ್ನು ಕೊಲ್ಲಬೇಕೆಂದು ಅವರ ಮೇಲೆ ಬಿದ್ದರು. ಅವರ ಶಾಪದಿಂದ ಇಬ್ಬರೂ ರಾಕ್ಷಸರಾಗಿ ಅಗಸ್ತ್ಯವನವನ್ನು ಆಕ್ರಮಿಸಿಕೊಂಡರು. ಶಾಪಗ್ರಸ್ತರಾದ ಮಾತಾಪುತ್ರರು ಲೋಕಕಂಟಕರಾದರು.

ತಾಟಕಾವನಕ್ಕೆ ಬರುತ್ತಿದ್ದ ಹಾಗೆಯೇ ವಿಶ್ವಾಮಿತ್ರರು ರಾಮನಿಗೆ ಹೇಳಿದರು : ಇವಳನ್ನು "ನೀನಲ್ಲದೆ ಇನ್ನು ಯಾರೂ ಕೊಲ್ಲಲಾರರು. ನಹಿ ತೇ ಸ್ತ್ರೀವಧಕೃತೇ ಘೃಣಾ ಕಾರ್ಯಾ ನರೋತ್ತಮ। ಸ್ತ್ರೀವಧೆಯೆಂದು ಹಿಂಜರಿಯಬೇಡ. ಕರ್ತವ್ಯಂ ರಾಜಸೂನುನಾ। ನೃಶಂಸಮನೃಶಂಸಂ ವಾ ಪ್ರಜಾ ರಕ್ಷಣಕಾರಣಾತ್। ಪಾವನಂ ವಾ ಸದೋಷಂ ವಾ ಕರ್ತವ್ಯಂ ರಕ್ಷತಾ ಸತಾ। ರಾಜ್ಯಭಾರನಿಯುಕ್ತಾನಾ

---

* ಈ ಬಲಾ—ಅತಿಬಲಾ ಎನ್ನುವವು ಪ್ರಾಣವಿದ್ಯೆಗಳು. ಇವುಗಳ ಅನುಸಂಧಾನದಿಂದ ಕ್ಷುತ್ಪಿಪಾಸೆಗಳು ತಪ್ಪುವುವು, (ಈಗಲೂ ಶ್ರೀ ಚಿದಂಬರ ದೀಕ್ಷಿತರ ವಂಶಜರಾದ ಶ್ರೀ ಬಾಪೂ ದೀಕ್ಷಿತರು ಬೇಕಾದಷ್ಟು ದಿವಸಗಳು ಕ್ಷುತ್ ಪಿಪಾಸಾ ನಿದ್ರಾ ಮಲಮೂತ್ರಗಳಿಲ್ಲದೆ ಇರುವುದನ್ನು ಅನೇಕರು ನೋಡಿದ್ದಾರೆ.) (ಹಾಗೆಯೇ ಯೋಗ ಸೂತ್ರದ ವಿಭೂತಿ ಪಾದದಲ್ಲಿ ಸೂತ್ರ ೩೧ ನೋಡಿ. ಅಲ್ಲಿ ಕಂಠಕೂಪದಲ್ಲಿ ಸಂಯಮನ ಮಾಡುವುದರಿಂದ ಕ್ಷುತ್ಪಿಪಾಸಾ ನಿವೃತ್ತಿಯಾಗುವುದೆಂದು ಹೇಳಿದೆ.)

ಮೋಷಧರ್ಮಸ್ಸನಾತನಃ—ರಾಜಪುತ್ರರು ಪ್ರಜೆಗಳ ರಕ್ಷಣಕ್ಕಾಗಿ ಮಾಡಬೇಕಾದ ಕಾರ್ಯವು ಪುಣ್ಯವಾಗಲಿ ಪಾಪವಾಗಲಿ, ಪಾವನವಾಗಲಿ ಸದೋಷವಾಗಲಿ, ಕರ್ತವ್ಯವನ್ನು ಮಾಡಿಯೇ ತೀರಬೇಕು. ರಾಜ್ಯ ಭಾರವನ್ನು ವಹಿಸಿದವರಿಗೆ ಇದೇ ಧರ್ಮವು. ಈ ನಿಯಮವು ಸನಾತನವು. ಆದರಿಂದ, ಅಧರ್ಮ್ಯಾಂ ಜಹಿ ಕಾಕುತ್ಸ್ಥ ಧರ್ಮೋಹ್ಯಸ್ಯಾ ನ ವಿದ್ಯತೇ। ಶ್ರೂಯತೇ ಹಿ ಪುರಾ ಶಕ್ರೋ ವಿರೋಚನ ಸುತಾಂ ನೃಪ। ಪೃಥಿವೀಂ ಹಂತುಮಿಚ್ಛಂತೀಂ ಮಂಥರಾಮಭ್ಯಸೂದಯತ್। ವಿಷ್ಣುನಾಚ ಪುರಾ ರಾಮ ಭೃಗುಪತ್ನೀ ಪತಿವ್ರತಾ। ಅನಿಂದ್ರಂ ಲೋಕಮಿಚ್ಛಂತೀ ಕಾವ್ಯಮಾತಾ ನಿಷೂದಿತಾ। ಏತೈರನ್ಯೈಶ್ಚ ಬಹುಭೀ ರಾಜಪುತ್ರೈರ್ಮಹಾತ್ಮಭಿಃ। ಅಧರ್ಮನಿರತಾ ನಾರ್ಯೋ ಹತಾ ಪುರುಷಸತ್ತಮೈಃ। ತಸ್ಮಾದೇನಾಂ ಘೃಣಾಂ ತ್ಯಕ್ತ್ವಾ ಜಹಿ ಮಚ್ಛಾಸನಾನ್ನೃಪ—ಇವಳು ಅಧರ್ಮಳು: ಇವಳಲ್ಲಿ ಧರ್ಮವಿಲ್ಲ. ಹಿಂದೆ ಲೋಕವನ್ನೆಲ್ಲಾ ಧ್ವಂಸಮಾಡುವೆನೆಂದು ಹೊರಟ ಮಂಥರೆಯೆಂಬ ವಿರೋಚನ ಪುತ್ರಿಯನ್ನು ಇಂದ್ರನು ಕೊಂದನಲ್ಲವೆ? ಹಾಗೆಯೇ ಮಹಾವಿಷ್ಣುವೂ ಲೋಕದಲ್ಲಿ ಇಂದ್ರನೇ ಇಲ್ಲದಂತೆ ಮಾಡುವೆನೆಂದು ಹೊರಟ ಭೃಗುಪತ್ನಿಯಾದ ಶುಕ್ರಮಾತೃವನ್ನು ಕೊಲ್ಲಲಿಲ್ಲವೆ? ಅಧರ್ಮನಿರತೆಯರು ನಾರಿಯಾದರೂ ಅವರನ್ನು ಪುರುಷಶ್ರೇಷ್ಠರು ಕೊಂದಿರುವುದುಂಟು. ಆದರಿಂದ, ಇವಳು ಹೆಂಗುಸಲ್ಲಾ ಎಂದು ಹಿಂಜರಿಯದೆ, ನನ್ನ ಅಪ್ಪಣೆಯೆಂದು ಕೊಲ್ಲು."

ಹೀಗೆ ತ್ರಿಲೋಕನಾಥನಾದ ಇಂದ್ರನೂ ಆತನಿಗೆ ನಾಥನಾದ ಮಹಾವಿಷ್ಣುವೂ ಮಾಡಿದ ಸ್ತ್ರೀವಧವೃತ್ತಾಂತವನ್ನು ಹೇಳಿ, ಅವಳು ವಧ್ಯಳು ಮಾತ್ರವಲ್ಲ: ಅವಳನ್ನು ಕೊಲ್ಲು ಎಂದು ನಾನೂ ಶಾಸನ ಮಾಡುತ್ತಿದ್ದೇನೆ. ಇದು ನಿನ್ನ ಕರ್ತವ್ಯ ಎಂದ ವಿಶ್ವಾಮಿತ್ರರಿಗೆ ಶ್ರೀರಾಮನು ಏನು ಉತ್ತರ ಕೊಡುತ್ತಾನೆ? ಕೇಳಿ. ರಾಘವನು ಕೈಮುಗಿದುಕೊಂಡು ವಿಶ್ವಾಮಿತ್ರರಿಗೆ ಹೇಳುತ್ತಾನೆ: "ಪಿತುರ್ವಚನ ನಿರ್ದೇಶಾತ್ ಪಿತುರ್ವಚನ ಗೌರವಾತ್। ವಚನಂ ಕೌಶಿಕಸ್ಯೇತಿ

ಕರ್ತವ್ಯ ಮವಿಶಂಕಯಾ—ನಮ್ಮ ತಂದೆಯು ವಿಶ್ವಾಮಿತ್ರರ ಮಾತಿನಂತೆ ನಡೆಯೆಂದು ಹೇಳಿದ್ದಾನೆ ಅದರ ಪ್ರಕಾರ, ತಮ್ಮ ಅಪ್ಪಣೆಯೆಂದು, ನಿಶ್ಶಂಕನಾಗಿ ಈ ಕಾರ್ಯವನ್ನು ಮಾಡುತ್ತೇನೆ" ಎಂದು ಬಿಲ್ಲಿಗೆ ನಾರಿಯನ್ನು ಕಟ್ಟಿ ಅದನ್ನು ಒದರಿಸಿದನು. ಆ ನಾದವು ದಿಕ್ಕುಗಳನ್ನೆಲ್ಲಾ ತುಂಬಿತು. ಅದನ್ನು ಕೇಳಿ ತಾಟಕೆಯು ಓಡಿ ಬಂದಳು. ಕ್ರುದ್ಧಳಾಗಿ, ವಿಕಾರವಾದ ಮುಖವುಳ್ಳವಳಾಗಿ, ಭಾರಿಯ ಪ್ರಮಾಣವುಳ್ಳವಳಾಗಿ ಬಂದ ತಾಟಕೆಯನ್ನು ಕಂಡು ಈ "ಊನ ಷೋಡಶವರ್ಷೀಯ"ನು ಏನಾದರೂ ಹೆದರಿದನೆ ?*

"ಲಕ್ಷ್ಮಣ ನೋಡು, ಭಿದ್ಯೇರನ್ ದರ್ಶನಾದಸ್ಯ ಭೀರೂಣಾಂ ಹೃದಯಾನಿಚ—ಇವಳನ್ನು ಕಂಡರೆ ಭೀರುಗಳ ಎದೆಯು ಒಡೆದೀತು, ಆದರೂ ನಹ್ಯೇನಾಮುತ್ಸಹೇ ಹಂತುಂ ಸ್ತ್ರೀಸ್ವಭಾವೇನ ರಕ್ಷಿತಾಂ—ಎಷ್ಟಾದರೂ ಹೆಂಗುಸಲ್ಲವೆ ? ಅದರಿಂದ ನಾನಿವಳನ್ನು ಕೊಲ್ಲಲಾರೆ" ಎನ್ನುತ್ತಾನೆ. ಕೊನೆಗೆ ಅವಳು ತನ್ನ ಮಾಯೆಯಿಂದ ಶಿಲಾವೃಷ್ಟಿಯನ್ನು ಮಾಡಿ ಅವರನ್ನೇ ಕೊಲ್ಲಲೆತ್ನಿಸಿ ತಾನೇ ರಾಮ ಬಾಣಕ್ಕೆ ಬಲಿಯಾಗುತ್ತಾಳೆ.

ಅವಳು ಹತಳಾದಾಗ ದೇವತೆಗಳೂ ಸಂತೋಷಪಡುತ್ತಾರೆ. ಅವರ ಮಾತಿನಂತೆ, ವಿಶ್ವಾಮಿತ್ರರು ರಾಮನಿಗೆ ಅಸ್ತ್ರ ವಿದ್ಯೆಯನ್ನು ಕೊಡುತ್ತಾರೆ. ಅಸ್ತ್ರಾಧಿದೇವತೆಗಳೂ ಕೂಡಲೇ ಪ್ರಸನ್ನರಾಗುತ್ತಾರೆ. ರಾಮನು ಅಸ್ತ್ರಗಳ ಪ್ರಯೋಗ ಉಪಸಂಹಾರಗಳನ್ನು ಗ್ರಹಿಸುತ್ತಾನೆ.

ಅಲ್ಲಿಂದ ಮುಂದೆ ವಿಶ್ವಾಮಿತ್ರರು ಅವರನ್ನು ಸಿದ್ಧಾಶ್ರಮಕ್ಕೆ ಕರೆತರುತ್ತಾರೆ. ಅಲ್ಲಿ ವಿಶ್ವಾಮಿತ್ರರು ಯಜ್ಞಾರ್ಥವಾಗಿ ಆರು ರಾತ್ರಿಗಳ ಮೌನದೀಕ್ಷೆಯನ್ನು ವಹಿಸಿದರು. ರಾಮಲಕ್ಷ್ಮಣರು ಆ ಆರು ರಾತ್ರಿಗಳೂ ನಿದ್ರಾಹಾರಗಳನ್ನು ತ್ಯಜಿಸಿ ಆಶ್ರಮವನ್ನು ಕಾದರು.

---

* ತನುವಿನ ತೋರದಾಯತಕೆ ಕಲಗಳೆದೆ ಕಾತರಿಪುದೆ_ಜೈ. 4–33.

ಆರನೆಯ ದಿನ ರಾಮನು "ಲಕ್ಷ್ಮಣ, ಜಾಗ್ರತನಾಗಿರು" ಎಂದು ತಮ್ಮನನ್ನು ಎಚ್ಚರಿಸಿ ತಾನೂ ಜಾಗ್ರತನಾಗಿದ್ದಾನೆ. ವೇದಿಯಲ್ಲಿ ಯಜ್ಞೇಶ್ವರನು ಪ್ರಜ್ವಲಿಸುತ್ತಿದ್ದಾನೆ. ಆಹುತಿಗಳನ್ನು ಕೊಡುತ್ತಿದ್ದಾರೆ. ಆ ವೇಳೆಗೆ ಸರಿಯಾಗಿ ಆಕಾಶದಲ್ಲಿ ಮಹಾಶಬ್ದವಾಯಿತು ಮೋಡವು ಮುಚ್ಚಿದಂತೆ ಕತ್ತಲುಗಟ್ಟಿತು. ಮಾರೀಚ ಸುಬಾಹುಗಳು ಅನುಚರರೊಡಗೂಡಿ ರಕ್ತಮಾಂಸಗಳ ಮಳೆಯನ್ನು ಕರೆಯುತ್ತ ಬ ದರು. ರಾಮನು ಕೂಡಲೇ ಮುಂದೆ ಬಂದು ತಮ್ಮನನ್ನು ನೋಡು ನೋಡು ಎನ್ನುತ್ತಾ ಮಾನವಾಸ್ತ್ರವನ್ನು ಪ್ರಯೋಗಿಸಿ ಮಾರೀಚನನ್ನು ಹೊಟ್ಟನ್ನು ತೂರುವ ಗಾಳಿಯಂತೆ ತೂರಿಬಿಟ್ಟನು. ಅವನು ಹೋಗಿ ಸಾಗರದಲ್ಲಿ ಬಿದ್ದನು. ಸುಬಾಹುವನ್ನು ಆಗ್ನೇಯಾಸ್ತ್ರದಿಂದ ಕೊಂದನು. ವಾಯುವ್ಯಾಸ್ತ್ರದಿಂದ ಇತರರನ್ನೆಲ್ಲಾ ಹಾರಿಸಿದನು. ಯಜ್ಞವು ಸಾಂಗವಾಯಿತು. ಎಲ್ಲರೂ ತೃಪ್ತರಾದರು. ವಸಿಷ್ಠ ವಿಶ್ವಾಮಿತ್ರರ ಮಾತು ನಿಜವಾಯಿತು. ಮಹಾಬಲರಾದ ರಾಕ್ಷಸರು ರಾಮ ಬಾಣಗಳಿಗೆ ತುತ್ತಾದರು.

ಅಲ್ಲಿಂದ ಮುಂದೆ ವಿಶ್ವಾಮಿತ್ರರು ಅವರಿಬ್ಬರನ್ನೂ ಕರೆದುಕೊಂಡು ಮಿಥಿಲೆಗೆ ಹೊರಟರು. ದಾರಿಯಲ್ಲಿ ಅಹಲ್ಯೆಯ ಆಶ್ರಮವು ಸಿಕ್ಕಿತು. ಅಹಲ್ಯೆಯು ರಾಮನು ಬಂದಾನೇ ಎಂದು ಕಾದಿದ್ದಳು. ರಾಮದರ್ಶನದಿಂದ ಆಕೆಗೆ ಬಂದಿದ್ದ ಶಾಪವು ಕಳೆಯಿತು. ಆ ವೇಳೆಗೆ ಆಕೆಯ ಪತಿಯಾದ ಗೌತಮರು ಬಂದು ವಿಧಿವತ್ತಾಗಿ ರಾಮನಿಗೆ ಪೂಜೆಯನ್ನೊಪ್ಪಿಸಿದರು.* ಅಲ್ಲಿಂದವರೆಲ್ಲ ಮುಂದೆ ನಡೆದರು.

ಮಿಥಿಲೆಯಲ್ಲಿ ಜನಕನು ಅವರನ್ನು ಬಹು ಗೌರವದಿಂದ ಬರ ಮಾಡಿಕೊಂಡನು. "ಇನ್ನು ಹನ್ನೆರಡು ದಿನಕ್ಕೆ ಯಜ್ಞವು ಮುಗಿಯುವುದು: ಆಗ ಆಹುತಿಗಳನ್ನು ತೆಗೆದುಕೊಳ್ಳಲು ಬರುವ ದೇವತೆಗಳ ದರ್ಶನವಾಗುವುದು. ಅಲ್ಲಿಯವರೆಗೂ ಇರಬೇಕು" ಎಂದು ಅವ

---

*ವಿಧಿವತ್ತಾದ ಪೂಜೆಯೆಂದರೆ ಮಧುಪರ್ಕವೇ ಇರಬಹುದೋ?

ರನ್ನೆಲ್ಲಾ ನಿಲ್ಲಿಸಿಕೊಂಡನು. ಆತನಿಗೆ ರಾಮಲಕ್ಷ್ಮಣರನ್ನು ಕಂಡು ಆಶ್ಚರ್ಯವಾಯಿತು. ದೇವಲೋಕದಿಂದ ಇಳಿದುಬಂದ ದೇವತೆಗಳೋ ಎನ್ನಿಸಿತು. ಕುತೂಹಲಾವಿಷ್ಟನಾದ ಆತನಿಗೆ ವಿಶ್ವಾಮಿತ್ರರು ಅವರ ವೃತ್ತಾಂತವನ್ನೆಲ್ಲಾ ಹೇಳಿದರು.

ಒಂದು ದಿನ ಜನಕನು ವಿಶ್ವಾಮಿತ್ರರ ಕೋರಿಕೆಯಂತೆ ತನ್ನಲ್ಲಿದ್ದ ಶಿವಧನುವನ್ನು ರಾಮಲಕ್ಷ್ಮಣರಿಗೆ ತೋರಿಸಿದನು. ಬಲಿಷ್ಠರಾದ ನೂರೈವತ್ತು ಮಂದಿ ಎಂಟು ಚಕ್ರಗಳ ಪೆಟ್ಟಿಗೆಯಲ್ಲಿದ್ದ ಆ ಧನುಸ್ಸನ್ನು ಕಷ್ಟಪಟ್ಟು ಎಳೆತಂದರು. ಜನಕನು "ಮಹಾವೀರ್ಯರಾದ ರಾಜರು ಸುರಾಸುರರು ಮೊದಲಾದವರು ಯಾರೂ ಇದನ್ನು ಬಗ್ಗಿಸಿ ಹೆದೆಯನ್ನು ಕಟ್ಟಲಾರದೆ ಹೋದರು. ಇನ್ನು ಮಾನವರ ಪಾಡೇನು?" ಎಂದು ಶಿವಧನುಸ್ಸನ್ನು ತೋರಿಸಿದನು. ವಿಶ್ವಾಮಿತ್ರರು "ವತ್ಸ ರಾಮ ಧನುಃ ಪಶ್ಯ-- ಮಗು, ರಾಮ, ಧನುಸ್ಸನ್ನು ನೋಡು" ಎಂದರು. ರಾಮನು "ಇದಂ ಧನುರ್ವರಂ ಬ್ರಹ್ಮನ್ ಸಂಸ್ಪೃಶಾಮೀಹ ಪಾಣಿನಾ। ಯತ್ನವಾಂಶ್ಚ ಭವಿಷ್ಯಾಮಿ ತೋಲನೇ ಪೂರಣೇऽಪಿವಾ—ಎಲೈ ಬ್ರಹ್ಮರ್ಷಿಯೇ, ಈ ಧನುರ್ವರವನ್ನು ಮುಟ್ಟುವೆನು: ಎತ್ತಿ ಹೆದೆಯನ್ನು ಕಟ್ಟಲು ಯತ್ನಿಸುವೆನು" ಎಂದನು. ಆತನ ಅಪ್ಪಣೆಯಾಗಲು ಲೀಲೆಯಿಂದ ಅದನ್ನು ಎತ್ತಿಕೊಂಡು, ಎಲ್ಲರೂ ನೋಡುತ್ತಿರಲು, ಅದಕ್ಕೆ ನಾರಿಯನ್ನು ಕಟ್ಟಿದನು. ಆತನು ಎಳೆದ ಸೆಳೆತವನ್ನು ತಡೆಯಲಾರದೆ ಅದು ಮಧ್ಯಕ್ಕೆ ಮುರಿದುಹೋಯಿತು. ಅದು ಮುರಿದ ಶಬ್ದವು ಭೂಕಂಪವಾದಷ್ಟು ಘನವಾಯಿತು. ಆ ಶಬ್ದಕ್ಕೆ ಜನಕ, ವಿಶ್ವಾಮಿತ್ರ, ರಾಮಲಕ್ಷ್ಮಣರಲ್ಲದೆ ಮಿಕ್ಕವರೆಲ್ಲರೂ ಮೂರ್ಛೆ ಹೋದರು.

ರಾಘವನ ಬಾಹುಬಲವೆಷ್ಟು ನೋಡಿದಿರಾ? ನೂರೈವತ್ತು ಜನರು ಕಷ್ಟಪಟ್ಟು ಗಾಲಿಯ ಪೆಟ್ಟಿಗೆಯಲ್ಲಿದ್ದ ಧನುವನ್ನು ತಂದಿದ್ದಾರೆ. ಜನಕನು ದೇವದಾನವ ಮಾನವರಿಂದ ಈ ಬಿಲ್ಲನ್ನೇರಿಸಲು ಸಾಧ್ಯವಿಲ್ಲ ಎನ್ನುತ್ತಿದ್ದಾನೆ. ಅಂತಹ ಧನುಸ್ಸು ಆತನ ಸೆಳೆತವನ್ನು ತಡೆಯಲಾರದೆ ಮುರಿದುಬೀಳುತ್ತದೆ! "ರಾಮನನ್ನು ನೀನು ಕಾಣೆ. ಅಹಂ ವೇದ್ಮಿ

ಮಹಾತ್ಮಾನಂ" ಎಂದು ವಿಶ್ವಾಮಿತ್ರರು ಹೇಳಿದುದು ಸುಳ್ಳಾಗಲಿಲ್ಲ.

ಜನಕನು ತನ್ನ ಪ್ರತಿಜ್ಞೆಯಂತೆ ಸೀತೆಯನ್ನು ರಾಮನಿಗೆ ಒಪ್ಪಿಸಿದನು. ದೂತರು ಅಯೋಧ್ಯೆಗೆ ತೆರಳಿ ದಶರಥನನ್ನು ಸಪರಿವಾರ ವಾಗಿ ಕರೆತಂದರು. ಸೀತಾರಾಮರ ವಿವಾಹವು ವಿಜೃಂಭಣೆಯಿಂದ ನಡೆಯಿತು.

ದಶರಥನು ಮದುಮಕ್ಕಳೊಡನೆ ಹಿಂತಿರುಗುವಾಗ ದಾರಿಯಲ್ಲಿ ಇನ್ನೊಂದು ವಿಪತ್ತು ಬಂದಿತು. ಕ್ಷತ್ರಿಯ ಕುಲಾಂತಕನಾದ ಭಾರ್ಗವ ರಾಮನು ಕಾಣಿಸಿಕೊಂಡನು. ಆತನ ದರ್ಶನದಿಂದ ಮೃಗ ಪಕ್ಷಿಗಳೂ ಹೆದರಿದುವು. ಸುಂಟರುಗಾಳಿಯೆದ್ದು ಭೂವ್ಯೋಮಾಕಾಶಗಳನ್ನೆಲ್ಲಾ ಧೂಳಿ ನಿಂದ ಮುಚ್ಚಿತು. ವಸಿಷ್ಠರು, ಋಷಿಗಳು, ದಶರಥ, ದಶರಥ ಪುತ್ರರು ಇವರಿಷ್ಟಲ್ಲದೆ ಮಿಕ್ಕವರೆಲ್ಲಾ, ಎಲ್ಲರೂ, ಹೆದರಿ ಮೈಮರೆತರು.

ರಾಜರಾಜವಿಮರ್ದನನಾದ ಭಾರ್ಗವ ರಾಮನು ಕಾಣಿಸಿ ಕೊಂಡನು. ಭಯಂಕರನಾಗಿದ್ದಾನೆ: ಜಟಾಮಂಡಲಧಾರಿಯಾಗಿ ದ್ದಾನೆ. "ಕೈಲಾಸಮಿವ ದುರ್ಧರ್ಷಂ ಕಾಲಾಗ್ನಿಮಿವ ದುಃಸಹಂ। ಜ್ವಲಂತಮಿವ ತೇಜೋಭಿ ದುರ್ನಿರೀಕ್ಷ್ಯಂ ಪೃಥಗ್ಜನೈಃ—ಕೈಲಾಸದಂತೆ ಅಗಮ್ಯನಾಗಿ, ಕಾಲಾಗ್ನಿಯಂತೆ ದುಸ್ಸಹನಾಗಿ, ತೇಜಸ್ಸಿನಿಂದ ಜ್ವಲಿಸುತ್ತ, ಇತರರಿಗೆ ನೋಡಲೂ ಆಗದವನಾದ "ಭಾರ್ಗವರಾಮನು ಬಂದನು. (ಹಿಂದೆ ಏಕಪ್ರಿಯದರ್ಶನನೆಂದು ರಾಮನನ್ನು ವರ್ಣಿಸಿ ದುದನ್ನು ಸ್ಮರಿಸಿ) ಸ್ಕಂಧೇಚಾಸಾದ್ಯ ಪರಶುಂ ಧನುರ್ವಿದ್ಯುದ್ಗಣೋ ಪಮಂ। ಪ್ರಗೃಹ್ಯ ಶರಮುಖ್ಯಂಚ ತ್ರಿಪುರಘ್ನಂ ಯಥಾಹರಂ—ಭುಜದ ಮೇಲೆ ಕೊಡಲಿ, ಮಿಂಚಿನ ಮಾಲೆಯಂತೆ ಮೆರೆಯುತ್ತಿರುವ ಧನುಸ್ಸು, ಒಂದು ಬಾಣ, ಇವುಗಳನ್ನು ಹಿಡಿದುಕೊಂಡು, ತ್ರಿಪುರಹರನಾದ ಹರ ನಂತೆ ಬಂದಿದ್ದಾನೆ. ಋಷಿಗಳೆಲ್ಲರೂ ಆತನಿಗೆ ಪೂಜೆಯನ್ನು ಒಪ್ಪಿಸಿ ದ್ದಾರೆ. ಅದನ್ನು ಒಪ್ಪಿಸಿಕೊಂಡು, ಜಾಮದಗ್ನ್ಯರಾಮನು ದಾಶರಥ ರಾಮನನ್ನು ಕುರಿತು ಹೀಗೆನ್ನುತ್ತಾನೆ: "ರಾಮ, ದಾಶರಥೇ ವೀರ

ವೀರ್ಯಂ ತೇ ಶ್ರೂಯತೇಽದ್ಭುತಂ। ತದದ್ಭುತ ಮಚಿಂತ್ಯಂಚ ಭೇದನಂ ಧನುಷಸ್ತ್ವಯಾ। ತಚ್ಛ್ರುತ್ವಾಹಮನುಪ್ರಾಪ್ತೋ ಧನುರ್ಗೃಹ್ಯಾಪರಂ ಶುಭಂ। ತದಿದಂ ಘೋರಸಂಕಾಶಂ ಜಾಮದಗ್ನ್ಯಂ ಮಹದ್ಧನುಃ। ಪೂರಯಸ್ವ ಶರೇಣೈವ ಸ್ವಬಲಂ ದರ್ಶಯಸ್ವ ಮೇ। ತದಹಂ ತೇ ಬಲಂ ದೃಷ್ಟ್ವಾ ಧನುಷೋಽಸ್ಯ ಪ್ರಪೂರಣೇ। ದ್ವಂದ್ವಯುದ್ಧಂ ಪ್ರದಾಸ್ಯಾಮಿ ವೀರ್ಯಶ್ಲಾಘ್ಯಮಹಂ ತವ—ದಾಶರಥಿರಾಮ, ನೀನು ವೀರನಂತೆ! ಅದ್ಭುತ ವೀರ್ಯವುಳ್ಳವನಂತೆ! ನೀನು ಮಾಡಿದ ಧನುರ್ಭೇದವು ಅದ್ಭುತ, ಅಚಿಂತ್ಯ, ಎನ್ನುತ್ತಾರೆ. ಅದನ್ನು ಕೇಳಿಯೇ ಈ ಇನ್ನೊಂದು ಧನುಸ್ಸನ್ನು ತಂದಿದ್ದೇನೆ. ಇದು ಘೋರವಾದುದು. ಜಮದಗ್ನಿಗಳ ವಂಶದಲ್ಲಿದ್ದುದು. ಇದರಲ್ಲಿ ಈ ಶರವನ್ನು ಜೋಡಿಸಿ ನಿನ್ನ ಪರಾಕ್ರಮವನ್ನು ತೋರಿಸು. ಈ ಧನುಸ್ಸನ್ನು ಪೂರಣಮಾಡುವುದರಲ್ಲಿ ನೀನೆಷ್ಟು ಬಲಶಾಲಿಯೆಂಬುದನ್ನು ಕಂಡು, ಆ ಮೇಲೆ ವೀರಶ್ಲಾಘ್ಯವಾದ ದ್ವಂದ್ವಯುದ್ಧವನ್ನು ನಿನಗೆ ಕೊಡುವೆನು.''

ವೀರ್ಯದರ್ಪಗಳಿಂದ ಉದ್ಧತವಾದ ಈ ಮಾತುಗಳನ್ನು ಕೇಳಿ, ದಶರಥನು ಭೂಮಿಗಿಳಿದುಹೋದನು: "ಕ್ಷತ್ರರೋಷಾತ್ ಪ್ರಶಾಂತಸ್ತ್ವಂ ಬ್ರಾಹ್ಮಣಶ್ಚ ಮಹಾಯಶಾಃ। ಬಾಲಾನಾಂ ಮಮಪುತ್ರಾಣಾಮಭಯಂ ದಾತುಮರ್ಹಸಿ। ಭಾರ್ಗವಾಣಾಂ ಕುಲೇ ಜಾತಃ ಸ್ವಾಧ್ಯಾಯವ್ರತಶಾಲಿನಾಂ। ಸಹಸ್ರಾಕ್ಷೇ ಪ್ರತಿಜ್ಞಾಯ ಶಸ್ತ್ರಂ ಪ್ರಕ್ಷಿಪ್ತವಾನಸಿ। ಸತ್ವಂ ಧರ್ಮಪರೋಭೂತ್ವಾ ಕಾಶ್ಯಪಾಯ ವಸುಂಧರಾಂ। ದತ್ವಾ ವನಮುಪಾಗಮ್ಯ ಮಹೇಂದ್ರ ಕೃತಕೇತನಃ। ಮಮ ಸರ್ವವಿನಾಶಾಯ ಸಂಪ್ರಾಪ್ತಸ್ತ್ವಂ ಮಹಾಮುನೇ। ನ ಚೈತಸ್ಮಿನ್ಹತೇ ರಾಮೇ ಸರ್ವೇ ಜೀವಾಮಹೇ ವಯಂ – ಕ್ಷತ್ರಿಯರ ಮೇಲಿನ ಕೋಪವನ್ನು ಬಿಟ್ಟು ಮಹಾಯಶಸ್ವಿಯಾದ ಬ್ರಾಹ್ಮಣನು ನೀನು, ಬಾಲಕರಾದ ನನ್ನ ಮಕ್ಕಳಿಗೆ ಅಭಯವನ್ನು ಕೊಡು. ನೀನು ಅಧ್ಯಯನ ವ್ರತಶೀಲರಾದ ಭಾರ್ಗವರ ಕುಲದಲ್ಲಿ ಹುಟ್ಟಿದವನು (ನಿನಗೆ ಈ ಕ್ರೂರ ಕರ್ಮವು ಸರಿಯೇ?) ಅಲ್ಲದೆ ಇಂದ್ರನಿಗೆ ಪ್ರತಿಜ್ಞೆಮಾಡಿಕೊಟ್ಟು ಶಸ್ತ್ರವನ್ನು

ಬಿಟ್ಟವನು ನೀನು. ನೀನು ಧರ್ಮಪರಾಯಣನಾಗಿ ಭೂಮಿಯನ್ನೆಲ್ಲಾ ಕಾಶ್ಯಪನಿಗೆ ಕೊಟ್ಟು ಮಹೇಂದ್ರದಲ್ಲಿ ನಿಂತವನಲ್ಲವೆ? ಇಂತಹ ನೀನು, ಹೇ ಮಹಾಮುನಿಯೆ, ಈಗ ನನ್ನ ಸರ್ವ ವಿನಾಶಕ್ಕಾಗಿ ಬಂದೆಯಾ? ರಾಮನೊಬ್ಬನು ಹತನಾದರೆ, ನಾವು ಯಾರೂ ಬದುಕಿರುವುದಿಲ್ಲ" ಎಂದು ಬೇಡಿಕೊಂಡನು. ಭಾರ್ಗವನು ದಶರಥನ ಕಡೆ ತಿರುಗಿಯೂ ನೋಡದೆ, ರಾಮನಿಗೆ ಹೀಗೆ ಹೇಳಿದನು: "ವಿಶ್ವಕರ್ಮನು ಶ್ರೇಷ್ಠವಾದ ಎರಡು ಧನಸ್ಸುಗಳನ್ನು ಮಾಡಿದನು. ದೇವತೆಗಳು ಅವುಗಳಲ್ಲಿ ಮಹೇಶ್ವರನಿಗೆ ಒಂದನ್ನೂ ಮಹಾವಿಷ್ಣುವಿಗೆ ಒಂದನ್ನೂ ಕೊಟ್ಟರು ಶೈವಧನುಸ್ಸನ್ನು ನೀನು ಮುರಿದೆ. ಇದು ವೈಷ್ಣವಧನುಸ್ಸು. ಇದು ಭೃಗುವಂಶದವರಿಗೆ ಮಹಾವಿಷ್ಣುವು ಕೊಟ್ಟುದು. ಕ್ಷಾತ್ರಧರ್ಮವನ್ನನುಸರಿಸಿ ಇದನ್ನು ತೆಗೆದುಕೊಂಡು ಇದಕ್ಕೆ ಹೆದೆಯನ್ನು ಕಟ್ಟಿ ಈ ಬಾಣವನ್ನು ಜೋಡಿಸು. ಹಾಗೆ ಮಾಡಿದರೆ ನಾನು ನಿನಗೆ ದ್ವಂದ್ವಯುದ್ಧವನ್ನು ಕೊಡುವೆನು."

ಭಾರ್ಗವನು ಕೃತಯುಗದವನು. ಆಕಾರ ಪರಾಕ್ರಮ ಮೊದಲಾದವುಗಳಲ್ಲೆಲ್ಲಾ ಭಾರಿ. ರಾಮನು ಇನ್ನೂ ತಂದೆಯ ಕಣ್ಣಿಗೆ ಬಾಲನಂತೆ ತೋರುತ್ತಿರುವನು. ಆದರೂ ರಾಮನು ಹೆದರಲಿಲ್ಲ. "ಶ್ರುತವಾನಸ್ಮಿ ಯತ್ಕರ್ಮ ಕೃತವಾನಸಿ ಭಾರ್ಗವ—ಭಾರ್ಗವ, ನೀನು ಏನೇನು ಮಾಡಿರುವೆಯೆಂಬುದನ್ನು ಕೇಳಿದ್ದೇನೆ. ನಾನು ವೀರ್ಯಹೀನ ಅಶಕ್ತ ಎಂದು ನನ್ನ ತೇಜಸ್ಸನ್ನು ಗಣಿಸದಿದ್ದೇಯೆ. ಅವಜಾನಾಸಿ ಮೇ ತೇಜಃ ಪಶ್ಯ ಮೇಽದ್ಯ ಪರಾಕ್ರಮಂ—ನನ್ನ ಪರಾಕ್ರಮವನ್ನು ಆದರೂ ನೋಡು" ಎಂದು ಕೋಪದಿಂದ ಆತನ ಕೈಯಲ್ಲಿದ್ದ ಶರಚಾಪಗಳನ್ನು ಥಟ್ಟನೆ ಕಿತ್ತುಕೊಂಡನು. ಚಾಪವನ್ನು ಕಟ್ಟಿ ಶರವನ್ನು ಜೋಡಿಸಿ, ಅದೇ ಕೋಪದಿಂದಲೇ ಹೀಗೆ ಹೇಳಿದನು: "ಬ್ರಾಹ್ಮಣೋಽಸೀತಿ ಮೇ ಪೂಜ್ಯಃ ವಿಶ್ವಾಮಿತ್ರಕೃತೇನಚ। ನೀನು ಬ್ರಾಹ್ಮಣನೆಂದು, ವಿಶ್ವಾಮಿತ್ರರ ಸಂಬಂಧಿಯೆಂದು ನನಗೆ ಪೂಜ್ಯನು. ಆದರಿಂದ ನಿನ್ನಮೇಲೆ ಈ ಪ್ರಾಣಹರವಾದ ಶರವನ್ನು ಪ್ರಯೋಗಿಸು

ವುದಿಲ್ಲ. ಈ ವೈಷ್ಣವ ದಿವ್ಯಬಾಣವು ವ್ಯರ್ಥವಾಗಬಾರದು. ನಿನ್ನ ಕಾಲನ್ನು ಕತ್ತರಿಸಲೇ ? ಅಥವಾ ನೀನು ತಪೋಬಲದಿಂದ ಆರ್ಜಿಸಿರುವ ಉತ್ತಮ ಲೋಕಗಳನ್ನು ಹೊಡೆಯಲೇ ? ಹೇಳು " ಎಂದನು.

ಆಗ ಭಾರ್ಗವ ರಾಮನು ತೇಜೋಹೀನನಾದನು. ತಾನು ಮಂದನಾಗಿ ಮಂದಮಂದವಾಗಿ ರಾಮನಲ್ಲಿ ಹೇಳಿಕೊಂಡನು: " ನಾನು ದಿನವೂ ಮಹೇಂದ್ರಗಿರಿಗೆ ಹೋಗಬೇಕು. ಅದರಿಂದ ನನ್ನ ಕಾಲನ್ನು ಕತ್ತರಿಸಬೇಡ. ತಪಸ್ಸಿನಿಂದ ಆರ್ಜಿಸಿದ ಲೋಕಗಳನ್ನು ಈ ಬಾಣಕ್ಕೆ ಗುರಿಮಾಡು. ನೀನು ಅಕ್ಷಯನು: ಮಧುಸೂದನನು! ಸುರೋತ್ತಮನು. ನಿನಗೆ ಸ್ವಸ್ತಿಯಾಗಲಿ " ಎಂದು, ಹೊರಟು ಹೋದನು.

ದಶರಥನು ಮಕ್ಕಳೊಡನೆ ಸೊಸೆಯರೊಡನೆ ರಾಜಧಾನಿಗೆ ಬಂದನು. ಅಲ್ಲಿ ರಾಮನು ಮಾತಾಪಿತೃ ಗುರುಜನರ ಸೇವೆಯನ್ನು ಮಾಡಿಕೊಂಡು ಸುಖವಾಗಿದ್ದನು. ಅಲ್ಲಿ ಸೀತಾರಾಮರು ಬಹು ಸುಖವಾಗಿದ್ದರು. " ಪ್ರಿಯಾ ತು ಸೀತಾ ರಾಮಸ್ಯ ದಾರಾಃ ಪಿತೃಕೃತಾ ಇತಿ–ಸೀತೆಯು ರಾಮನಿಗೆ ಬಹು ಪ್ರಿಯವಾಗಿದ್ದಳಂತೆ; ಏಕೆಂದರೆ ಈ ಹೆಂಡತಿಯನ್ನು ತಂದೆಯೊಪ್ಪಿರುವನು ಎಂದು." ರಾಮನಿಗೆ ವೀರ್ಯಶುಲ್ಕವಾಗಿ ಲಭಿಸಿದವಳು ಸೀತೆ; ಆದರೆ ಆತನಿಗೆ ಅದು ಲಕ್ಷ್ಯವಿಲ್ಲ. ತಂದೆಯೊಪ್ಪಿದವಳು ಸೀತೆ ಎಂದು ಆತನಿಗೆ ಗೌರವ. ಚೈನಾದಲ್ಲಿ ಒಂದು ಗಾದೆಯಂತೆ: The perfect man ignores self. The divine man ignores the achivement and the true sage ignores reputation ಶ್ರೀ ರಾಮನಲ್ಲಿ ಈ ಮೂರೂ ಸೇರಿವೆ, ಅಲ್ಲವೆ ಹೇಳಿ.

೮. ಪಾದುಕಾಪಟ್ಟಾಭಿಷೇಕ

ಕೈಕೆಯೀ ಸೋದರನಾದ ಯುಧಾಜಿತ್ತುವು ಬಂದು ತನ್ನ ಸೋದರಳಿಯನಾದ ಭರತನನ್ನು ಕರೆದೊಯ್ದನು. ಶತ್ರುಘ್ನನು

ಆತನ ಜೊತೆಯಲ್ಲಿಯೇ ಹೋದನು. ಶ್ರೀರಾಮಲಕ್ಷ್ಮಣರೊಡನೆ ಸುಖವಾಗಿದ್ದ ದಶರಥನಿಗೆ ಒಂದು ದಿನ ಮಗನಿಗೆ ಯೌವರಾಜ್ಯಾಭಿಷೇಕ ಮಾಡಬೇಕು ಎನ್ನಿಸಿತು. ತನ್ನ ಪುರದಲ್ಲಿ, ದೇಶದಲ್ಲಿ ಇರುವ ಮುಖಂಡರನ್ನೆಲ್ಲಾ ಕರೆಸಿಕೊಂಡು ತನ್ನ ಯೋಚನೆಯನ್ನು ಹೇಳಿದನು: "ರಾಜಪ್ರಭಾವಜುಷ್ಟಾಂಹಿ ದುರ್ವಹಾಮಜಿತೇಂದ್ರಿಯೈಃ । ಪರಿಶ್ರಾಂತೋಽಸ್ಮಿ ಲೋಕಸ್ಯ ಗುರ್ವೀಂ ಧರ್ಮಧುರಂ ವಹನ್॥ ಸೋಹಂ ವಿಶ್ರಾಮಮಿಚ್ಛಾಮಿ ರಾಮಂ ಕೃತ್ವಾ ಪ್ರಜಾಹಿತೇ। ಯೌವರಾಜ್ಯೇ ನಿಯೋಕ್ತಾಸ್ಮಿ ಪ್ರೀತಃ ಪುರುಷಪುಂಗವಂ ॥ ಯದೀದಂ ಮೇಽನುರೂಪಾರ್ಥಂ ಮಯಾ ಸಾಧು ಸುಮಂತ್ರಿತಂ॥ ಭವಂತೋ ಮೇಽನು ಮನ್ಯಂತಾಂ ಕಥಂ ವಾ ಕರವಾಣ್ಯಹಂ॥ ಯದ್ಯಪ್ಯೇಷಾ ಮಮ ಪ್ರೀತಿಃ ಹಿತಮನ್ಯದ್ವಿಚಿಂತ್ಯತಾಂ। ಅನ್ಯಾಮಧ್ಯಸ್ಥಚಿಂತಾಹಿ ವಿಮರ್ದಾಭ್ಯಧಿಕೋದಯಾ—ಧರ್ಮವೆಂಬ ನೊಗವು ಭಾರವಾದುದು: ಅಜಿತೇಂದ್ರಿಯರು ಇದನ್ನು ಧರಿಸಲಾರರು: ರಾಜಪ್ರಭಾವವೂ ಸೇರಿರುವ ಈ ಭಾರವನ್ನು ಇದುವರೆಗೆ ನಿರ್ವಹಿಸಿ ಸಾಕಾಗಿರುವುದು. ಅದರಿಂದ ಪ್ರಜಾಹಿತಕ್ಕಾಗಿ ರಾಮನನ್ನು ಯುವರಾಜನನ್ನು ಮಾಡಬೇಕು ಎಂದಿರುವೆನು. ಆತನು ಪುರುಷ ಶ್ರೇಷ್ಠನು. ನನ್ನ ಕೋರಿಕೆಯು ನ್ಯಾಯುವಾದುದು: ಸಾಧುಸಮ್ಮತವಾದುದು ಎನ್ನುವುದಾದರೆ, ತಾವೆಲ್ಲರೂ ಅದಕ್ಕೆ ಒಪ್ಪಿಗೆಯನ್ನು ಕೊಡಿ: ಹಾಗಿಲ್ಲದೆ, ಇದು ಕೇವಲ ನನ್ನ ಹಂಬಲ ಎನ್ನುವುದಾದರೆ, ಇದಕ್ಕಿಂತ ಉತ್ತಮವೂ ಹಿತವೂ ಆದ ಇನ್ನೊಂದನ್ನು ಅಧಿಕ ಫಲವಾದ ಮತ್ತೊಂದನ್ನು ಚಿಂತಿಸಿ ಹೇಳಿ" ಎಂದನು

ಆ ಮಾತನ್ನು ಕೇಳಿ ಅವರೆಲ್ಲರೂ, ಧರ್ಮಾರ್ಥಗಳನ್ನು ಬಲ್ಲವರೂ ಜನಮುಖ್ಯರೂ ಆದ ಅವರೆಲ್ಲ, ಒಬ್ಬರೊಬ್ಬರು ಮಾತನಾಡಿಕೊಂಡು ಆತನ ಮಾತನ್ನು ಮಳೆಗರೆಯುತ್ತಿರುವ ಮೋಡವನ್ನು ಕುಣಿಯುತ್ತಾ ಸ್ವಾಗತಿಸುವ ನವಿಲುಗಳಂತೆ, ಅನುಮೋದಿಸಿದರು. ಹಾಗೆ ಅವರ ಅನುಜ್ಞೆಯನ್ನು ಪಡೆದು ಅವರನ್ನೆಲ್ಲ ಬೀಳ್ಕೊಟ್ಟು, ರಾಜನು

ಮುಂದೇನು ಮಾಡಬೇಕು ಎಂಬುದನ್ನು ಗುರುಗಳಾದ ವಸಿಷ್ಠರಿಗೆ ಹೇಳಿಕಳುಹಿಸಿದನು. ಶ್ರೀರಾಮನನ್ನು ಕರೆಯಿಸಿಕೊಂಡು "ರಾಮ, ಯತಸ್ತ್ವಯಾ ಪ್ರಜಾಶ್ಚೇಮಾಃ ಸ್ವಗುಣೈರನುರಂಜಿತಾಃ। ತಸ್ಮಾತ್ತ್ವಂ ಪುಷ್ಯಯೋಗೇನ ಯೌವರಾಜ್ಯಮವಾಪ್ನುಹಿ—ನೀನು ಈ ಪ್ರಜೆಗಳನ್ನು ನಿನ್ನ ಸದ್ಗುಣಗಳಿಂದ ಒಲಿಸಿಕೊಂಡಿದ್ದೀಯೆ: ಅದರಿಂದ ನಿನಗೆ ಪುಷ್ಯ ನಕ್ಷತ್ರದಲ್ಲಿ ಯೌವರಾಜ್ಯಪಟ್ಟವಾಗುವುದು. ಅದರಿಂದ ಆ ಸಂಬಂಧ ವ್ರತವನ್ನಾಚರಿಸು" ಎಂದು ಹೇಳಿ ಕಳುಹಿಸಿದನು.

ಶ್ರೀರಾಮನು ತಾಯಿಯ ಅಂತಃಪುರಕ್ಕೆ ಹೋಗಿ ತಂದೆಯ ಅಪ್ಪಣೆಯನ್ನು ಆಕೆಗೆ ತಿಳಿಸಿ, "ಈ ಸಂಬಂಧವಾಗಿ ಏನೇನು ಮಾಡಬೇಕೋ ಅದೆಲ್ಲವನ್ನೂ ನನಗೂ ವೈದೇಹಿಗೂ ಮಾಡಿಸು" ಎಂದು ಪ್ರಾರ್ಥಿಸಿದನು. ವಿನಯವಾಗಿ ಮಗ್ಗುಲಲ್ಲಿ ನಿಂತಿರುವ ತಮ್ಮನನ್ನು ನೋಡಿ, "ಲಕ್ಷ್ಮಣ, ನೀನು ನನ್ನ ಜೊತೆಯಲ್ಲಿ ಈ ವಸುಂಧರೆಯನ್ನಾಳು. ನೀನು ನನ್ನ ಎರಡನೆಯ ಪ್ರಾಣವು: ಈ ಐಶ್ವರ್ಯವೆಲ್ಲ ನಿನ್ನದು ಎಂದುಕೋ. ನಾನು ಬದುಕಿರುವುದು, ಈ ರಾಜ್ಯವನ್ನು ಅಂಗೀಕರಿಸುವುದು, ನಿನಗಾಗಿ" ಎಂದು ಹೇಳಿ, ತಾಯಿಯನ್ನು ಬೀಳ್ಕೊಂಡು ಸೀತೆಯಂತಃಪುರಕ್ಕೆ ಹೋದನು.

ಇತ್ತ ಅರಸನು ಕೈಕೇಯಿಯಂತಃಪುರಕ್ಕೆ ಬಂದನು. ಆ ವೇಳೆಗೆ ಮಂಥರೆಯು ಆಕೆಯ ಬುದ್ಧಿಯನ್ನು ಕೆಡಿಸಿದ್ದಳು. ಅರಸನನ್ನು ಬಲವಂತಮಾಡಿ, ಹಿಂದೆ ಆತನು ತನಗೆ ಕೊಟ್ಟಿದ್ದ ವರಗಳನ್ನು ಈಗ ಕೊಡೆಂದಳು. ಒಂದರಿಂದ ರಾಮನಿಗೆ ವನವಾಸ. ಇನ್ನೊಂದರಿಂದ ತನ್ನ ಮಗನಿಗೆ ರಾಜ್ಯ. ಅರಸನು ಒದ್ದಾಡಿಹೋದನು. ಕೈಕೇಯಿಯು ರಾಮನನ್ನು ತಾನೇ ಕರಸಿದಳು: "ಅರಸನು ನನಗೆ ವರವನ್ನು ಕೊಟ್ಟಿರುವನು. ಆತನು ತನ್ನ ಮಾತು ನಿನ್ನಿಂದ ವಿಫಲವಾಗುವುದೆಂದು ಹೆದರಿ ತಾನಾಗಿ ಹೇಳದೆ ಇರುವನು. ಅದನ್ನು ನಾನು ಹೇಳುವೆನು." ಎಂದಳು.

ರಾಮನು ಅದನ್ನು ಕೇಳಿ, "ಅಹಂ ಹಿ ವಚನಾದ್ರಾಜ್ಞಃ ಪತೇಯಮಪಿ ಪಾವಕೇ। ಭಕ್ಷಯೇಯಂ ವಿಷಂ ತೀಕ್ಷ್ಣಂ ಮಜ್ಜೇಯಮಪಿ ಚಾರ್ಣವೇ॥ ನಿಯುಕ್ತೋ ಗುರುಣಾ ಪಿತ್ರಾ ನೃಪೇಣ ಚ ಹಿತೇನಚ। ತದ್ಬ್ರೂಹಿ ವಚನಂ ರಾಜ್ಞೋ ಯದಭಿಕಾಂಕ್ಷಿತಂ। ಕರಿಷ್ಯೇ ಪ್ರತಿಜಾನೇಚ ರಾಮೋ ದ್ವಿರ್ನಾಭಿಭಾಷತೇ—ರಾಜನ ಮಾತುಎಂದರೆ, ನಾನು ಬೆಂಕಿಯಲ್ಲಿ ಬಿದ್ದೇನು : ತೀಕ್ಷ್ಣವಾದ ವಿಷವನ್ನು ತಿಂದೇನು ! ಸಾಗರದಲ್ಲಿಯಾದರೂ ಮುಳುಗೇನು ! ಗುರು, ತಂದೆ, ದೊರೆ, ಹಿತ, ಇಷ್ಟೂ ಆದ ಆತನಿಂದ ನಿಯುಕ್ತನಾದಮೇಲೆ ಇನ್ನೇನು ? ಆತನ ಅಪ್ಪಣೆಯನ್ನು ಹೇಳು : ಆತನಿಗೆ ಬೇಕಾದುದನ್ನು ಮಾಡುವೆನು. ಇದೇ ಪ್ರತಿಜ್ಞೆ. ರಾಮನು ಎರಡು ಆಡುವುದಿಲ್ಲ" ಎಂದನು.

ಆಗ ಕೈಕೇಯಿಯು ಹೇಳಿದಳು : "ಪುರಾ ದೇವಾಸುರೇ ಯುದ್ಧೇ ಪಿತ್ರಾ ತೇ ಮಮ ರಾಘವ। ರಕ್ಷಿತೇನ ವರೌ ದತ್ತೌ ಸಶಲ್ಯೇನ ಮಹಾರಣೇ। ತತ್ರಮೇ ಯಾಚಿತೋ ರಾಜಾ ಭರತಸ್ಯಾಭಿಷೇಚನಂ। ಗಮನಂ ದಂಡಕಾರಣ್ಯೇ ತವ ಚಾದ್ಯೈವ ರಾಘವ। ಸಪ್ತಸಪ್ತಚ ವರ್ಷಾಣಿ ದಂಡಕಾರಣ್ಯಮಾಶ್ರಿತಃ॥ ಅಭಿಷೇಕಮಿಮಂ ತ್ಯಕ್ತ್ವಾ ಜಟಾಚೀರಧರೋ ವಸ॥ ಭರತಃ ಕೋಸಲಪುರೇ ಪ್ರಶಾಸ್ತು ವಸುಧಾಮಿಮಾಂ। ಏತತ್ಕುರು ನರೇಂದ್ರಸ್ಯ ವಚನಂ ರಘುನಂದನ। ಸತ್ಯೇನ ಮಹತಾ ರಾಮ ತಾರಯಸ್ವ ನರಾಧಿಪಂ—ಹಿಂದೆ ದೇವಾಸುರ ಯುದ್ಧದಲ್ಲಿ ಗಾಯಗೊಂಡ ನಿನ್ನ ತಂದೆಯನ್ನು ನಾನು ಕಾಪಾಡಿದೆನು : ಆಗ ಆತನು ನನಗೆ ಎರಡು ವರಗಳನ್ನು ಕೊಟ್ಟನು. ಆ ವರಗಳನ್ನು ಈಗ ಯಾಚಿಸಿದೆನು : ಒಂದು ವರದಿಂದ ಭರತನಿಗೆ ರಾಜ್ಯಾಭಿಷೇಕವಾಗಬೇಕು : ಮತ್ತೊಂದರಿಂದ ನೀನು ಈಗಲೇ ಈ ಅಭಿಷೇಕವನ್ನು ತ್ಯಜಿಸಿ, ಜಟಾಚೀರಧರನಾಗಿ, ದಂಡಕಾರಣ್ಯಕ್ಕೆ ಹೋಗಿ ಹದಿನಾಲ್ಕು ವರ್ಷ ಇರಬೇಕು. ಅರಸನ ವರಗಳು ನಿಜವಾಗಲಿ : ಇದನ್ನು ನಡೆಸು : ಅರಸು ಸತ್ಯವಂತನಾಗಲಿ" ಎಂದಳು.

ಮರಣೋಪಮವಾದ ಆ ಅಪ್ರಿಯ ವಚನವನ್ನು ಕೇಳಿದರೂ ರಾಮನಿಗೆ ವ್ಯಥೆಯಾಗಲಿಲ್ಲ. ಆತನಿಗೆ ಅರಸನು ಆ ಮಾತನ್ನು ತಾನೇ ಹೇಳಲಿಲ್ಲವಲ್ಲಾ ಎಂದು ವ್ಯಥೆಯಾಯಿತು. "ಯಾಸ್ಯಾಮಿ ಭವ ಸುಪ್ರೀತಾ ವನಂ ಚೀರಜಟಾಧರಃ। ಅವಿಚಾರ್ಯ ಪಿತುರ್ವಾಕ್ಯಂ ಸಮಾವಸ್ತುಂ ಚತುರ್ದಶ"—ಚೀರಜಟಾಧರನಾಗಿ ವನಕ್ಕೆ ಹೋಗುವೆನು; ನೀನು ಪ್ರಸನ್ನಳಾಗು: ತಂದೆಯ ವಾಕ್ಯವು ಸರಿಯೋ ತಪ್ಪೋ ಎಂದು ವಿಚಾರಿಸದೇ, ಹದಿನಾಲ್ಕು ವರ್ಷ ವನದಲ್ಲಿರುವೆನು" ಎಂದನು. ರಾಮನು ತಂದೆಗೂ ಚಿಕ್ಕಮ್ಮನಿಗೂ ನಮಸ್ಕಾರಮಾಡಿ ಹೊರಟನು. ಆತನಿಗೆ ಮುಖದ ಕಾಂತಿಯು ಕಡಿಮೆಯಾಗಲಿಲ್ಲ: ಚಿತ್ತದಲ್ಲಿ ಕ್ಷೋಭವಾಗಲಿಲ್ಲ. ಆತನ ಹರ್ಷವು ಅಡಗಲಿಲ್ಲ.

ಅಲ್ಲಿಂದ ರಾಮನು ತಾಯಿಯರಮನೆಗೆ ಬಂದನು. ಲಕ್ಷ್ಮಣನು ಹಿಂದೆಹಿಂದೆಯೇ ಬಂದನು. ಆಕೆಯೂ ಆ ವೇಳೆಗಾಗಲೇ ಮಗನಿಗೆ ಕ್ಷೇಮವಾಗಲೆಂದು ಪೂಜೆಯನ್ನು ಮಾಡಿ ಹೋಮಾದಿಗಳನ್ನು ಮಾಡಿಸಿದ್ದಳು. ಆಕೆಯು ರಾಮನನ್ನು ನೋಡಿ ಕಿಶೋರಂ ಬಡಬಾ ಯಥಾ ಮರಿಯನ್ನು ನೋಡಿದ ಕುದುರೆಯಂತೆ ಬಂದು ಮಗನನ್ನು ಇದಿರ್ಗೊಂಡು ತಬ್ಬಿಕೊಂಡು "ವೃದ್ಧರೂ ಧರ್ಮಶೀಲರೂ ಮಹಾತ್ಮರೂ ರಾಜರ್ಷಿಗಳೂ ಆದವರ ಆಯುಃ ಕೀರ್ತಿ ಧರ್ಮಗಳನ್ನು ಪಡೆ. ಸತ್ಯ ಪ್ರತಿಜ್ಞಂ ಪಿತರಂ ರಾಜಾನಂ ಪಶ್ಯ ರಾಘವ.* ನಿನ್ನ ತಂದೆಯು ಸತ್ಯ ಪ್ರತಿಜ್ಞನಾಗಲಿ" ಎಂದು ಹರಸಿದಳು. ರಾಮನು "ಅಮ್ಮಾ! ಒದಗಿರುವ ಮಹದ್ಭಯವನ್ನು ಕಾಣೆ. ನಿನಗೂ ಸೀತಾಲಕ್ಷ್ಮಣರಿಗೂ ಮಹದ್ದುಃಖವು ಪ್ರಾಪ್ತವಾಗಿರುವುದು" ಎಂದು ಎಲ್ಲವನ್ನೂ ಹೇಳಿದನು.

ಆಕೆಯು ಅದನ್ನು ಕೇಳಿ ಕೊಡಲಿಯಿಂದ ಕಡಿದ ವೃಕ್ಷದಂತೆ ದೊಪ್ಪನೆ ಕೆಳಕ್ಕೆ ಬಿದ್ದಳು. ಚೇತರಿಸಿಕೊಂಡೆದ್ದು ಬಹುವಾಗಿ

---

*ಇಲ್ಲಿನ ಕಾವ್ಯಸ್ವಾರಸ್ಯವನ್ನು ನೋಡಿ.

ಗೋಳಾಡಿದಳು. ಹಾಗೆ ವಿಲಾಪಿಸುತ್ತಿರುವ ರಾಮ ಮಾತೆಯನ್ನು ನೋಡಲಾರದೆ ಲಕ್ಷ್ಮಣನು ತೀವ್ರವಾಗಿ ನುಡಿದನು : " ದೇವಕಲ್ಪ ಮೃಜುಂ ದಾಂತಂ ರಿಪೂಣಾಮಪಿ ವತ್ಸಲಂ । ಅವೇಕ್ಷಮಾಣಃ ಕೋ ಧರ್ಮಂ ತ್ಯಜೇತ್ ಪುತ್ರಮಕಾರಣಾತ್ ॥ ತದಿದಂ ವಚನಂ ರಾಜ್ಞಃ ಪುನರ್ಬಾಲ್ಯಮುಪೇಯುಷಃ । ಪುತ್ರಃ ಕೋ ಹೃದಯೇ ಕುರ್ಯಾದ್ ರಾಜವೃತ್ತಮನುಸ್ಮರನ್—ದೇವಕಲ್ಪನಾಗಿ, ರುಜುವಾಗಿ, ದಮನ ಶೀಲನಾಗಿ, ರಿಪುಗಳಲ್ಲಿಯೂ ವಾತ್ಸಲ್ಯವನ್ನು ಇಟ್ಟುಕೊಂಡಿರುವ ಧರ್ಮವಂತನಾದ ಮಗನನ್ನು ಯಾವನು ತಾನೇ ಅಕಾರಣವಾಗಿ ಬಿಡುವನು ? ಅದರಿಂದ ಮತ್ತೆ ಬಾಲಭಾವವನ್ನು ಪಡೆದ ಈ ರಾಜನ ಮಾತನ್ನು ರಾಜಧರ್ಮವನ್ನು ಬಲ್ಲ ಯಾವ ಮಗನು ತಾನೇ ಒಪ್ಪು ವನು ? ಗುರೋರಪ್ಯವಲಿಪ್ತಸ್ಯ ಕಾರ್ಯಾಕಾರ್ಯಮಜಾನತಃ । ಉತ್ಪಥಂ ಪ್ರತಿಪನ್ನಸ್ಯ ಕಾರ್ಯಂ ಭವತಿ ಶಾಸನಂ—ಮೋಹದಿಂದ ಕಾರ್ಯ-ಅಕಾರ್ಯಗಳನ್ನು ತಿಳಿಯದೆ ಹಾದಿ ತಪ್ಪಿದ ಗುರುವನ್ನೂ ಶಾಸನ ಮಾಡಬಹುದಲ್ಲವೆ ? ಅದರಿಂದ, ಉದಿಸಿದ ಸೂರ್ಯನು ತಮ ಸ್ಸನ್ನು ಹರಿಸುವಂತೆ, ಈ ದುಃಖವನ್ನು ಹರಿಸುವೆನು. ರಾಮನು ಸಿಂಹಾಸನದಲ್ಲಿ ಕುಳ್ಳಿರಲಿ. ನಾನು ಧನುರ್ಬಾಣಗಳನ್ನು ಹಿಡಿದು ಕಾವಲಿಗೆ ನಿಲ್ಲುವೆನು. ಯಾರು ಬರುವರೋ ನೋಡೋಣ " ಎಂದನು.

ಕೌಸಲ್ಯೆಯು " ರಾಮ, ಲಕ್ಷ್ಮಣನ ಮಾತು ಕೇಳಿದೆಯಾ ? ಧರ್ಮಜ್ಞ ಯದಿ ಧರ್ಮಿಷ್ಠೋ ಧರ್ಮಂ ಚರಿತುಮಿಚ್ಛಸಿ । ಶುಶ್ರೂಷ ಮಾಮಿಹಸ್ಥಸ್ತ್ವಂ ಚರ ಧರ್ಮಮನುತ್ತಮಂ । ಯಥೈವ ರಾಜಾ ಪೂಜ್ಯಸ್ತೇ ಗೌರವೇಣ ತಥಾಹ್ಯಹಂ । ತ್ವಾಂ ನಾಹಮನುಜಾನಾಮಿ ನ ಗಂತವ್ಯಮಿತೋ ವನಂ—ಎಲೈ ಧರ್ಮಜ್ಞನೆ, ನೀನು ಧರ್ಮಿಷ್ಠ ನಾಗಿ ಧರ್ಮವನ್ನಾಚರಿಸುವವನಾದರೆ, ಇಲ್ಲಿಯೇ ಇದ್ದು ನನ್ನನ್ನು ಸೇವಿಸು : ಅನುತ್ತಮವಾದ ಧರ್ಮವನ್ನಾಚರಿಸು. ರಾಜನು ನಿನಗೆ ಹೇಗೆ ಪೂಜ್ಯನೋ, ಗೌರವದಿಂದ ನಾನೂ ನಿನಗೆ ಅಷ್ಟೇ ಪೂಜ್ಯಳು.

ನೀನು ವನಕ್ಕೆ ಹೋಗಲು ನಾನು ಸಮ್ಮತಿಸುವುದಿಲ್ಲ. ನೀನು ಹೋಗ ಕೂಡದು. ನೀನು ನನ್ನನ್ನು ಬಿಟ್ಟು ಹೋದರೆ, ನಾನು ಸಾಯುವೆನು: ನಿನಗೆ ನರಕವಾಗುವುದು" ಎಂದಳು.

ಹಾಗೆ ದೀನಳಾಗಿ ಅಳುತ್ತಿರುವ ಜನನಿಯನ್ನು ರಾಮನು ಸಂತೈಸುತ್ತಾ ಹೇಳಿದನು: "ತಾಯೇ, ನಾನು ತಂದೆಯ ಮಾತನ್ನು ಹೇಗೆ ನಿರಾಕರಿಸಲಿ? ನಾಹಂ ಧರ್ಮಮಪೂರ್ವಂ ತೇ ಪ್ರತಿಕೂಲಂ ಪ್ರವರ್ತಯೇ। ಪೂರ್ವೈರ್ಯಮಭಿಪ್ರೇತೋ ಗತೋ ಮಾರ್ಗೋ ನುಗಮ್ಯತೇ—ನಿನಗೆ ಪ್ರತಿಕೂಲವಾದ, ಯಾವುದೋ ಅಪೂರ್ವ ಧರ್ಮವನ್ನು ನಾನು ಆಚರಿಸುತ್ತಿಲ್ಲ. ಪೂರ್ವಿಕರು ಒಪ್ಪಿ ಆಚರಿಸಿದ ಧರ್ಮವನ್ನು ಆಚರಿಸುತ್ತಿದ್ದೇನೆ" ಎಂದು, ಲಕ್ಷ್ಮಣನನ್ನು ಕುರಿತು ಹೀಗೆ ಹೇಳಿದನು: "ಲಕ್ಷ್ಮಣ, ನೀನು ನನ್ನಲ್ಲಿ ಇಟ್ಟಿರುವ ಅನುತ್ತಮ ವಾದ ಸ್ನೇಹವನ್ನೂ ನಿನ್ನ ವಿಕ್ರಮ, ಸತ್ವ, ತೇಜಸ್ಸುಗಳನ್ನೂ ತಾಯಿಯ ಮಹದ್ದುಃಖವನ್ನೂ ಬಲ್ಲೆನು. ಧರ್ಮೋ ಹಿ ಪರಮೋ ಲೋಕೇ ಧರ್ಮೇ ಸತ್ಯಂ ಪ್ರತಿಷ್ಠಿತಂ। ಧರ್ಮಸಂಶ್ರಿತಮೇತಚ್ಚ ಪಿತುರ್ವಚನ ಮುತ್ತಮಂ—ಲೋಕದಲ್ಲಿ ಧರ್ಮವೇ ಪರಮವು: ಧರ್ಮದಲ್ಲಿಯೇ ಸತ್ಯವು ಪ್ರತಿಷ್ಠಿತವಾಗಿರುವುದು: ತಂದೆಯ ಮಾತೂ ಧರ್ಮಕ್ಕೆ ಅನು ಗುಣವಾಗಿಯೇ ಇರುವುದು: ತದೇನಾಂ ವಿಸೃಜಾನಾರ್ಯಾಂ ಕ್ಷತ್ರ ಧರ್ಮಾಶ್ರಿತಾಂ ಮತಿಂ—ಅದರಿಂದ ಕ್ಷತ್ರಧರ್ಮವನ್ನಾಶ್ರಯಿಸಿ ಅನಾರ್ಯವಾದ ಈ ಮತಿಯನ್ನು ವಿಸರ್ಜಿಸು. ಧರ್ಮಮಾಶ್ರಯ— ಧರ್ಮವನ್ನು ಹಿಡಿ" ಎಂದನು.

ಮತ್ತೆ ಕೌಸಲ್ಯೆಗೆ ತಲೆ ಬಗ್ಗಿಸಿ ಹೇಳಿಕೊಂಡನು: "ತಾಯೆ। ನನಗೆ ಅಪ್ಪಣೆಯನ್ನು ಕೊಡು. ಸ್ವರ್ಗದಿಂದ ಬಿದ್ದ ಯಯಾತಿಯು ಮತ್ತೆ ಸ್ವರ್ಗಕ್ಕೆ ಬಂದಂತೆ, ವನವಾಸವನ್ನು ಮುಗಿಸಿಕೊಂಡು ಬರು ವೆನು. ತ್ವಯಾ ಮಯಾಚ ವೈದೇಹ್ಯಾ ಲಕ್ಷ್ಮಣೇನ ಸುಮಿತ್ರಯಾ, ಪಿತುರ್ನಿಯೋಗೇ ಸ್ಥಾತವ್ಯಮೇಷ ಧರ್ಮಸ್ಸನಾತನಃ। ಅಂಬ ಸಂಹೃತ್ಯ ಸಂಭಾರಾನ್ ದುಃಖಂ ಹೃದಿ ನಿಗೃಹ್ಯಚ। ವನವಾಸಕೃತಾ

ಬುದ್ಧಿರ್ಮಮಧರ್ಮ್ಯಾನುವರ್ತ್ಯತಾಂ—ನೀನು, ನಾನು, ವೈದೇಹಿ, ಲಕ್ಷ್ಮಣ, ಸುಮಿತ್ರೆ ಇವರೆಲ್ಲರೂ ತಂದೆಯ ಮಾತಿನಂತೆ ನಡೆಯ ಬೇಕು. ಇದೇ ಸನಾತನವಾದ ಧರ್ಮವು. ಅದರಿಂದ, ತಾಯೆ, ಅಭಿಷೇಕ ವಸ್ತುಗಳನ್ನೆಲ್ಲಾ ತೆಗೆಸಿಡು. ದುಃಖವನ್ನು ನುಂಗಿಕೊ. ವನವಾಸವನ್ನು ಒಪ್ಪಿರುವ ನನ್ನ ಮತಿಯನ್ನು ಅನುಮೋದಿಸು" ಎಂದನು. ಅದನ್ನು ಕೇಳಿ ಮೃತಪ್ರಾಯಳಾದ ಆಕೆಯು ಮತ್ತೂ ಮಗನಿಗೆ ಹೇಳಿದಳು : "ಯಥೈವ ತೇ ಪುತ್ರ ಪಿತಾ ತಥಾಹಂ ಗುರುಃ ಸ್ವಧರ್ಮೇಣ ಸುಹೃತ್ತಯಾಚ—ಮಗನೇ, ನಿನಗೆ ತಂದೆಯು ಹೇಗೋ ಹಾಗೇ ನಾನೂ ನನ್ನ ಸ್ವಧರ್ಮ ಸ್ನೇಹಗಳಿಂದ ಗುರುವು" ಎಂದು ಮೂರ್ಛೆ ಹೋದಳು.

ಆಗ, ಧರ್ಮೇಸ್ಥಿತೋ ಧರ್ಮಮುವಾಚವಾಕ್ಯಂ ಯಥಾಸಏವಾ ರ್ಹತಿ ತತ್ರವಕ್ತುಂ. ರಾಮನು ಧರ್ಮದಲ್ಲಿ ನಿಂತು ಧರ್ಮವಾದ ಮಾತನ್ನು ಆಡಿದನು : ಆ ಮಾತನ್ನು ರಾಮನೊಬ್ಬನೇ ಆ ಸಂದರ್ಭದಲ್ಲಿ ಆಡಬಲ್ಲವನು. "ಕಥಂ ಪ್ರಕೃತಿಸಂಪನ್ನಾ ರಾಜಪುತ್ರೀ ತಥಾಗುಣಾ ಬ್ರೂಯಾತ್ಸಾ ಪ್ರಾಕೃತೇವ ಸ್ತ್ರೀ ಮತ್ಪೀಡಾಂ ಭರ್ತೃಸನ್ನಿಧೌ । ಯದಚಿಂತ್ಯಂತು ತದ್ದೈವಂ ಭೂತೇಷ್ವಪಿ ನ ಹನ್ಯತೇ । .... ಕಶ್ಚ ದೈವೇನ ಸೌಮಿತ್ರೇ ಯೋದ್ಧುಮುತ್ಸಹತೇ ಪುಮಾನ್ ಯಸ್ಯನ ಗ್ರಹಣಂ ಕಿಂಚಿತ್ ಕರ್ಮಣೋಽನ್ಯನ್ನ ದೃಶ್ಯತೇ । ಸುಖದುಃಖೇ ಭಯಕ್ರೋಧೌ ಲಾಭಾಲಾಭೌ ಭವಾಭವೌ ॥ ಯಚ್ಚ ಕಿಂಚಿತ್ತಥಾ ಭೂತಂ ನನು ದೈವಸ್ಯ ಕರ್ಮ ತತ್ । ಋಷಯೋಽಪ್ಯುಗ್ರತಪಸೋ ದೈವೇನಾಭಿ ಪ್ರಪೀಡಿತಾಃ । ಉತ್ಸೃಜ್ಯ ನಿಯಮಾನ್ಸ್ತೀವ್ರಾನ್ ಭ್ರಶ್ಯಂತೇ ಕಾಮಮನ್ಯುಭಿಃ॥ ಅಸಂಕಲ್ಪಿತಮೇವೇವ ಯದಕಸ್ಮಾತ್ಪ್ರ ವರ್ತತೇ। ನಿವರ್ತ್ಯಾರಂಭಮಾರಬ್ಧಂ ನನು ದೈವಸ್ಯ ಕರ್ಮ ತತ್— ಗುಣವತಿಯೂ, ರಾಜಪುತ್ರಿಯೂ ಆದ ಆಕೆಯು ಸರಿಯಾಗಿದ್ದಿದ್ದರೆ, ಗಂಡನ ಎದುರಿಗೆ ಹೀಗೆ ನನಗೆ ಹಿಂಸೆಯನ್ನು ಕುರಿತಾದರೂ ಆಡು ತ್ತಿದ್ದಳೆ ? ಯೋಚಿಸುವುದಕ್ಕಾಗದುದು ದೈವವು. ಅದನ್ನು ಪ್ರಾಣಿ

ಗಳು ಏನೂ ಮಾಡಲಾರರು. ದೈವವನ್ನು ಅದರ ಕರ್ಮಗಳಲ್ಲಿ ಮಾತ್ರವೇ ಕಾಣಬೇಕು. ಹೀಗಿರಲು ಯಾರು ತಾನೇ ಅದರೊಡನೆ ಹೋರಾಡುವರು ? ಸುಖ ದುಃಖ, ಭಯ ಕ್ರೋಧ, ಲಾಭಾಲಾಭ, ಜನ್ಮ ಮರಣ, ಮೊದಲಾದವೆಲ್ಲ ದೈವದ ಕರ್ಮಗಳು. ಉಗ್ರ ತಪಸ್ವಿಗಳಾದ ಋಷಿಗಳೂ ದೈವಪೀಡೆಗೆ ಸಿಕ್ಕಿ ಉಗ್ರನಿಯಮಗಳನ್ನು ಬಿಟ್ಟು ಕಾಮಕ್ರೋಧವಶರಾಗುವರು. ಸಂಕಲ್ಪವಿಲ್ಲದೆಯೇ ಯಾವುದು ಪ್ರವೃತ್ತವಾಗುವುದೋ ಅದು ದೈವದ ಕರ್ಮವು—ಆದರಿಂದ, ನ ಲಕ್ಷ್ಮಣಾಸ್ಮಿನ್ ಖಲು ಕರ್ಮವಿಘ್ನೇ ಮಾತಾ ಯವೀಯಸ್ಯತಿಶಂಕನೀಯಾ। ದೈವಾಭಿಪನ್ನಾ ಹಿ ವದತ್ಯನಿಷ್ಟಂ ಜಾನಾಸಿ ದೈವಂ ಚ ತಥಾ ಪ್ರಭಾವಂ—ಲಕ್ಷ್ಮಣ, ಹೀಗೆ ಅಭಿಷೇಕವು ಮುರಿದುಬಿದ್ದುದಕ್ಕಾಗಿ ಚಿಕ್ಕಮ್ಮನನ್ನು ನಿಂದಿಸದಿರು. ದೈವಪ್ರೇರಿತಳಾಗಿ ಅವಳು ಹೀಗೆ ಆಡಿದಳು. ದೈವವು ಯಾರನ್ನೇ ಆದರೂ ಆಡಿಸಬಲ್ಲ ಪ್ರಭಾವವುಳ್ಳದು " ಎಂದನು.

ಲಕ್ಷ್ಮಣನು ಅದನ್ನು ಕೇಳಿ ರೇಗಿದನು : " ವಿಕ್ಲಬೋ ವೀರ್ಯಹೀನೋ ಯಸ್ಸ ದೈವಮನುವರ್ತತೇ। ವೀರಾಸ್ಸಂಭಾವಿತಾತ್ಮಾನೋ ನ ದೈವಂ ಪರ್ಯುಪಾಸತೇ। ದೈವಂ ಪುರುಷಕಾರೇಣ ಯಸ್ಸಮರ್ಥಃ ಪ್ರಬಾಧಿತುಂ। ನ ದೈವೇನ ವಿಪನ್ನಾರ್ಥಃ ಪುರುಷಸ್ಸೋವಸೀದತಿ ॥ ಹೇಡಿಯೂ ವೀರ್ಯಹೀನನೂ ದೈವವನ್ನು ನಂಬುವನು : ವೀರರೂ ಆತ್ಮವಿಶ್ವಾಸವುಳ್ಳವರೂ ದೈವವನ್ನು ಹಿಡಿಯುವುದಿಲ್ಲ. ದೈವವನ್ನು ತನ್ನ ಪೌರುಷದಿಂದ ಗೆದ್ದವನು ದೈವದಿಂದ ವಂಚಿತನಾಗಿ ಕೆಡುವುದಿಲ್ಲ " ಎಂದು ಹಾರಾಡಿದನು. ಅದನ್ನು ಕೇಳಿ ಕೌಸಲ್ಯೆಯು ಮತ್ತೆ " ಹಸುವು ತನ್ನ ಕರುವಿನೊಡನೆ ಹೋಗದೇ ಇರುವುದೆಂತು ? ನನ್ನ ಮಗನು ಹೋದಕಡೆ ನಾನೂ ಹೋಗುವೆನು " ಎಂದಳು.

ಆಗ ರಾಮನು ಇಬ್ಬರನ್ನೂ ಸಮಾಧಾನಪಡಿಸಿದನು : " ಗಂಡನನ್ನು ಬಿಟ್ಟು ಹೋಗುವುದು ಹೆಂಗಸಿಗೆ ತರವಲ್ಲ : ನನ್ನ ತಂದೆಯು ಇರುವವರೆಗೂ ನೀನು ಆತನ ಸೇವೆಯನ್ನು ಮಾಡಲೇಬೇಕು. ಅದೇ

ಸನಾತನ ಧರ್ಮವು. ಅಮ್ಮಾ! ನೀನೂ ನಾನೂ ತಂದೆಯ ಮಾತಿನಂತೆ ನಡೆಯಬೇಕು. ಆತನು ರಾಜನು, ಭರ್ತೃವು, ಗುರುವು ಶ್ರೇಷ್ಠನು, ಎಲ್ಲರಿಗೂ ಈಶ್ವರನಾದ ಪ್ರಭುವು" ಎನ್ನಲು, ಆಕೆಯು ಆತನ ಮಾತು ಮೀರಲಾರದೆ "ಹೋಗಿ ಬಾ" ಎಂದಳು. ದುಃಖವನ್ನು ಬಿಗಿಹಿಡಿದು, ಆಚಮನವಾಡಿ ಕುಳಿತು ಮಗನಿಗೆ ಮಂಗಳಾಶಾಸನ ಮಾಡಿದಳು: "ಯಂ ಪಾಲಯಸಿ ಧರ್ಮಂ ತ್ವಂ ಧೃತ್ಯಾಚ ನಿಯಮೇನಚ। ಸವೈ ರಾಘವಶಾರ್ದೂಲ, ಧರ್ಮಸ್ತ್ವಾಮಭಿರಕ್ಷತು॥ ರಾಘವೇಂದ್ರ, ನೀನು ಧೃತಿಯಿಂದಲೂ ನಿಯಮದಿಂದಲೂ ಯಾವ ಧರ್ಮವನ್ನು ಆಚರಿಸುವೆಯೋ ಅದು ನಿನ್ನನ್ನು ರಕ್ಷಿಸಲಿ" ಎಂದು ಆಶೀರ್ವಾದಮಾಡಿದಳು.

ರಾಮನು ಲಕ್ಷ್ಮಣನೊಡನೆ ಸೀತೆಯಂತಃಪುರಕ್ಕೆ ಬಂದನು. ಆಕೆಯನ್ನು ನೋಡಿ ರಾಮನು ಶೋಕವನ್ನು ತಡೆಯಲಾರದೆ ಹೋದನು. ಹಾಗೆ ದುಃಖಪಡುತ್ತಿರುವ ಪತಿಯನ್ನು ನೋಡಿ ಆಕೆಯು "ಅಭಿಷೇಕ ಕಾಲದಲ್ಲಿ ಹೀಗೇಕೆ ಅಳುತ್ತಿರುವೆ? ನಿನ್ನೊಡನೆ ವಂದಿ ಮಾಗಧರು ಯಾರೂ ಇಲ್ಲವಲ್ಲ!" ಎಂದು ಗಾಬರಿಯಾದಳು. "ಆಗಬೇಕಾಗಿದ್ದ ಅಭಿಷೇಕಕ್ಕೆ ಧರ್ಮವು ಅಡ್ಡಿ ಬಂತು—ಎಂದು ಮಹಾಕುಲಸಂಭೂತಳೂ, ಧರ್ಮಜ್ಞಳೂ, ಧರ್ಮಚಾರಿಣಿಯೂ ಆದ ಜಾನಕಿಗೆ ನಡೆದುದು ಎಲ್ಲವನ್ನೂ ಹೇಳಿದನು. ಆಕೆಯು ಗಂಡನೊಡನೆ ಬರುವೆನೆಂದಳು: ಬೇಡವೆಂದ ಗಂಡನ ಮೇಲೆ ಕೋಪ ಬಂತು: "ಕಿಂ ತ್ವಾಮನ್ಯತ ವೈದೇಹಃ ಪಿತಾ ಮೇ ಮಿಥಿಲಾಧಿಪಃ। ರಾಮ ಜಾಮಾತರಂ ಪ್ರಾಪ್ಯ ಸ್ತ್ರಿಯಂ ಪುರುಷವಿಗ್ರಹಂ—ನೀನು ಹೆಣ್ಣು: ಗಂಡುವೇಷದಲ್ಲಿದ್ದೆ. ನಿನ್ನನ್ನು ನನ್ನ ತಂದೆಯಾದ ಜನಕನು ಗಂಡು ಎಂದುಕೊಂಡು ಮೋಸ ಹೋದನು" ಎಂದು ತಿರಸ್ಕರಿಸಿಯೂ ಬಿಟ್ಟಳು. ಆಗ ಯತ್ನವಿಲ್ಲದೆ ಅವಳನ್ನು, ಹಾಗೆಯೇ ಅತ್ತುಕೊಂಡ ಲಕ್ಷ್ಮಣನನ್ನೂ ಕರೆದುಕೊಂಡು ರಾಮನು ವನಕ್ಕೆ ಹೊರಟನು. ತಂದೆಯಾದ ದಶರಥನು ಅತ್ತನು. ಅಂತಃಪುರದವರೆಲ್ಲ ಅತ್ತರು: ಪರಿ

ಜನರು, ಪುರಜನರು ಅತ್ತರು. ಹಿರಿಯರು ಅತ್ತರು: ಕಿರಿಯರು ಅತ್ತರು. ಆದರೂ ರಾಮ ಲಕ್ಷ್ಮಣರು ಚೀರಧಾರಿಗಳಾಗಿ ಸೀತೆ ಯೊಡನೆ ಕಾಡಿಗೆ ಹೋದರು.

ರಾಮನು ಗುಹನ ಬಳಿಗೆ ಬಂದನು. ಅಲ್ಲಿ ಜಟೆಗಳನ್ನು ಧರಿಸಿ ಮುಂದೆ ಭರದ್ವಾಜಾಶ್ರಮಕ್ಕೆ ಹೋದನು. ಅಲ್ಲಿ "ಉಪಾನಯತ ಗಾಮರ್ಘ್ಯಮುದಕಂತಥಾ*—ಧರ್ಮಾತ್ಮರಾದ ಭರದ್ವಾಜರು ಮಧು ಪರ್ಕವನ್ನು ಕೊಟ್ಟರು" ಅಲ್ಲಿಯೇ ಇರುವಂತೆ ಪ್ರಾರ್ಥಿಸಿದರು. ರಾಮನು ಅದಕ್ಕೆ ಒಪ್ಪದೆ, ವೈದೇಹಿಯೊಪ್ಪುವಂತಹ ವನಸ್ಥಲಯೊಂ ದನ್ನು ನೋಡಿ ಹೇಳಬೇಕೆಂದನು. ಭರದ್ವಾಜರು "ಚಿತ್ರಕೂಟದಲ್ಲಿ ಇರಬಹುದು. ಯಾವತಾ ಚಿತ್ರಕೂಟಸ್ಯ ನರಃ ಶೃಂಗಾಣ್ಯವೇಕ್ಷತೇ। ಕಲ್ಯಾಣಾನಿ ಸಮಾಧತ್ತೇ ನ ಪಾಪೇ ಕುರುತೇ ಮನಃ—ಚಿತ್ರಕೂಟದ ಶೃಂಗಗಳನ್ನು ನೋಡಿದರೆ ಸಾಕು, ಕಲ್ಯಾಣಗಳನ್ನು ಹೊಂದುವನು: ಪಾಪದ ಕಡೆಗೆ ಮನಸ್ಸು ತಿರುಗದು" ಎಂದು ಹೇಳಲು, ಅದ ರಂತೆಯೇ ಮರುದಿನ ರಾಮಾದಿಗಳು ಯಮುನಾನದಿಯನ್ನು ದಾಟಿ ಅಲ್ಲಿಗೆ ಹೋದರು.

ಸೀತಾ ರಾಮ ಲಕ್ಷ್ಮಣರನ್ನು ಗುಹನ ರಾಜ್ಯದಲ್ಲಿ ಬಿಟ್ಟು ಸುಮಂತ್ರನು ಹಿಂತಿರುಗಿದನು: ಆತನಿಂದ ಮಕ್ಕಳ ಸ್ಥಿತಿಯನ್ನು ಅರಿತು ಹೋ ಎಂದು ಅಳುತ್ತಾ ದಶರಥನು ಎರಡು ಮೂರು ದಿನ ಗಳೊಳಗಾಗಿ ಪ್ರಾಣವನ್ನು ಬಿಟ್ಟನು. ಮಂತ್ರಿಗಳು ಆತನ ಶವವನ್ನು ಎಣ್ಣೆ ದೋಣಿಯಲ್ಲಿಟ್ಟು ಭರತನನ್ನು ಕರೆಸಿಕೊಂಡರು. ಆತನು ಆಗಿ ಹೋದುದಕ್ಕಾಗಿ ಅತಿ ವ್ಯಸನಪಟ್ಟು, ತಂದೆಯ ಉತ್ತರಕ್ರಿಯಾದಿ ಗಳನ್ನು ತೀರಿಸಿಕೊಂಡು, ಅಣ್ಣನನ್ನು ಹುಡುಕಿಕೊಂಡು ಹೊರಟನು.

ಚಿತ್ರಕೂಟದಲ್ಲಿ ಗುಡಿಸಲು ಮಾಡಿಕೊಂಡು ಇದ್ದ ರಾಮನು ಒಂದು ದಿನ ಕಾಡಿನಲ್ಲಿ ಗದ್ದಲವಾಗುತ್ತಿರುವುದನ್ನು ಕೇಳಿ, ಅದೇನು

---

*ಭಾರದ್ವಾಜರು ರಾಮನಿಗೆ ಮಧುಪರ್ಕವನ್ನು ಏಕೆ ಕೊಟ್ಟರು ವಿಚಾರಿಸಿ.

ನೋಡೆಂದು ತಮ್ಮನನ್ನು ಕಳುಹಿಸಿದನು. ಆತನು ಬರುತ್ತಿರುವ ಸೇನೆಯನ್ನು ನೋಡಿ, ಅದನ್ನು ಭರತನದೆಂದು ಗುರ್ತಿಸಿದನು. ಆತನಿಗೆ ಕೋಪವು ತಾನೇತಾನಾಯಿತು: "ತನಗೆ ತಾಯಿಂದ ಬಂದ ರಾಜ್ಯವನ್ನು ಪಡೆದುಕೊಂಡು, ಭರತನು ಅದನ್ನು ಅಕಂಟಕ ಮಾಡಿಕೊಳ್ಳಲು, ನಮ್ಮಿಬ್ಬರನ್ನೂ ಕೊಲ್ಲಲು ಬಂದಿರುವನು. ಅವನನ್ನು ಕೊಂದು ಬೇರೆ ಮಾತು." ಎಂದು ಅರ್ಭಟಿಸಿದನು.

ರಾಮನು "ಭರತನು ಮಹಾ ಪ್ರಾಜ್ಞನು. ಆತನು ಬಂದರೆ, ನಮಗೆ ಧನುಸ್ಸು, ಖಡ್ಗಗಳು ಬೇಕಿಲ್ಲ. ನಾನು ಜಟಾಚೀರಧಾರಿಯಾಗಿ ವನವಾಸಕ್ಕೆ ಹೋದೆನೆಂದು ಕೇಳಿ, ಸ್ನೇಹದಿಂದ ನೊಂದ ಹೃದಯದಿಂದ, ಶೋಕದಿಂದ ಕಂಗೆಟ್ಟು, ಭರತನು ನಮ್ಮನ್ನು ನೋಡಲು ಬಂದಿರಬೇಕು. ಈತನು ನಮಗೆ ಅಹಿತವನ್ನು ಮನಸ್ಸಿನಲ್ಲಿಯೂ ಕೋರತಕ್ಕವನಲ್ಲ. ಆತನು ನಮ್ಮನ್ನು ಹಿಂತಿರುಗಿ ಬನ್ನಿ ಎಂದು ಕರೆದರೂ ಕರೆಯಬಹುದು ಆತನೂ ನಮ್ಮಂತೆಯೇ ದಶರಥನ ಮಗನು" ಎಂದು ಹೇಳಿ, "ಸೇನಾಮುಖದಲ್ಲಿ ತಾತನ ಶತ್ರುಂಜಯವೆಂಬ ಆನೆಯು ಕಾಣುತ್ತಿದೆ. ಆದರೆ ಆತನ ಬಿಳಿಯ ಕೊಡೆಯು ಕಾಣದಲ್ಲಾ! ತಾತನೇನಾದನೋ?" ಎಂದು ಶಂಕಿಸಿದನು.

ಭರತನು ಅಣ್ಣನನ್ನು ಹುಡುಕಿಕೊಂಡು ನಡೆದುಕೊಂಡೇ ಬಂದನು. ಗುಹನು ಮುಂದೆ, ಶತ್ರುಘ್ನನು ಜೊತೆಯಲ್ಲಿ, ಸುಮಂತ್ರನು ಹಿಂದೆ ಬರುತ್ತಿರಲು, ಭರತನು ಆಶ್ರಮದ್ವಾರಕ್ಕೆ ಬಂದನು. ವಸಿಷ್ಠರ ಜೊತೆಯಲ್ಲಿ ಮಾತೃವರ್ಗವು ಬಂತು. ಭರತನು ಪುಣ್ಯಾಶ್ರಮದಲ್ಲಿ ಕೃಷ್ಣಾಜಿನವನ್ನುಟ್ಟು ನಾರುಡೆಯನ್ನು ಹೊದೆದಿರುವ ಶ್ರೀರಾಮನನ್ನು ಕಂಡನು. ಅದನ್ನು ಕಂಡು ಅತಿ ದುಃಖಪಟ್ಟು ಆತನ ಬಳಿಗೆ ಓಡಿದನು. "ಈ ಜಟಾಚೀರಗಳನ್ನು ನೋಡಲಾರೆನಲ್ಲಾ! ನನ್ನಿಂದಲ್ಲವೇ ಈ ಮಹಾತ್ಮನಿಗೆ ಈ ಅವಸ್ಥೆಯು ಬಂದುದು!" ಎಂದು ಹೋ ಯೆಂದಳುತ್ತಾ ಆತನ ಪಾದಮೂಲದಲ್ಲಿ ಬಿದ್ದನು. ಆರ್ಯ

ಎಂದನು. ಮುಂದಕ್ಕೆ ಏನೂ ಹೇಳಲಾರದೆ ಹೋದನು. ಎಲ್ಲರೂ ರಾಮನನ್ನು ಕಾಣಿಸಿಕೊಂಡರು.

ತನ್ನಂತೆಯೇ ಜಟೆಯನ್ನೂ ಚೀರವನ್ನೂ ಧರಿಸಿ ಕೈಮುಗಿದು ಕೊಂಡು ನೆಲದಮೇಲೆ ಬಿದ್ದಿರುವ ಭರತನನ್ನು ಬಾಹುಗಳಿಂದ ಹಿಡಿದೆತ್ತಿ, ಆಲಿಂಗಿಸಿ, ತೊಡೆಯಮೇಲೆ ಕೂರಿಸಿಕೊಂಡು ರಾಮನು ಕುಶಲ ಪ್ರಶ್ನೆಗಳನ್ನು ಕೇಳಿದನು. ಆತನು ಕೇಳಿದ ಪ್ರಶ್ನೆಗಳಲ್ಲೆಲ್ಲಾ ಮುಖ್ಯವಾದುದು ಒಂದು : " ಕಚ್ಚಿದರ್ಥೇನ ವಾ ಧರ್ಮಮರ್ಥಂ ಧರ್ಮೇಣವಾ ಪುನಃ । ಉಭೌ ವಾ ಪ್ರೀತಿಲೋಭೇನ ಕಾಮೇನ ಚ ನ ಬಾಧಸೇ ॥ ಕಚ್ಚಿದರ್ಥಂಚ ಧರ್ಮಂಚ ಕಾಮಂಚ ಜಯತಾಂವರ । ವಿಭಜ್ಯ ಕಾಲೇ ಕಾಲಜ್ಞ ಸರ್ವಾನ್ ವರದ ಸೇವಸೇ ॥ ಆಯುಷ್ಯಾಚ ಯಶಸ್ಯಾಚ ಧರ್ಮೇ ಕಾಮಾರ್ಥ ಸಂಹಿತಾ। ಯಾಂ ವೃತ್ತಿಂ ವರ್ತತೇ ತಾತೋ ಯಾಂ ಚ ನಃ ಪ್ರಪಿತಾಮಹಾಃ॥ತಾಂ ವೃತ್ತಿಂ ವರ್ತಸೇ ಕಚ್ಚಿದ್ ಯಾಚ ಸತ್ಪಥಗಾ ಶುಭಾ ॥ ಅರ್ಥದಿಂದ ಧರ್ಮವಾಗಲ, ಧರ್ಮದಿಂದ ಅರ್ಥವಾಗಲಿ, ಧರ್ಮಾರ್ಥಗಳೆರಡೂ ಕಾಮದಿಂದಲಾಗಲೀ ಬಾಧೆಪಡುವುದಿಲ್ಲವಷ್ಟೆ ? ಎಲೈ ಕಾಲಜ್ಞನೆ, ಧರ್ಮಾರ್ಥ ಕಾಮಗಳನ್ನು ಕಾಲಾನುಗುಣವಾಗಿ ಸೇವಿಸುತ್ತಿರುವೆಯಷ್ಟೆ ? ಧರ್ಮ ಕಾಮಾರ್ಥಗಳು ಜೊತೆಗೂಡಿದರೆ ಆಯುಸ್ಸೂ, ಯಶಸ್ಸೂ ಉಂಟು. ತಾತನೂ ಪಿತಾಮಹ ಪ್ರಪಿತಾಮಹರೂ ಅನುಸರಿಸಿದ ಶುಭವಾದ ಸನ್ಮಾರ್ಗವನ್ನು ಅನುಸರಿಸುತ್ತಿರುವೆಯಷ್ಟೆ ? "

ಧರ್ಮಾರ್ಥಕಾಮಗಳು ಒಂದರಿಂದ ಒಂದು ಬಾಧಿತವಾಗದಂತೆ ನಡೆಯಬೇಕು ಎಂಬುದು ವೇದದ ಸಂದೇಶ. ತೈತ್ತಿರೀಯದ ಶಿಕ್ಷಾವಲ್ಲಿಯ ಹನ್ನೊಂದನೆಯ ಅನುವಾಕದಲ್ಲಿ ಹೇಳಿರುವುದನ್ನು ಸ್ಮರಿಸಿ : " ಸತ್ಯಾನ್ನ ಪ್ರಮದಿತವ್ಯಂ । ಧರ್ಮಾನ್ನ ಪ್ರಮದಿತವ್ಯಂ । ಕುಶಲಾನ್ನ ಪ್ರಮದಿತವ್ಯಂ । ಭೂತ್ಯೈ ನ ಪ್ರಮದಿತವ್ಯಂ— ಸತ್ಯ, ಧರ್ಮ, ಕುಶಲ, ಭೂತಿಗಳ ವಿಷಯದಲ್ಲಿ ಮೈಮರೆತಿರಬಾರದು ".

ರಾಮನ ಮಾತನ್ನು ಕೇಳಿ ಭರತನು ನೊಂದುಕೊಂಡು ಹೇಳಿದನು : "ಕಿಂ ಮೇ ಧರ್ಮಾದ್ವಿಹೀನಸ್ಯ ರಾಜಧರ್ಮಃ ಕರಿಷ್ಯತಿ— ಧರ್ಮವೇ ಇಲ್ಲದ ನನಗೆ ರಾಜಧರ್ಮದಿಂದ ಏನಾದೀತು ? ನೀನು ಹಿಂದಿರುಗಿ ಬಾ, ನಮ್ಮ ಕುಲಧರ್ಮವನ್ನು ಕಾಪಾಡು, ನೀನು ಇತ್ತ ಬರುತ್ತಲೂ ಅತ್ತ ಅರಸನು ಸ್ವರ್ಗಕ್ಕೆ ಹೋದನು, ಕೊನೆಯುವರೆಗೂ ನಿನ್ನನ್ನೇ ಸ್ಮರಿಸುತ್ತಿದ್ದನು, ಪಿತೃಕಾರ್ಯವನ್ನು ಮಾಡು" ಎಂದನು.

ಪಿತೃಕಾರ್ಯಗಳು ಮುಗಿದುವು. ಆಗ ಭರತನು—"ರಾಜ್ಯಂ ಪ್ರಾಪ್ನೋಹಿ ಧರ್ಮೇಣ ಸಕಾಮಾಃ ಸುಹೃದಃ ಕುರು.—ಧರ್ಮವಾಗಿ ನಿನ್ನದಾದ ರಾಜ್ಯವನ್ನು ತೆಗೆದುಕೋ. ಸುಹೃದ್ವರ್ಗವೆಲ್ಲ ಸಂತೋಷಪಡಲಿ" ಎಂದನು. "ಕಣ್ಣೀರಿಡುತ್ತ ರಾಮನ ಪಾದಗಳಲ್ಲಿ ಶಿರಸ್ಸನ್ನು ಇಟ್ಟನು. ರಾಮನು ಒಪ್ಪಲಿಲ್ಲ." ರಾಜ್ಯ ಹೇತೋಃ ಕಥಂ ಪಾಪಮಾಚರೇತ್ ಮದ್ವಿಧೋ ಜನಃ—ನನ್ನಂಥಹವರು ರಾಜ್ಯಕ್ಕಾಗಿ ಪಾಪ ಮಾಡುವರೆ ? ಧರ್ಮಶೀಲರಾದ ತಂದೆತಾಯಿಗಳು ಹೇಳಿದಂತಲ್ಲದೆ ಬೇರೆ ನಡೆಯುುವುದೆಂತು ? ನೀನು ಅಯೋಧ್ಯೆಯಲ್ಲಿ ರಾಜ್ಯವಾಳು. ನಾನು ದಂಡಕಾರಣ್ಯದಲ್ಲಿ ಇರುವೆನು. "ಸಚ ಪ್ರಮಾಣಂ ಧರ್ಮಾತ್ಮಾ ರಾಜಾರೋಕಗುರುಃ ॥ ಈ ವಿಷಯದಲ್ಲಿ ಲೋಕಗುರುವೂ ರಾಜನೂ ಧರ್ಮಾತ್ಮನೂ ಆದ ತಂದೆಯು ಹೇಳಿರುವುದೇ ಕೊನೆಯ ಮಾತು" ಎಂದನು.

ಭರತನು ಬೇಕಾದಷ್ಟು ಹೇಳಿದನು: "ನಾನು ಎಲ್ಲದರಲ್ಲಿಯೂ ಚಿಕ್ಕವನು" ಎಂದನು. "ನೀನಿರಲು ನಾನು ರಾಜನಾಗುವುದೇ ?" ಎಂದನು. "ಈಗ ಆದ ಪಾಪವನ್ನು ಕಳೆ" ಎಂದು ಬೇಡಿಕೊಂಡನು. ರಾಮನು ಒಪ್ಪಲಿಲ್ಲ. "ನೀನು ದಶರಥನ ಮಗನಿಗೆ ತಕ್ಕ ಮಾತನ್ನು ಆಡಿದೆ. ಆದರೆ, ಹಿಂದೆ ತಂದೆಯು ನಿನ್ನ ತಾಯಿಯನ್ನು ಮದುವೆ ಮಾಡಿಕೊಂಡಾಗ ಮಾತಾಮಹನು ಈಕೆಯ ಮಗನಿಗೇ ರಾಜ್ಯವಾಗಬೇಕು ಎಂದು ನಿಬಂಧನೆಯನ್ನು ಮಾಡಿಕೊಂಡಿದ್ದನು. ಅದರಂತೇ ನಡೆಯಲಿ" ಎಂದನು.

"ಭರತನು ಹೇಳುವುದು ನ್ಯಾಯವಾಗಿದೆ. ಆದರಂತೆ ಮಾಡು" ಎಂದು ಇದ್ದವರೆಲ್ಲಾ ಹೇಳಿದರು. ವಸಿಷ್ಠರೂ ಹೇಳಿದರು. ರಾಮನು ಕೇಳಲಿಲ್ಲ. ಆಗ ಭರತನು ದರ್ಭೆಗಳನ್ನು ಹಾಸಿ "ರಾಮನು ಪ್ರಸನ್ನನಾಗುವವರೆಗೂ ಏಳುವುದಿಲ್ಲ" ಎಂದು ಅದರ ಮೇಲೆ ಮಲಗಿಬಿಟ್ಟನು. ಆಗ ಪೌರಜಾನಪದ ಜನರೆಲ್ಲರೂ ಹೇಳಿನೋಡಿ, "ರಾಮನು ಪಿತೃವಾಕ್ಯಪರಿಪಾಲಕನು. ಅತನನ್ನು ತಿರುಗಿಸುವುದು ನಮ್ಮಿಂದ ಸಾಧ್ಯವಿಲ್ಲ" ಎಂದರು. ಆಗ ಭರತನು ಮತ್ತೆ "ಹಾಗೆ ತಂದೆಯ ಮಾತಿನಂತೆ ವನವಾಸ ಮಾಡಬೇಕು ಎಂದಾದರೆ, ನಾನು ಹದಿನಾಲ್ಕು ವರ್ಷ ವನವಾಸ ಮಾಡುವೆನು" ಎಂದನು. ಅದನ್ನು ಕೇಳಿ ವಿಸ್ಮಿತನಾಗಿ ರಾಮನು "ಹಾಗಾದರೆ, ಈ ಹದಿನಾಲ್ಕು ವರ್ಷ ವನವಾಸವಾದ ಮೇಲೆ, ನಾನು ಹಿಂತಿರುಗಿ ಬಂದು, ಭ್ರಾತ್ರಾ ಸಹ ಭವಿಷ್ಯಾಮಿ ಪೃಥಿವ್ಯಾಃ ಪತಿಃ—ಈತನೊಡನೆ ನಾನೂ ರಾಜನಾಗುವೆನು" ಎಂದನು. ಕೊನೆಗೆ ಭರತನು "ಅಧಿರೋಹಾರ್ಯ ಪಾದಾಭ್ಯಾಂ ಪಾದುಕೇ ಹೇಮಭೂಷಿತೇ॥ ಏತೇ ಹಿ ಸರ್ವಲೋಕಸ್ಯ ಯೋಗಕ್ಷೇಮಂ ವಿಧಾಸ್ಯತಃ॥ ಈ ಚಿನ್ನದ ಪಾದುಕೆಗಳನ್ನು ಮೆಟ್ಟು. ಇವು ಸರ್ವಲೋಕ ಯೋಗಕ್ಷೇಮವನ್ನು ನೋಡಿಕೊಳ್ಳುವುವು" ಎಂದನು. ರಾಮನು ಹಾಗೆಯೇ ಮಾಡಿದನು. "ನಾನು, ರಾಮ, ನಿನ್ನಂತೆಯೇ ಜಟಾಚೀರಧರನಾಗಿ, ಫಲಮೂಲಾಶನನಾಗಿ ಊರಹೊರಗೆ ನಿನ್ನ ಆಗಮನವನ್ನೇ ನಿರೀಕ್ಷಿಸುತ್ತ ಇರುವೆನು. ರಾಜ್ಯತಂತ್ರವನ್ನು ಈ ಪಾದುಕೆಗಳಲ್ಲಿಡುವೆನು. ಈ ಅವಧಿಯು ಪೂರ್ಣವಾಗುತ್ತಿದ್ದ ಹಾಗೆಯೇ ನಿನ್ನನ್ನು ನೋಡದಿದ್ದರೆ ಬೆಂಕಿಗೆ ಬೀಳುವೆನು" ಎಂದನು. ರಾಮನು ಆಗಲೆಂದನು. ಭರತನು ಪಾದುಕೆಗಳನ್ನು ತಲೆಯಮೇಲಿಟ್ಟುಕೊಂಡು ಹಿಂದಿರುಗಿದನು. ಅಯೋಧ್ಯೆಯ ಹೊರಗೆ ನಂದಿಗ್ರಾಮವೆಂಬ ಊರನ್ನು ಕಟ್ಟಿಕೊಂಡು, ಅಲ್ಲಿ ಸಿಂಹಾಸನದ ಮೇಲೆ ರಾಮಪಾದುಕೆಗಳನ್ನು ಇಟ್ಟು ತಾನು ರಾಮದಾಸನಾಗಿ ರಾಜ್ಯವಾಳುತ್ತಿದ್ದನು.

೯. ಸುಗ್ರೀವ ಪಟ್ಟಾಭಿಷೇಕ

ಸೀತಾಲಕ್ಷ್ಮಣರೊಡನೆ ರಾಮನು ಚಿತ್ರಕೂಟವನ್ನು ಬಿಟ್ಟು, ಅತ್ರಿ ಋಷಿಗಳ ಆಶ್ರಮಕ್ಕೆ ಬಂದು ಅಲ್ಲಿಂದ ದಂಡಕಾರಣ್ಯಕ್ಕೆ ಬಂದನು. ಅಲ್ಲಿ ವಿರಾಧ ವಧೆಯಾಯಿತು. ಶರಭಂಗನ ಆಶ್ರಮದಲ್ಲಿ ಸೂರ್ಯಾಗ್ನಿಗಳಂತೆ ಮೆರೆಯುವ ಇಂದ್ರ ರಥವನ್ನು ಅವರು ಕಂಡರು. ಸುತೀಕ್ಷ್ಣರ ದರ್ಶನಮಾಡಿ ಅಲ್ಲಿಂದ ಅಗಸ್ತ್ಯಾಶ್ರಮಕ್ಕೆ ಬಂದು ಅಲ್ಲಿ ಇಲ್ವಲ ವಾತಾಪಿಗಳ ಕಥೆಯನ್ನು ಕೇಳಿ, ಅಲ್ಲಿಂದ ಪಂಚವಟಿಗೆ ಬಂದರು. ಅಲ್ಲಿ ದಶರಥನ ಮಿತ್ರನಾದ ಜಟಾಯುವಿನ ಸ್ನೇಹವಾಯಿತು. ಅಲ್ಲಿಯೇ ಶೂರ್ಪನಖಾನಿಮತ್ತವಾಗಿ ಖರಾದಿ ವಧೆಯಾಗಿ, ಅದೇ ಕಾರಣದಿಂದ ಸೀತಾಪಹರಣವೂ ಆಯಿತು. ರಾಮಲಕ್ಷ್ಮಣರು ಸೀತೆಯನ್ನು ಹುಡುಕಿಕೊಂಡು ಹೊರಟರು. ದಾರಿಯಲ್ಲಿ ಕಬಂಧನು ಅವರನ್ನು ಹಿಡಿದನು. ಅವನನ್ನು ಸಂಹರಿಸಿ, ಪೂರ್ವಜನ್ಮವನ್ನು ಪಡೆದ ಅವನಿಂದ ತಮಗೆ ಸುಗ್ರೀವನಿಂದ ಸಹಾಯವಾಗುವುದೆಂದು ತಿಳಿದು ರಾಮಲಕ್ಷ್ಮಣರು ಆತನಿದ್ದ ಋಷ್ಯಮೂಕಪರ್ವತದ ಕಡೆಗೆ ಹೋದರು. ದಾರಿಯಲ್ಲಿ ಶಬರಿಯ ಆತಿಥ್ಯವಾಯಿತು. ಆಕೆಯು "ಅದ್ಯಮೇ ಸಫಲಂ ಜನ್ಮ ಸ್ವರ್ಗಶ್ಚೈವ ಭವಿಷ್ಯತಿ। ತ್ವಯಿ ದೇವವರೇ ರಾಮ ಪೂಜಿತೇ ಪುರುಷರ್ಷಭ। ಜಗಮಿಷ್ಯಾಮ್ಯಕ್ಷಯಾಂ ಲ್ಲೋಕಾನ್ ತ್ವತ್ಪ್ರಸಾದಾದರಿಂದಮ—ರಾಮ, ಈಗ ನನ್ನ ಜನ್ಮವು ಸಫಲವಾಯಿತು. ದೇವಶ್ರೇಷ್ಠನಾದ ನಿನ್ನನ್ನು ಪೂಜಿಸಿದೆನು. ನನಗೆ ಸ್ವರ್ಗವು ಸಿಕ್ಕುವುದು. ನಿನ್ನ ಪ್ರಸಾದದಿಂದ ಅಕ್ಷಯವಾದ ಲೋಕಗಳನ್ನು ಹೊಂದುವೆನು" ಎಂದಳು.* ರಾಮನು ಲಕ್ಷ್ಮಣನೊಡನೆ ಪಂಪಾಸರೋವರಕ್ಕೆ ಬಂದನು.

---

* ತಪಸ್ವಿನಿಯಾದ ಶಬರಿಯು ರಾಮನನ್ನು ದೇವವರ ಎನ್ನುವುದನ್ನು ಗಮನಿಸಿ.

ಸುಗ್ರೀವನು ಅವರನ್ನು ಕಂಡು ಇವರು ಯಾರು ನೋಡಿ ಬಾ ಎಂದು ಹನುಮಂತನನ್ನು ಕಳುಹಿಸಿದನು. ಆತನು ಅವರನ್ನು ಕರೆ ತಂದು ಸುಗ್ರೀವನಿಗೂ ಅವರಿಗೂ ಸಖ್ಯವನ್ನು ಮಾಡಿಸಿದನು. ರಾಮನು ನಿನ್ನ ಶತ್ರುವನ್ನು ವಧೆಮಾಡಿ ನಿನಗೆ ರಾಜ್ಯವನ್ನೂ ರಾಜ್ಞಿ ಯನ್ನೂ ಕೊಡಿಸುವೆನೆಂದನು. ಸುಗ್ರೀವನು ಸೀತಾನ್ವೇಷಣ ಮಾಡಿ, ಶತ್ರು ಸಂಹಾರ ಮಾಡಲು ಸಹಾಯ ಮಾಡುವೆನೆಂದನು.

ಮರುದಿವಸ ಸುಗ್ರೀವನು ರಾಮಲಕ್ಷ್ಮಣರೊಡನೆ ಹೋಗಿ ವಾಲಿಯುನ್ನು ಯುದ್ಧಕ್ಕೆ ಕರೆದನು. ವಾಲಿ ಸುಗ್ರೀವರಿಗೆ ಯುದ್ಧ ವಾಯಿತು. ವಾಲಿಯಾರು? ಸುಗ್ರೀವನಾರು? ಎಂಬುದನ್ನು ಅರಿಯಲಾರದೆ ರಾಮನು ಅಂದು ಸುಮ್ಮನಿದ್ದನು. ಸುಗ್ರೀವನಿಗೆ ಸೋಲಾಯಿತು: ಸುಗ್ರೀವನು ರೇಗಿದನು. ರಾಮನು ಅವನಿಗೆ ಸಮಾಧಾನವನ್ನು ಹೇಳಿ ಮರುದಿನ ಮತ್ತೆ ಯುದ್ಧಕ್ಕೆ ಕಳುಹಿಸಿದನು. ಅವರಿಬ್ಬರೂ ಯುದ್ಧಮಾಡುತ್ತಿರುವಾಗ ರಾಮನು ತೀವ್ರಶರದಿಂದ ವಾಲಿಯನ್ನು ಹೊಡೆದು ಕೆಡಹಿದನು.

ವಾಲಿಯು ಕೇಳಿದನು: "ನನ್ನನ್ನು ಹೀಗೆ ಪರಾಙ್ಮುಖವಧಮಾಡಿ ನಿನಗೇನು ಬಂತು? ನ ತ್ವಾಂ ವಿನಿಹತಾತ್ಮಾನಂ ಧರ್ಮಧ್ವಜಮ ಧಾರ್ಮಿಕಂ। ಜಾನೇ ಪಾಪ ಸಮಾಚಾರಂ ತೃಣೈಃ ಕೂಪಮಿವಾ ವೃತಂ। ಸತಾಂ ವೇಷಧರಂ ಪಾಪಂ ಪ್ರಚ್ಛನ್ನಮಿವ ಪಾವಕಂ— ಆತ್ಮದ್ರೋಹ ಮಾಡಿಕೊಂಡವನು ನೀನು. ಧರ್ಮಧ್ವಜನು. ಅಧಾ ರ್ಮಿಕನು. ಹುಲ್ಲಿನಿಂದ ಮುಚ್ಚಿದ ಬಾವಿಯಂತೆ ಪಾಪಚಾರಿಯು. ನೀನು ಸತ್ಪುರುಷವೇಷಧಾರಿಯಾದ ಪಾಪಿಯು. ಅಡಗಿದ ಬೆಂಕಿ ಯಂಥವನು" ಎಂದು ಮುಂತಾಗಿ ತೋರಿದಂತೆ ಬಯ್ದನು.

ಆಗ ರಾಮನು ಹೇಳಿದನು: "ಧರ್ಮಮರ್ಥಂ ಚ ಕಾಮಂ ಚ ಸಮಯಂ ಚಾಪಿ ಲೌಕಿಕಂ। ಅವಿಜ್ಞಾಯ ಕಥಂ ಬಾಲ್ಯಾನ್ಮಾ ಮಿಹಾದ್ಯ ವಿಗರ್ಹಸೇ॥ ಅಪೃಷ್ಟ್ವಾ ಬುದ್ಧಿಸಂಪನ್ನಾನ್ ವೃದಾ ನಾಚಾರ್ಯಸಂಮತಾನ್—ಧರ್ಮ, ಅರ್ಥ, ಕಾಮ, ಸಮಯ,

ಲೌಕಿಕ, ಇವುಗಳನ್ನೆಲ್ಲಾ ನೋಡದೆ, ಬುದ್ಧಿ ಸಂಪನ್ನರೂ ವೃದ್ಧರೂ ಆಚಾರ್ಯ ಸಂಮತರೂ ಆದವರನ್ನು ಸೇವಿಸದೆ, ಬಾಲನಂತೆ, ನನ್ನನ್ನು ನೀನು ಹೇಗೆ ತೆಗಳುವೆ ? ಇಕ್ಷ್ವಾಕೂಣಾಮಿಯಂ ಭೂಮಿಸ್ಸ ಶೈಲವನ ಕಾನನಾ। ತಾಂ ಪಾಲಯತಿ ಧರ್ಮಾತ್ಮಾ ಭರತಸ್ಸತ್ಯವಾನೃಜುಃ॥ ತಸ್ಯ ಧರ್ಮಕೃತಾದೇಶಾ ವಯ ಮನ್ಯೇ ಚ ಪಾರ್ಥಿವಾಃ। ಚರಾಮೋ ವಸುಧಾಂ ಕೃತ್ಸ್ನಾಂ ಧರ್ಮಸಂತಾನ ಮಿಚ್ಛವಃ। ಸೂಕ್ಷ್ಮಃ ಪರಮ ದುರ್ಜ್ಞೇಯಃ ಸತಾಂ ಧರ್ಮಃ ಪ್ಲವಂಗಮ। ಹೃದಿಸ್ಥಃ ಸರ್ವಭೂತಾನಾಮಾತ್ಮಾ ವೇದ ಶುಭಾಶುಭಂ॥ ಔರಸೀಂ ಭಗಿನೀಂ ವಾಪಿ ಭಾರ್ಯಾಂ ವಾಪ್ಯನುಜಸ್ಯ ಯಃ। ಪ್ರಚರೇತ ನರಃ ಕಾಮಾತ್ತಸ್ಯ ದಂಡೋ ವಧಃ ಸ್ಮೃತಃ॥ ಭರತಸ್ತು ಮಹೀಪಾಲಃ ವಯಂ ಚಾದೇಶವರ್ತಿನಃ। ತ್ವಂತು ಧರ್ಮಾದತಿಕ್ರಾಂತಃ ಕಥಂ ಶಕ್ಯಮುಪೇಕ್ಷಿತುಂ—ಬೆಟ್ಟ ಕಾಡು ಮೇಡುಗಳಿಂದ ಕೂಡಿದ ಈ ಭೂಮಿಯೆಲ್ಲವೂ ಇಕ್ಷ್ವಾಕುಗಳದು. ಸತ್ಯವಂತನೂ ಋಜುವೂ ಧರ್ಮಾತ್ಮನೂ ಆದ ಭರತನು ಈಗ ಈ ಭೂಮಿಯನ್ನು ಪಾಲಿಸುತ್ತಿರುವನು. ನಾವೂ ಇತರ ಪಾರ್ಥಿವರೂ ಆತನ ಅಪ್ಪಣೆಯಂತೆ ಧರ್ಮನಿರೀಕ್ಷಣಕ್ಕಾಗಿ ಈ ಭೂಮಿಯಲ್ಲಿ ಚರಿಸುತ್ತಿರುವೆವು. ಕಪೀಂದ್ರ, ಸತ್ಪುರುಷರ ಧರ್ಮವು ಸೂಕ್ಷ್ಮವು: ಸುಲಭವಾಗಿ ಅರಿಯಬರುವುದಿಲ್ಲ. ಧರ್ಮಫಲವಾದ ಶುಭಾಶುಭಗಳನ್ನು ಸರ್ವಭೂತಗಳ ಹೃದಯದಲ್ಲಿಯೂ ಇರುವ ಆತ್ಮನು ತಿಳಿಯುವನು. ಮಗಳು, ತಂಗಿ, ತಮ್ಮನ ಹೆಂಡತಿ, ಇವರನ್ನು ಕಾಮದಿಂದ ಬಳಸುವ ನರನಿಗೆ ವಧವೇ ದಂಡವು. ಅರಸನು ಭರತನು. ನಾವು ಆತನ ಆಜ್ಞೆಯಂತೆ ನಡೆಯುವವರು. ನೀನು ಧರ್ಮವನ್ನು ಬಿಟ್ಟವನು. ಹೀಗಿರಲು ಉಪೇಕ್ಷಿಸುವುದು ಹೇಗೆ ?" ಎಂದು ವಿಸ್ತಾರವಾಗಿ ಅವನಿಗೆ ನಂಬುಗೆ ಹುಟ್ಟುವಂತೆ ಹೇಳಿದನು.

ಧರ್ಮವನ್ನು ಹೇಳುವವರು ಸಕಾರಣವಾಗಿ ಹೇಳಬೇಕು. ಧರ್ಮಾಧರ್ಮಗಳು ನಾವು ಎಂದು ಎಲ್ಲಿಯೂ ಹಣೆಯ ಮೇಲೆ

ಬರೆದುಕೊಂಡು ತಿರುಗುತ್ತಿಲ್ಲ. ಅದರಿಂದ ಸನ್ನಿವೇಶ, ಸಂದರ್ಭ, ಮೊದಲಾದವುಗಳನ್ನು ನೋಡಿ ಗೊತ್ತುಮಾಡಬೇಕು. ಅದಕ್ಕೇ ವಾಲಿಯು ಹೇಳಿದ್ದು. "ತ್ವಂ ಹಿ ದೃಷ್ಟಾರ್ಥತತ್ವಜ್ಞಃ ಪ್ರಜಾನಾಂ ಚ ಹಿತೇ ರತಃ। ಕಾರ್ಯಕಾರಣಸಿದ್ಧೌ ತೇ ಪ್ರಸನ್ನಾ ಬುದ್ಧಿರವ್ಯಯಾ—ನೀನು ಗುರಿಯನ್ನು ಅರಿತವನು. ತತ್ವವನ್ನು ಬಲ್ಲವನು. ಪ್ರಜೆಗಳ ಹಿತವನ್ನು ಆಚರಿಸತಕ್ಕವನು. ಯಾವ ಕಾರ್ಯಕ್ಕೆ ಯಾವ ಕಾರಣವೆಂಬುದನ್ನು ತಿಳಿಸುವುದರಲ್ಲಿ ನಿರ್ಮಲವಾದ ನಿನ್ನ ಬುದ್ಧಿಯು ಸ್ಥಿರವಾಗಿರುವುದು."

ಮುಂದೆ ವಾಲಿಯು ಕೋರಿಕೆಯಂತೆ ರಾಮನು ಅಂಗದನಿಗೆ ಯೌವರಾಜ್ಯಾಭಿಷೇಕವನ್ನೂ ಸುಗ್ರೀವನಿಗೆ ಕಪಿರಾಜ್ಯಾಭಿಷೇಕವನ್ನೂ ಮಾಡಿದನು.

ಮೂರನೆಯದು ವಿಭೀಷಣ ಪಟ್ಟಾಭಿಷೇಕ. ಈ ಮಧ್ಯದಲ್ಲಿ ಸುಂದರ ಕಾಂಡದಲ್ಲಿನ ಎರಡು ಅಂಶಗಳನ್ನು ನೋಡಿ ಮುಂದೆ ಹೋಗೋಣ. ಸುಗ್ರೀವನು ಸೀತಾನ್ವೇಷಣಾರ್ಥವಾಗಿ ಕಳುಹಿಸಿದ ಕಪಿವೀರರಲ್ಲಿ ಅಂಗದ, ಹನುಮ, ಸುಗ್ರೀವಾದಿಗಳಿದ್ದ ಗುಂಪು ಸಂಪಾತಿಯಿಂದ ಸೀತೆಯಿದ್ದ ಸ್ಥಳವನ್ನು ತಿಳಿಯಿತು. ಸಮುದ್ರ ಮಧ್ಯದಲ್ಲಿದ್ದ ಲಂಕೆಗೆ ಹೋಗಿಬರಲು ವೃದ್ಧನಾದ ಜಾಂಬುವನು ಹನುಮಂತನೇ ಸರಿಯೆಂದನು. ಆತನು ವಿಸ್ತೀರ್ಣವಾದ ಆ ಸಮುದ್ರವನ್ನು ದಾಟಲು ತಕ್ಕ ರೂಪವನ್ನು ಧರಿಸಿದನು.

ಇದನ್ನು ಕೆಲವರು ಮಕ್ಕಳಾಟಿಕೆಯೆನ್ನುತ್ತಾರೆ. ದೇಹವು ಬೇರೆ, ದೇಹದಲ್ಲಿರುವ ಆತ್ಮನು ಬೇರೆ, ಎನ್ನುವವರು ದೇಹವು ಪಂಚ ಭೂತಗಳ ಸಂಘಾತ ಎನ್ನುತ್ತಾರೆ. ಬ್ರಹ್ಮಜ್ಞರೂ ಯೋಗಜ್ಞರೂ ಈ ಪಂಚಭೂತಗಳನ್ನು ಸ್ವೇಚ್ಛೆಯಾಗಿ ತಿರುಗಿಸಬಲ್ಲರು. ಇದನ್ನು ಉಪನಿಷತ್ತುಗಳು ಒಪ್ಪಿವೆ: ಬ್ರಹ್ಮಜ್ಞನು ಕಾಮರೂಪೀ, ಕಾಮಾನ್ನೀ ಆಗುತ್ತಾನೆಂದು ಹೇಳಿದೆ. ಯೋಗಸೂತ್ರದಲ್ಲಿ ಮೂರನೆಯ ವಿಭೂತಿ ಪಾದದ ಸೂತ್ರ ೪೫ರಲ್ಲಿ ಭೂತಜಯವನ್ನೂ ೪೭ರಲ್ಲಿ ಅದರಿಂದ

ಆಗುವ ಅಣಿಮಾದಿಪ್ರಾದುರ್ಭಾವವನ್ನೂ ಹೇಳಿದೆ. ಈಗಲೂ ಟಿಬೆಟ್ಟಿನಲ್ಲಿ ಭೂತಜಯಮಾಡಿ ಖೇಚರರಾಗಿರುವ ಅನೇಕರು ಇದ್ದಾರೆ. ಅಲ್ಲದೆ ಕ್ಷೀರೀಯೋಗಮಾಡಿದರೆ ದೇಹವು ಆನೆಯ ಗಾತ್ರವಾಗುತ್ತದೆ ಯಂತೆ. ಹಾಗೆಯೇ ಖಂಡಯೋಗದಿಂದ ದೇಹವನ್ನು ತುಂಡು ತುಂಡುಮಾಡಿ ಎಸೆಯುವವರಿದ್ದಾರೆ. ಈಗ ನಮ್ಮ ಕಣ್ಣೆದುರಿಗೇ ನಿದ್ರಾ ಜಲಮಲಗಳನ್ನು ಜಯಿಸಿ ಎಂಟು ಹತ್ತು ದಿನ ಕೂತಕಡೆ ಕುಳ್ಳಿರುವ ಶ್ರೀ ಬಾಬೂ ದೀಕ್ಷಿತರಿದ್ದಾರೆ. ಅದರಿಂದ ಇದು ಮಕ್ಕಳಾಟಿಕೆ ಯೆನ್ನುವುದು ಮಕ್ಕಳಾಟಿಕೆ.

ಇನ್ನೊಂದಂಶ. ಧರ್ಮದ ಸ್ವರೂಪವೇನು ? ಹೊರಗಿನ ಕಾರ್ಯವೇ ? ಅಥವಾ ಮನೋವೃತ್ತಿಯೇ ? ಎಂಬುದು ಒಂದು ದೊಡ್ಡ ವಿಷಯ. ಇದಕ್ಕೆ ಆಂಜನೇಯನು ಉತ್ತರವನ್ನು ಕೊಟ್ಟಿದ್ದಾನೆ. ರಾವಣನ ಅಂತಃಪುರದಲ್ಲಿ ಸೀತೆಯನ್ನು ಹುಡುಕುವಾಗ ಆತನು ವಿವಸ್ತ್ರೆಯರಾದ ಹಲವರನ್ನು ನೋಡುತ್ತಾನೆ. ಆಗ ಬ್ರಹ್ಮಚಾರಿ ಯಾದ ತಾನು ಹೆಂಗಸರನ್ನು ಹಾಗೆ ಕಂಡುದು ಸರಿಯೇ ? ಎಂದು ಆತನಿಗೇ ಶಂಕೆ ಬರುತ್ತದೆ. ಆಗ ಆತನು ಈ ಮಾತನ್ನು ಹೇಳು ತ್ತಾನೆ : " ಪರದಾರಾವರೋಧಸ್ಯ ಪ್ರಸುಪ್ತಸ್ಯ ನಿರೀಕ್ಷಣಂ ಇದಂ ಖಲು ಮಮಾತ್ಯರ್ಥಂ ಧರ್ಮಲೋಪಂ ಕರಿಷ್ಯತಿ—ಮಲಗಿ ನಿದ್ದೆ ಮಾಡುತ್ತಿರುವ ಪರಸ್ತ್ರೀಯರನ್ನು ನೋಡುವುದರಿಂದ ನನಗೆ ಪ್ರಬಲ ವಾದ ಧರ್ಮಲೋಪವು ಬರುವುದಲ್ಲವೆ ? ಆದರೆ, ನ ಹಿ ಮೇ ಪರ ದಾರಾಣಾಂ ದೃಷ್ಟಿರ್ವಿಷಯವರ್ತಿನೀ—ನಾನು ಈ ಪರಸ್ತ್ರೀಯ ರನ್ನು ನೋಡಿದೆನಾದರೂ ನನ್ನ ದೃಷ್ಟಿಯು ವಿಷಯಭೋಗಮಯ ವಾಗಿರಲಿಲ್ಲ : ಕಾಮಂ ದೃಷ್ಟ್ವಾ ಮಯಾ ಸರ್ವಾ ವಿಶ್ವಸ್ತಾ ರಾವಣ ಸ್ತ್ರಿಯಃ ‖ ನ ಹಿ ಮೇ ಮನಸಃ ಕ್ವಚಿದ್ವೈಕೃತ್ಯಮುಪಪದ್ಯತೇ ‖ ಮನೋ ಹಿ ಹೇತುಸ್ಸರ್ವಾಣಾಂ ವಿಷಯಾಣಾಂ ಪ್ರವರ್ತನೇ ‖ ಶುಭಾಶುಭಾಸ್ವವಸ್ಥಾಸು ತಚ್ಚ ಮೇ ಸುವ್ಯವಸ್ಥಿತಂ ‖.... ತಾವಚ್ಛು ದ್ಧೇನ ಮನಸಾ ರಾವಣಾಂತಃಪುರಂ ಸರ್ವಂ ದೃಶ್ಯತೇ........

ಈ ರಾವಣಸ್ತ್ರೀಯರು ಮೈಮರೆತಿರುವಾಗ ಅವರೆಲ್ಲರನ್ನೂ ಬೇಕಾದ ಹಾಗೆ ನೋಡಿದೆನು : ಆದರೂ ನನ್ನ ಮನಸ್ಸಿನಲ್ಲಿ ಎಳ್ಳಷ್ಟೂ ವಿಕಾರವು ತೋರಲಿಲ್ಲ. ಶುಭ, ಅಶುಭ, ಅವಸ್ಥೆಗಳೆರಡರಲ್ಲೂ ಯಾವ ವಿಷಯ ಗಳಲ್ಲೇ ಆಗಲಿ, ಪ್ರವೃತ್ತಿಯು ಹುಟ್ಟುವುದಕ್ಕೆ ಮನಸ್ಸೇ ಕಾರಣವು. ಆ ಮನಸ್ಸು ನನಗೆ ಸಮಾಧಾನವಾಗಿಯೇ ಇರುವುದು : ಶುದ್ಧವಾದ ಮನಸ್ಸಿನಿಂದಲೇ ರಾವಣನ ಅಂತಃಪುರವೆಲ್ಲವನ್ನೂ ನೋಡಿದೆನು.''

ಹಿಂದೆ ವಾಲಿವಧಕಾಲದಲ್ಲಿ ರಾಮನು ಧರ್ಮನಿರ್ಣಯವನ್ನು ಕುರಿತು ಹೇಳುವಾಗ, ಅರ್ಥ, ಕಾಮ, ಸನ್ನಿವೇಶ (ಸಮಯ), ಸಂದರ್ಭ (ಲೌಕಿಕ) ಎಂಬ ಬಾಹ್ಯಕರಣಗಳನ್ನು ಹೇಳಿದರೆ, ಆತನ ಪರಮ ಭೃತ್ಯನು ಅಂತಃಕರಣವು ಮುಖ್ಯವೆನ್ನುತ್ತಾನೆ. ಧರ್ಮಾ ಚಾರ್ಯರು॥ ಚೋದನಾರ್ಥೋ ಲಕ್ಷಣೋ ಧರ್ಮಃ—ಧರ್ಮವು ಅಂತಃ ಕರಣದಲ್ಲಾಗುವ ಪ್ರಚೋದನೆಗೆ ಮೂಲವು. ಪುರುಷನನ್ನು ಕಾರ್ಯ ಪರವಾಗುವಂತೆ ಮಾಡುವ ಮನೋವೃತ್ತಿಯೇ ಧರ್ಮಮೂಲವು. ಆ ಮನೋವೃತ್ತಿ ಮೂಲವು ಅಪೌರುಷೇಯವಾದರೆ ಅದು ಧರ್ಮವು'' ಎನ್ನುತ್ತಾರೆ. ಇದನ್ನು ಅನುಸಂಧಾನಮಾಡಿ.

೧೦. ವಿಭೀಷಣ ಪಟ್ಟಾಭಿಷೇಕ

ವಿಭೀಷಣನು ತಾನು ಹೇಳಿದ ಬುದ್ಧಿವಾದವನ್ನು ಕೇಳದೆ ತಿರಸ್ಕಾರ ಮಾಡಿದ ಅಣ್ಣನನ್ನು ಬಿಟ್ಟು, ತನ್ನ ನಾಲ್ವರು ಮಂತ್ರಿಗಳೊಡನೆ ರಾಮನಿಗೆ ಶರಣಾಗಲು ಬರುತ್ತಾನೆ. ಸುಗ್ರೀ ವಾದಿಗಳೆಲ್ಲರೂ ಅವನು ಶತ್ರುವೆನ್ನುತ್ತಾರೆ. ಹನುಮಂತನು ಆತನನ್ನು ಸೇರಿಸಿಕೊಳ್ಳಬೇಕೆನ್ನುತ್ತಾನೆ. ರಾಮನೂ ಒಪ್ಪುತ್ತಾನೆ. ಆದರೂ ಸುಗ್ರೀವನು, ''ಸ ವಧ್ಯಸ್ಸಚಿವೈಸ್ಸಹ । ರಾವಣಸ್ಯ ನೃಶಂಸಸ್ಯ ಭ್ರಾತಾಹ್ಯೇಷ ವಿಭೀಷಣಃ—ಪಾಪಿಯಾದ ರಾವಣನ ತಮ್ಮನಾದ ಈ ವಿಭೀಷಣನೂ ಅವನ ಮಂತ್ರಿಗಳೂ ವಧ್ಯರೇ ಸರಿ'' ಎನ್ನುತ್ತಾನೆ.

ರಾಮನು ಅದಕ್ಕೆ ಒಪ್ಪುವುದಿಲ್ಲ. ತನ್ನ ಬಲವೇನು ಎಂಬು ದನ್ನು ಹೇಳುತ್ತಾನೆ: "ವಿಭೀಷಣನು, ದುಷ್ಟನಾಗಲಿ, ಸಾಧುವಾಗಲಿ, ಸೂಕ್ಷ್ಮಮಪ್ಯಹಿತಂ ಕರ್ತುಂ ಮಮಾಶಕ್ತಃ ಕಥಂಚನ—ಅವನು ಹೇಗೆ ಹೇಗೂ ನನಗೆ ಎಳ್ಳಷ್ಟೂ ಅಹಿತವನ್ನು ಮಾಡಲಾರನು. ಪಿಶಾ ಚಾನ್ ದಾನವಾನ್ ಯಕ್ಷಾನ್ ಪೃಥಿವ್ಯಾಂಚೈವ ರಾಕ್ಷಸಾನ್। ಅಂಗುಲ್ಯ ಗ್ರೇಣ ಹನ್ಯಾಮಿ ಇಚ್ಛನ್ ಹರಿಗಣೇಶ್ವರ—ಭೂಮಿಯಲ್ಲಿರುವ ಪಿಶಾಚ ದಾನವ ಯಕ್ಷ ರಾಕ್ಷಸರನ್ನೆಲ್ಲಾ ಬೇಕೆಂದರೆ ಒಂದು ಬೆರಳು ತುದಿ ಯಿಂದ ಧ್ವಂಸಮಾಡೇನು! ಕಪೋತವು ಶರಣಾಗತನನ್ನು ಕಾಪಾಡಿದ ಕಥೆಯನ್ನು ಕೇಳಿಲ್ಲವೆ? ಕಣ್ವಪುತ್ರನಾದ ಕಂಡುವು ಹೇಳಿದ ಗಾದೆಯನ್ನು ಕೇಳಿಲ್ಲವೇ? ಶತ್ರುವೇ ಆಗಲಿ ಶರಣಾಗತ ನಾದರೆ ಕಾಪಾಡಬೇಕಲ್ಲವೆ? ಅಲ್ಲದೆ ನನ್ನ ವ್ರತವೇನು ಬಲ್ಲೆಯಾ? ಸಕೃದೇವ ಪ್ರಪನ್ನಾಯ ತವಾಸ್ಮೀತಿ ಯಾಚತೇ। ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ವ್ರತಂ ಮಮ॥ ಒಂದೇ ಒಂದು ಸಲ ನಿನ್ನವನೆಂದು ಕೈಮುಗಿದು ಶರಣಾಗತನಾದರೆ ಸಾಕು, ಅವನು ಯಾರೇ ಆಗಲಿ, ಅಭಯವನ್ನು ಕೊಡುವೆನು. ಇದು ನನ್ನ ವ್ರತವು. ಅದರಿಂದ, ಆನಯೈನಂ ಹರಿಶ್ರೇಷ್ಠ ದತ್ತಮಸ್ಯಾಭಯಂ ಮಯಾ॥ ವಿಭೀಷಣೋ ವಾ ಸುಗ್ರೀವ ಯದಿ ವಾ ರಾವಣಸ್ಸ್ವಯಂ—ಎಲೈ ಹರಿಶ್ರೇಷ್ಠನೆ, ಅವನನ್ನು ಕರೆದುತಾ: ಅವನು ವಿಭೀಷಣನಲ್ಲದೆ ಸ್ವಯಂ ರಾವಣನೇ ಆಗಿದ್ದರೂ ಅವನಿಗೆ ಅಭಯವನ್ನು ಕೊಟ್ಟಿರು ವೆನು" ಎಂದನು. ಆಗ ಸುಗ್ರೀವನು ಹೇಳಿದ ಮಾತೂ ಶ್ರಾವ ವಾದುದು. "ಕಿಮತ್ರ ಚಿತ್ರಂ ಧರ್ಮಜ್ಞ ಲೋಕನಾಥ ಸುಖಾವಹ। ಯತ್ತ್ವಮಾರ್ಯಂ ಪ್ರಭಾಷೇಥಾಃ ಸತ್ತ್ವವಾನ್ ಸತ್ಪಥೇ ಸ್ಥಿತಃ— ಧರ್ಮಜ್ಞನೇ, ಲೋಕನಾಥನೇ, ಸುಖಸ್ವರೂಪನೇ, ನೀನು ಸತ್ತ್ವ ಶಾಲಿಯೂ, ಸತ್ಪಥದಲ್ಲಿ ಇರುವವನು. ನೀನು ಹೇಳಿದುದು ಸರಿಯಾ ಗಿರುವುದರಲ್ಲಿ ಆಶ್ಚರ್ಯವೇನು?" ಇಷ್ಟೇ ಅಲ್ಲ. ಇನ್ನೂ ಅಷ್ಟಿದೆ. "ಮಮ ಚಾಪ್ಯಂತರಾತ್ಮಾಯಂ ಶುದ್ಧಂ ವೇತ್ತಿ ವಿಭೀಷಣಂ।

ಅನುಮಾನಾಚ್ಚ ಭಾವೇಚ್ಚ ಸರ್ವತಃ ಸುಪರೀಕ್ಷಿತಃ—ನಾನೂ ಆತನ ಆಚಾರವನ್ನು ನೋಡಿದ್ದರಲ್ಲಿ, ಭಾವವನ್ನು ಅರಿತದ್ದರಲ್ಲಿ, ಚೆನ್ನಾಗಿ ಪರೀಕ್ಷೆಮಾಡಿ ನೋಡಿದ್ದರಲ್ಲಿ, ನನ್ನ ಅಂತರಾತ್ಮವೂ ವಿಭೀಷಣನು ಶುದ್ಧನೆನ್ನುತ್ತದೆ.''

ವಿಭೀಷಣನಿಗೆ ರಾಕ್ಷಸ ರಾಜ್ಯ ಪಟ್ಟಾಭಿಷೇಕವಾಯಿತು.

೧೧. ಶ್ರೀರಾಮಪಟ್ಟಾಭಿಷೇಕ

ಇಲ್ಲಿ ನಾವು ನೋಡಬೇಕಾದುದು ಮೂರೇ ಅಂಶ. ಮೊದಲನೆಯದು ಸಮುದ್ರಶರಣಾಗತಿ. ರಾಮನು ವಿಭೀಷಣ ವಚನದಂತೆ, ಸಮುದ್ರವನ್ನು ಶರಣುಹೋಗಿ ದರ್ಭಾಸನದಲ್ಲಿ ಮಲಗುತ್ತಾನೆ. ಮೂರು ರಾತ್ರಿಯಾದರೂ ಸಮುದ್ರನು ಪ್ರಸನ್ನನಾಗಲಿಲ್ಲ. ಆಗ ರಾಮನೆದ್ದು "ಕ್ಷಮಯಾ ಹಿ ಸಮಾಯುಕ್ತಂ ಮಾಮಯಂ ಮಕರಾಲಯಃ। ಅಸಮರ್ಥಂ ವಿಜಾನಾತಿ, ಧಿಕ್ ಕ್ಷಮಾ ಮೀದೃಶೇ ಜನೇ। ಚಾಪಮಾನಯ ಸೌಮಿತ್ರೇ, ಅದ್ಯಾಕ್ಷೋಭ್ಯಮಪಿ ಕ್ರುದ್ಧಃ ಕ್ಷೋಭಯಿಷ್ಯಾಮಿ ಸಾಗರಂ—ಕ್ಷಮೆಯಿಂದ ಕೂಡಿದ ನನ್ನನ್ನು ಈ ಸಮುದ್ರನು ಅಸಮರ್ಥನೆಂದುಕೊಂಡಿದ್ದಾನೆ. ಇಂಥವರಲ್ಲಿ ಕ್ಷಮೆಯು ಕೂಡದು. ಲಕ್ಷ್ಮಣ, ಬಿಲ್ಲು ತಾ, ಅಕ್ಷೋಭ್ಯವಾದ ಈ ಸಾಗರವನ್ನೂ ಕ್ರುದ್ಧನಾದ ನಾನು ಕ್ಷೋಭಗೊಳಿಸುವೆನು. ಶೋಷಿಸುವೆನು. ಕಪಿಬಲವೆಲ್ಲ ನಡೆದುಹೋಗಲಿ'' ಎಂದು ಅರ್ಭಟಿಸಿದನು. ಲಕ್ಷ್ಮಣನು ಬಾರದು ಎಂದು ಕೈ ಹಿಡಿದುಕೊಂಡನು. ಅಂತರಿಕ್ಷಚಾರಿಗಳು ಗಟ್ಟಿಯಾಗಿ ಬೇಡ ಬೇಡ ಎಂದು ಕೂಗಿಕೊಂಡರು. ರಾಮನ ಆಟೋಪವು ನಾಟಕನಾಯಕನ ಆಟೋಪವೇನು? ರಾಮನು ಬಾಣವನ್ನು ಹೂಡುತ್ತಿದ್ದಂತೆಯೇ ಸಮುದ್ರವು ಒಂದು ಯೋಜನ ಹಿಂದಕ್ಕೆ ಹೋಯಿತು. ಸಮುದ್ರನು ಗಂಗಾ ಯಮುನಾದಿಗಳೊಡನೆ ಬಂದು ಕಾಣಿಸಿಕೊಂಡನು: "ಪೃಥಿವೀ ವಾಯು ರಾಕಾಶಮಾಪೋ ಜ್ಯೋತಿಶ್ಚ ರಾಘವ। ಸ್ವಭಾವೇ ಸೌಮ್ಯ ತಿಷ್ಠಂತಿ ಶಾಶ್ವತಂ ಮಾರ್ಗಮಾಶ್ರಿತಾಃ॥

–ಪೃಥಿವ್ಯಾದಿ ಪಂಚಭೂತಗಳು ಸ್ವಭಾವಾನುಗುಣವಾಗಿ ಒಂದೇ ಸಮ ನಾಗಿರುತ್ತವೆ. ಅದರಿಂದ ನನ್ನನ್ನು ಕ್ಷಮಿಸು" ಎಂದು ಹೇಳಿ ತನ್ನನ್ನು ದಾಟಲು "ಸೇತುವೆಯನ್ನು ಕಟ್ಟು. ವಿಶ್ವಕರ್ಮಪುತ್ರನಾದ ನಲನು ಸೇತುವೆಯನ್ನು ಕಟ್ಟಲಿ" ಎಂದನು. ಅದರಂತೆಯೇ ನಲನು ಸೇತುವನ್ನು ಕಟ್ಟಿದನು. ಕಪಿಸೇನೆಯೆಲ್ಲವೂ ಲಂಕೆಗೆ ಹೋಯಿತು.

ಯುದ್ಧವು ಆರಂಭವಾಯಿತು. ಇಂದ್ರಜಿತುವು ಮೋಸಮಾಡಿ ನಾಗಪಾಶದಿಂದ ರಾಮಲಕ್ಷ್ಮಣರನ್ನು ಕಟ್ಟಿದನು. ಅದನ್ನು ಬಿಡಿಸಲು ಗರುಡನೇ ಬರಬೇಕಾಯಿತು. ಅನಂತರ ಇಂದ್ರಜಿತುವು ನಿಕುಂಭಿಳಾ ಯಾಗವನ್ನು ಆರಂಭಿಸಿದನು. ಅದು ಪೂರ್ಣವಾಗಿದ್ದರೆ ಅವನನ್ನು ಯಾರೂ ಜಯಿಸುವಂತಿರಲಿಲ್ಲ. ಅಷ್ಟರೊಳಗಾಗಿ ಯಾಗವು ಕೆಟ್ಟು ಹೋಯಿತು. ಲಕ್ಷ್ಮಣನು ಅವನನ್ನು ಕೊಲ್ಲಲು ಉಪಾಯಾಂತರ ವನ್ನು ಕಾಣದೆ, ರಾಮನ ಮಹಾತ್ಮ್ಯೆಯನ್ನು ಪಣಗಟ್ಟಿದನು : "ಧರ್ಮಾತ್ಮಾ ಸತ್ಯಸಂಧಶ್ಚ ರಾಮೋ ದಾಶರಥಿರ್ಯದಿ। ಪೌರುಷೇ ಚಾಪ್ರತಿದ್ವಂದ್ವಃ ಶರೈನಂ ಜ ಹಿ ರಾವಣಿಂ ‖' — ದಾಶರಥಿ ಯಾದ ರಾಮನು ಧರ್ಮಾತ್ಮನೂ ಸತ್ಯಸಂಧನೂ ಅಪ್ರತಿಮವಾದ ಪೌರುಷವುಳ್ಳವನೂ ಆದುದೇ ಆದರೆ, ಎಲೈ ಶರವೇ, ಈ ರಾವಣಿಯನ್ನು ಕೊಲ್ಲು" ಎಂದನು. ಆ ಮಾತು ಜಗತ್ತಿನಲ್ಲೆಲ್ಲಾ ವ್ಯಾಪಿಸಿ ಜಗತ್ತನ್ನು ಧರಿಸಿರುವ ಧರ್ಮವನ್ನೂ ಸತ್ಯವನ್ನೂ ಕೆಣಕಿರಬೇಕು. ಅದು ಇಂದ್ರಾಸ್ತ್ರ. ಇಂದ್ರನನ್ನೂ ಗೆದ್ದಿರುವ ಇಂದ್ರಜಿತ್ತನ್ನು ಅದು ಕೆಡಹಿತು. ಇಂದ್ರಜಿತ್ ಇಂದ್ರನನ್ನು ಗೆದ್ದಿದ್ದನು. ಆದಗೂ ಇಂದ್ರನ ಶಕ್ತಿಯೊಡನೆ ಜಗದಾಧಾರವಾದ ಸತ್ಯಧರ್ಮಗಳ ಶಕ್ತಿಯೂ ಸೇರಿ ದಾಗ ಅವನು ಸೋಲದಿರುವದೆಂತು ?

ನಾವು ರಾಮನ ಕಥೆಯನ್ನು ಹೇಳಿದಾಗ ಕೇಳಿದಾಗ ಜಗದಾ ಧಾರವಾದ ಈ ಸತ್ಯಧರ್ಮಗಳು ಉಬ್ಬುತ್ತವೆ. ಹಾಲು ಉಕ್ಕಿದಂತೆ ಉಕ್ಕುತ್ತವೆ. ನಮ್ಮನ್ನು ರಕ್ಷಿಸುತ್ತವೆ. ಇದು ನಮಗೆ ತಿಳಿಯದೇ ಆಗುವ ಕಾರ್ಯ. ಆದರೂ ಈ ಕಾರ್ಯ ಆಗದೆ ಇರುವುದಿಲ್ಲ.

ಇದು ಧರ್ಮೋದ್ಧಾರ. ಅದರಿಂದ ಆತ್ಮೋದ್ಧಾರ. ಆತ್ಮವನ್ನು ಉದ್ಧರಿಸಿಕೊಂಡವನಿಂದ ಜಗದುದ್ಧಾರ. ಇದು ಈಗ ಆಗಬೇಕಾದ ಕಾರ್ಯ.

ರಾಮನ ಆತ್ಮ ವಿಶ್ವಾಸವನ್ನು ಪ್ರದರ್ಶಿಸುವ ಇನ್ನೊಂದು ಅಂಶವನ್ನು ಪ್ರಸ್ತಾಪಿಸೋಣ. ಪ್ರಹಸ್ತನ ವಧವಾಯಿತೆಂದು ಕೇಳಿ ರಾವಣನು ತಾನೇ ಯುದ್ಧಕ್ಕೆ ಹೊರಟನು. ಸುಗ್ರೀವ, ನೀಲ, ಹನುಮಂತ ಮೊದಲಾದ ವೀರರನ್ನು ಗೆದ್ದು ಲಕ್ಷ್ಮಣನನ್ನೂ ಶಕ್ತಿಯಿಂದ ಹೊಡೆದು ಮೆರೆದನು. ಆಗ ರಾಮನು ಅವನಿಗೆ ಎದುರಾಗುತ್ತಾನೆ. ರಾವಣನು ಬಾಣ ಬಿಡುವುದರೊಳಗಾಗಿ ಅವನ ರಥ, ಚಕ್ರ, ಅಶ್ವ, ಧ್ವಜ, ಸಾರಥಿ, ಅಸ್ತ್ರಶಸ್ತ್ರಗಳು ಎಲ್ಲವನ್ನೂ ಪುಡಿಮಾಡಿ, ಅವನನ್ನು ವಜ್ರದಂತಹ ತೀವ್ರವಾದ ಬಾಣದಿಂದ ಹೊಡೆಯುತ್ತಾನೆ; ಹಿಂದೆ ಇಂದ್ರನ ವಜ್ರಾಸ್ತ್ರದಿಂದಲೂ ನೋಯದೆ ಅಲ್ಲಾಡದೆ ಇದ್ದ ರಾಕ್ಷಸನು ರಾಮಬಾಣದಿಂದ ನೋಯುತ್ತಾನೆ: ಅಲ್ಲಾಡಿ ಹೋಗುತ್ತಾನೆ: ಕೈಯ್ಯಲ್ಲಿದ್ದ ಬಿಲ್ಲೂ ಬಿದ್ದುಹೋಗುತ್ತದೆ. ಆಗ ರಾಮನು ಇನ್ನೊಂದು ಬಾಣವನ್ನು ಹೊಡೆದು ಅವನ ಕಿರೀಟಗಳನ್ನು ಕತ್ತರಿಸಿ, ಹಾಗೆ ಏಟು ತಿಂದು ವಿಷವಿಲ್ಲದ ಹಾವಿನಹಾಗೆ, ಕಿರಣಗಳಿಲ್ಲದೆ ಮಂಕಾದ ಸೂರ್ಯನ ಹಾಗೆ, ಕಿರೀಟಗಳು ಇಲ್ಲದೆ ದೀನನಾದ ರಾವಣನನ್ನು ನೋಡಿ ಹೀಗೆನ್ನುತ್ತಾನೆ: "ಕೃತಂ ತ್ವಯಾ ಕರ್ಮ ಮಹತ್ ಸುಭೀಮಂ ಹತಪ್ರವೀರಶ್ಚ ಕೃತಸ್ತ್ವಯಾಹಂ। ತಸ್ಮಾತ್ ಪರಿಶ್ರಾಂತ ಇತಿ ವ್ಯವಸ್ಯ ನ ತ್ವಾಂ ಶರೈರ್ಮೃತ್ಯುವಶಂ ನಯಾಮಿ॥ಗಚ್ಛಾನುಜಾನಾಮಿ ರಣಾರ್ದಿತಸ್ತ್ವಂ ಪ್ರವಿಶ್ಯರಾತ್ರಿಂಚರ ರಾಜ ಲಂಕಾಂ। ಆಶ್ವಾಸ್ಯ ನಿರ್ಯಾಹಿ ರಥೀ ಚ ಧನ್ವೀ ತದಾ ಬಲಂ ದ್ರಕ್ಷ್ಯಸಿ ಮೇ ರಥಸ್ಥಃ–ನೀನು ಭಾರಿಯೂ ಭಯಂಕರವೂ ಆದ ಕರ್ಮವನ್ನು ಮಾಡಿರುವೆ. ನಮ್ಮ ವೀರರನ್ನು ಅನೇಕರನ್ನು ಹೊಡೆದಿರುವೆ. ಅದರಿಂದ ನೀನು ದಣಿದಿದ್ದೀಯೆಯೆಂದು, ಈಗ ನಿನ್ನನ್ನು ಕೊಲ್ಲದೆ ಬಿಡುವೆನು. ಹೋಗು, ಅಪ್ಪಣೆಯನ್ನು ಕೊಡುವೆನು. ರಣದಲ್ಲಿ ಏಟು

ತಿಂದ ನೀನು ಲಂಕೆಗೆ ಹೋಗಿ, ಆಯಾಸ ಪರಿಹಾರಮಾಡಿಕೊಂಡು ರಥ ಧನುಸ್ಸುಗಳನ್ನು ತೆಗೆದುಕೊಂಡು ಬಾ. ಆಗ ನನ್ನ ಪರಾಕ್ರಮ ವನ್ನು ನೋಡುವೆಯಂತೆ.” ಎಂತಹ ಮಾತು ! ಗಚ್ಛ, ಅನುಜಾನಾಮಿ ನತ್ವಾಂ ಶರೈರ್ಮೃತ್ಯುವಶಂ ನಯಾಮಿ—ಹೋಗು. ಅಪ್ಪಣೆಯನ್ನು ಕೊಟ್ಟಿದ್ದೇನೆ. ನಿನ್ನನ್ನು ಕೊಲ್ಲುವುದಿಲ್ಲ. ಈ ಮಾತು ರಾಮನೊಬ್ಬ ನಿಗೇ ಸಾಧ್ಯ ! ಜಗತ್ತಿನಲ್ಲಿ ಎಲ್ಲಾದರೂ ಇಂತಹ ವೀರನುಂಟೇನು ? ತನಗೆ ದ್ರೋಹಿಯಾಗಿ, ವಧ್ಯನಾದ, ಪರಮ ಶತ್ರುವು ನಿರಾಯುಧ ನಾಗಿಹೋಗಿ ಎದುರಿಗಿದ್ದರೂ ರಾಮನಿಗೆಷ್ಟು ಔದಾರ್ಯ ! ಈ ಔದಾರ್ಯವು ಬರಬೇಕಾದರೆ ಆ ರಾಮನಿಗೆ ಅದೆಂತಹ ದೃಢ ಆತ್ಮ ವಿಶ್ವಾಸವಿರಬೇಕು !

ಕೊನೆಯದು, ರಾವಣವಧೆಯಾದಮೇಲೆ ರಾಮನಾಡುವ ಮಾತು. ಅಣ್ಣನು ಹೋದನೆಂದು ವಿಭೀಷಣನು ಮುಕ್ತಕಂಠನಾಗಿ ಅಳುತ್ತಾನೆ. ಅದಕ್ಕೆ ರಾಮನು “ನೈವಂ ವಿನಷ್ಟಾ ಶೋಚ್ಯಂತೇ ಕ್ಷತ್ರ ಧರ್ಮಮವಸ್ಥಿತಾಃ । ನೈಕಾಂತ ವಿಜಯೋ ಯುದ್ಧೇ ಭೂತಪೂರ್ವಃ ಕದಾಚನ। ಪರೈರ್ವಾ ಹನ್ಯತೇ ವೀರಃ ಪರಾನ್ ವಾ ಹಂತಿ ಸಂಯುಗೇ —ಹೀಗೆ ಕ್ಷತ್ರಧರ್ಮವನ್ನವಲಂಬಿಸಿ ವಿನಷ್ಟರಾದವರನ್ನು ಕುರಿತು ಅಳಬಾರದು : ಯುದ್ಧದಲ್ಲಿ ಜಯವು ಒಬ್ಬರಿಗೇ ಎಂಬುದು ಯಾವಾ ಗಲೂ ಇಲ್ಲ. ವೀರನು ಇತರರನ್ನು ಹೊಡೆಯುವನು ಅಥವಾ ತಾನೇ ಸಾಯುವನು ” ಎಂದು ಸಮಾಧಾನವನ್ನು ಹೇಳಿದನು. ಆಗ, ವಿಭೀಷಣನು “ಏತಸ್ಯ ಯತ್ ಪ್ರೇತಗತಸ್ಯ ಕೃತ್ಯಂ ತತ್ಕರ್ತುಮಿಚ್ಛಾಮಿ ತವ ಪ್ರಸಾದಾತ್—ಈತನಿಗೆ ಮಾಡಬೇಕಾದ ಉತ್ತರಕರ್ಮಗಳನ್ನು ನಿನ್ನ ಅಪ್ಪಣೆಯಾದರೆ ಮಾಡುವೆನು” ಎನ್ನುತ್ತಾನೆ. ರಾಮನು “ಮರಣಾಂತಾನಿ ವೈರಾಣಿ ನಿರ್ವೃತ್ತಂ ನಃ ಪ್ರಯೋಜನಂ ಕ್ರಿಯ ತಾಮಸ್ಯ ಸಂಸ್ಕಾರೋ ಮಮಾಪ್ಯೇಷ ಯಥಾ ತವ—ಮರಣದ ವರೆಗೂ ವೈರ. ನಮ್ಮ ಉದ್ದೇಶವು ನೆರವೇರಿತು. ಈತನಿಗೆ ಸಂಸ್ಕಾರಮಾಡು. ಈತನು ನಿನಗೆ ಹೇಗೋ ನನಗೂ ಹಾಗೇ ”

ಆ ಕೊನೆಯ ಮಾತು, ಮಮಾಪ್ಯೇಷ ಯಥಾ ತವ ಎಂಬ ಮಾತು ಎಷ್ಟು ದೊಡ್ಡದು!

ಸೀತಾಗ್ನಿಪ್ರವೇಶದ ವಿಚಾರ ಇನ್ನೂ ನನಗೆ ಸರಿಹೊಂದಿಲ್ಲ. ಮಹಾಪುರುಷರ ಚರಿತದಲ್ಲಿ ನಮಗೆ ತಿಳಿಯದ ಅಂಶವನ್ನು ನಮಗೆ ತೋರಿದಂತೆ ಅರ್ಥಮಾಡುವುದು ವಿಹಿತವಲ್ಲ. ಅದು ಸರಿಯಾಗಿ ತಿಳಿಯುವವರೆಗೂ ಸುಮ್ಮನಿರುವುದು ಭೂಷಣ. ವಿಭೂಷಣಂ ಮೌನ ಮಪಂಡಿತಾನಾಂ.

ಇನ್ನು ಮುಂದೆ ರಾಮನು ಸಪರಿವಾರನಾಗಿ ನಂದಿಗ್ರಾಮಕ್ಕೆ ಬರುತ್ತಾನೆ. ಭರತನು ಭಕ್ತನಾಗಿ ಅಣ್ಣನನ್ನು ಬರಮಾಡಿಕೊಂಡು ರಾಜ್ಯವನ್ನು ಒಪ್ಪಿಸುತ್ತಾನೆ. ರಾಮನು ಭರತನಿಗೆ ಯೌವರಾಜ್ಯ ವನ್ನು ಕೊಡುತ್ತಾನೆ.

೧೨. ಫಲಶ್ರುತಿ

ಐಶ್ವರ್ಯಂ ಪುತ್ರಲಾಭಶ್ಚ ಭವಿಷ್ಯತಿ ನ ಸಂಶಯಃ ॥ ರಾಮಾ ಯಣಮಿದಂ ಪಠತಃ ಶೃಣ್ವತಸ್ಸದಾ—ಈ ರಾಮಾಯಣವನ್ನು ಓದು ವವರಿಗೂ ಕೇಳುವವರಿಗೂ ಐಶ್ವರ್ಯವೂ ಪುತ್ರಲಾಭವೂ ಆಗುವುದು. ಸಂಶಯವಿಲ್ಲ. ಏಕೆಂದರೆ, ಪ್ರೀಯತೇ ಸತತಂ ರಾಮಃ, ಈ ಪಠನ ಶ್ರವಣಗಳಿಂದ ರಾಮನು ಯಾವಾಗಲೂ ಸಂತೋಷಪಡುವನು. ಸ ಹಿ ವಿಷ್ಣುಸ್ಸನಾತನಃ : ಆತನೇ ಸನಾತನನಾದ ವಿಷ್ಣುವು.

ಇದುವರೆಗೆ ರಾಮಾಯಣದಲ್ಲಿ ವಾಲ್ಮೀಕಿಗಳು ಹೇಳಿರುವಂತೆ ರಾಮನನ್ನು ನೋಡಿದುದಾಯಿತು. ರಾಮಾಯಣವನ್ನು ಕೇವಲ ಕಾವ್ಯವೆಂದು ನೋಡುವವರಿದ್ದಾರೆ. ವಜ್ರವೂ ಕಲ್ಲೇ ಎಂದರೆ ಅಲ್ಲ ವೆನ್ನುವುದಕ್ಕಾದೀತೆ? ಹೊಳೆಹೊಳೆಯುವ ಕಲ್ಲು, ಮಾರಿದರೆ ದುಡ್ಡಾ ಗುವ ಕಲ್ಲು, ಅದು ಅಷ್ಟೇ! ಹಾಗೆಯೇ ರಾಮನೂ ಮಹಾನುಭಾವ, ಮಹಾಪುರುಷ, ಅವತಾರವಲ್ಲ ಎನ್ನುವವರೂ ಇದ್ದಾರೆ. ರಾಮನನ್ನು ಸಾಮಾನ್ಯ ಮಾನವನ ದೃಷ್ಟಿಯಿಂದ ನೋಡುವುದು ಈವೊತ್ತಿನದಲ್ಲ.

ಬೌದ್ಧ ಜಾತಕಗಳಲ್ಲಿ ಜೈನಪುರಾಣಗಳಲ್ಲಿ ರಾಮನ ಕಥೆ ಬರುತ್ತದೆ. ಅವರೆಲ್ಲರೂ ಕೇವಲ ಬುದ್ಧಿಯೇ ಮಾನದಂಡವೆಂದು ಅಳೆದವರು. ಆ ಪದ್ಧತಿಯನ್ನು ಅಂಗೀಕರಿಸಿದವರು ಈಗಲೂ ಅನೇಕರು ಇದ್ದಾರೆ. ಆದರೆ ನಾವು ಉತ್ಕರ್ಷ ದೃಷ್ಟಿಯನ್ನು ಅವಲಂಬಿಸಿದವರು.

ಉತ್ಕರ್ಷ ದೃಷ್ಟಿಯೆಂದರೆ ಸಾಮಾನ್ಯವನ್ನು ಬಿಟ್ಟು ವಿಶೇಷ ವನ್ನು ನೋಡುವುದು. ಹೀಗೆ ವಿಶೇಷ ದರ್ಶನದಿಂದಲೇ ಮನುಷ್ಯನು ಪುರೋಭಿವೃದ್ಧಿಯನ್ನು ಪಡೆಯುವುದು. ವಿಗ್ರಹಗಳನ್ನು ಪೂಜಿಸು ವವರೆಲ್ಲ ಇದೇ ತತ್ವವನ್ನು ಹಿಡಿದವರು. ಸಾಲಗ್ರಾಮವನ್ನು ವಿಷ್ಣು ವಿನ ಪ್ರತೀಕ (ಗುರುತು) ಎಂದೂ, ಲಿಂಗವನ್ನು ಮಹಾದೇವನ ಪ್ರತೀಕವೆಂದೂ ಆರಾಧಿಸುವವರಿಗೆ ಉತ್ಕರ್ಷ ದೃಷ್ಟಿಯು ಅಪರಿಚಿತ ವಲ್ಲ. ಮನುಷ್ಯನನ್ನು ನೋಡಿ, ಇದೊಂದು ರಕ್ತಮಾಂಸಗಳ ಬೊಂಬೆ ಯೆಂದರೆ, ರಕ್ತಮಾಂಸಗಳ ಬೊಂಬೆಗಳೆಲ್ಲವೂ ಮಾನವರಾ ದಾವೆ ? ಹಾಗೆ.

ಅಲ್ಲದೆ, ಮಣಿ ಮಂತ್ರ ಔಷಧಿಗಳನ್ನು ನಂಬುವವರೆಲ್ಲ ಅವು ಗಳನ್ನು ಸಾಮಾನ್ಯ ರೂಪದಿಂದ ನೋಡುವರೋ ? ವಿಶೇಷ ರೂಪ ದಿಂದ ಆರಾಧಿಸುವರೋ ? ಅದರಂತೆಯೇ ರಾಮನನ್ನು ಸಾಮಾನ್ಯ ವಾಗಿ ನೋಡಿದವರಿಗೆ ಮನುಷ್ಯತ್ವವು ಈ ಮಟ್ಟಕ್ಕೆ ಏರಬಲ್ಲುದು ಎಂದು ಸಂತೋಷವೂ ಸಮಾಧಾನವೂ ಆಗಬಹುದು. ಆದರೆ ಅವತಾರ ದೃಷ್ಟಿಯಿಂದ ರಾಮನನ್ನು ಆರಾಧಿಸುವವರಿಗೆ ಅನುಗ್ರಹವು ದೊರೆಯುವುದು : ಉದ್ಧಾರಮಾಡುವುದು. ಆಗ ಅವರು ಜಗತ್ತೆಲ್ಲ ಒಂದೇ ಎಂದು ಕಾಣುವರು. ಜಗದ್ಧಿತವಾಗಿ ಬಾಳಿ ಬದುಕುವರು.

ಈಗ ಹೊಸ ನಾಗರಿಕತೆಯಿಂದ ಬುದ್ಧಿಪ್ರಧಾನವಾದ ಪ್ರೇಯ ಸ್ಸಿನ ಕಡೆಗೆ ಹೆಚ್ಚು ಗಮನವಾಗಿದೆ. ಪ್ರೇಯಸ್ಸನ್ನು ನಾವು ಬೇಡ ವೆನ್ನುವುದಿಲ್ಲ. ನಮಗೆ ಅದೂ ಬೇಕು. ಆದರೆ ಅದಷ್ಟೇ ಸಾಲದು. ಪ್ರೇಯಸ್ಸಿನ ಆಚಿನ ಶ್ರೇಯಸ್ಸೂ ನಮಗೆ ಬೇಕು. ಶ್ರೇಯಸ್ವಿಗಳ ಸಂಖ್ಯೆ ಹೆಚ್ಚಿದರೆ ಜಗತ್ತಿಗೆ ಹಿತ : ಶಾಂತಿ.

ನಮ್ಮ ಜನಸಾಮಾನ್ಯರಲ್ಲಿ ಶ್ರೇಯಸ್ಸಿನ ಹಂಬಲ ಬೇಕಾದಷ್ಟು ಇದೆ: ಆದರದು ಕುರುಡಾಗಿದೆ. ಪ್ರೇಯಸ್ಸು ಬೇಕು ಎಂಬ ಒದ್ದಾಟ ವಿದೆ. ಆದರದು ಕುಂಟಾಗಿದೆ. ಬುದ್ಧಿಯು ಬೆಳೆದು ಪ್ರೇಯಸ್ಸು ಹೆಚ್ಚಲಿ: ಇನ್ನೂ ಬೆಳೆದು ಶ್ರೇಯಸ್ಸನ್ನೂ ಸಂಪಾದಿಸಿಕೊಡಲಿ. ಪ್ರೇಯ, ಶ್ರೇಯ ಎರಡೂ ಲಭಿಸಿ ಜೀವನವು ಸುಂದರವಾಗಲಿ.

ನಮೋಽಸ್ತು ರಾಮಾಯ ಸಲಕ್ಷ್ಮಣಾಯ ।
ನಮೋಽಸ್ತು ದೇವ್ಯೈ ಜನಕಾತ್ಮಜಾಯೈ
ನಮೋಽಸ್ತು ರುದ್ರೇಂದ್ರಯಮಾನಿಲೇಭ್ಯೋ
ನಮೋಽಸ್ತು ಚಂದ್ರಾರ್ಕಮರುದ್ಗಣೇಭ್ಯಃ ॥

ಭದ್ರಮಸ್ತು ನಃ

ಭಗವದ್ಗೀತೆ

ಮುನ್ನುಡಿ

ಇದೊಂದು ಸಂಸ್ಕೃತಿ ಪ್ರಚಾರ ಭಾಷಣ. ಅಲ್ಲಲ್ಲಿ ಶ್ರೀ ಗೀತೆಯ ವಿಷಯವಾಗಿ ಮಾತನಾಡಿದಾಗ ಜನಶಕ್ತಿ ನನ್ನಿಂದ ಎರಡು-ಎರಡೂ ಕಾಲು ಘಂಟೆ ಮಾತನಾಡಿಸಿರುವುದೂ ಉಂಟು. ಹಾಗೆಯೇ ಒಂದೊಂದು ಶ್ಲೋಕದ ಮೇಲೆ ಎರಡೆರಡು ಘಂಟೆ ಮಾತನಾಡಿರುವುದೂ ಉಂಟು. ಆಗೆಲ್ಲ ನಾನು ಅನೇಕ ವೇಳೆ ಹೊಸ ಹೊಸ ವಿಷಯಗಳು ಬಂದುದನ್ನು ಕಂಡು ನಮ್ಮ ಸುತ್ತಲೂ ಇದ್ದು, ನಮ್ಮಲ್ಲಿಯೂ ಇದ್ದುಕೊಂಡು ಲೋಕವನ್ನೆಲ್ಲ ಆಡಿಸುತ್ತಿರುವ ಶಕ್ತಿಯು ನುಡಿದಿರಬೇಕು ಎಂದುಕೊಂಡಿದ್ದೇನೆ. ಆ ಶಕ್ತಿಯಾಟ ಇಲ್ಲೂ ಅಷ್ಟು ಕಂಡಿದೆ.

ಇದು ಒಂದು ಭಾಷಣವೇ ಆದರೂ ಶ್ರೀಭಗವದ್ಗೀತೆಯನ್ನು ಓದಲು ಸಹಾಯವಾದೀತು. ಕೆಲವರಿಗಾದರೂ ಸಹಾಯವಾದರೆ ಅದು ನನ್ನ ಪುಣ್ಯ.

ಇದನ್ನು ಪ್ರಕಟಿಸಿದ ಸರ್ಕಾರದವರಿಗೆ ನನ್ನ ಅನಂತ ವಂದನೆಗಳು.

ಶ್ರೀಗೀರ್ವಾಣ ವಿದ್ಯಾಪೀಠ,
ಬೆಂಗಳೂರು-೪.
೧೬–೧೦–೫೫.

ದೇವುಡು

ಭಗವದ್ಗೀತೆ

ಗೀತಾ ಸುಗೀತಾ ಕರ್ತವ್ಯಾ ಕಿಮನ್ಯೈಃ ಶಾಸ್ತ್ರ ವಿಸ್ತರೈಃ ॥

ನಾವು ನಮಗೆ ತಿಳಿಯದ ವಿಷಯವನ್ನು ಶಾಸ್ತ್ರಗಳು ಬೋಧಿಸುತ್ತವೆಯೆನ್ನುತ್ತೇವೆ. ಹಾಗೆ, ನಮಗೆ ತಿಳಿಯದ ಶಾಸ್ತ್ರವಿಷಯಗಳನ್ನು ನಮಗೆ ತಿಳಿಸಿಕೊಡುವವರು ಒಬ್ಬರು ಬೇಕು ಎನ್ನುತ್ತೇವೆ. ಹಾಗೆ ತಿಳಿಸಿಕೊಡುವವರನ್ನೂ ತಿಳಿಸಿಕೊಟ್ಟವರನ್ನೂ ಗುರುಗಳು ಎನ್ನುತ್ತೇವೆ. ಅದರಿಂದಲೇ ನಾವು ಎಲ್ಲದಕ್ಕೂ ಮೊದಲು ಗುರುಸ್ತೋತ್ರವನ್ನು ಮಾಡುವುದು. ಅದರಿಂದ ಮಾಡೋಣ.

"ಗುರುಬ್ರಹ್ಮಾ ಗುರುರ್ವಿಷ್ಣುಃ ಗುರುರೇವ ಮಹೇಶ್ವರಃ ।
ಗುರುಸ್ಸಾಕ್ಷಾತ್ ಪರಬ್ರಹ್ಮ ತಸ್ಮೈ ಶ್ರೀ ಗುರವೇನಮಃ ॥"

ಈ ಸಂಪ್ರದಾಯ ಹೊಸದಲ್ಲ. ಮಂತ್ರ ಜಪ ಮಾಡುವವರೆಲ್ಲ ಋಷಿಯ ಹೆಸರನ್ನು ಹೇಳುತ್ತಾರೆ. ಅದೇ ಇದು.

ನಾವು ಗೀತೆಯ ವಿಚಾರವಾಗಿ ಮಾತನಾಡಲು ಹೊರಟಿದ್ದೇವೆ. ಆದರೆ ಅದಕ್ಕೆ ಮುಂಚೆ ನಾವು ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ಮೊದಲನೆಯ ಸಿದ್ಧತೆ ಪಾರ್ಥಸಾರಥಿಯ ಧ್ಯಾನ. ಬೆಟ್ಟದಂತಹ ನಾಲ್ಕು ಬಿಳಿಯ ಕುದುರೆಗಳನ್ನು ಕಟ್ಟಿದ ರಥ. ಆ ಕುದುರೆಗಳನ್ನು ಎಳೆದು ಎಡಗೈಯಲ್ಲಿ ಹಿಡಿದುಕೊಂಡಿದ್ದಾನೆ. ಆ ಕುದುರೆಗಳು ಆ ಎಳೆತವನ್ನು ತಡೆಯಲಾರದೆ ಒದ್ದಾಡುತ್ತಿವೆ. ಬಲಗೈಯಲ್ಲಿ ಒಂದು ಚಾಟಿ. ಕುದುರೆಗಳು ಹೇಳಿದಂತೆ ಕೇಳದಿದ್ದರೆ, ಕೇಳಿಸುವಂತೆ ಮಾಡುವ ಚಾಟಿ. ಬಲಗಡೆಗೆ ತಿರುಗಿ ಅರ್ಜುನನ ಕಡೆಗೆ ತಿರುಗಿದ್ದಾನೆ. ಮುಖವು ಕೆಂಪಾಗಿದೆ. ಅಳ್ಳೆಗಳು ಅರಳಿವೆ. ಕಣ್ಣು ನೆಟ್ಟನೋಟದಿಂದ ನೋಡುತ್ತಿದೆ. ಆ ನೋಟದಲ್ಲಿ "ಕುತಸ್ತ್ವಾ ಕಶ್ಮಲಮಿದಂ

ವಿಷಮೇ ಸಮುಪಸ್ಥಿತಂ। ಅನಾರ್ಯಜುಷ್ಟಮಸ್ವರ್ಗ್ಯಮಕೀರ್ತಿಕರ ಮರ್ಜುನ – ಈ ವಿಷಮಕಾಲದಲ್ಲಿ ನಿನಗೆ ಈ ಕಶ್ಮಲವು ಎಲ್ಲಿಂದ ಬಂತು ? ಇಹದಲ್ಲಿ ನಿನ್ನ ಕೀರ್ತಿಯನ್ನೂ ಪರದಲ್ಲಿ ಸ್ವರ್ಗವನ್ನೂ ಕಳೆಯುವ ಈ ಅನಾರ್ಯದುಷ್ಟ ಬುದ್ಧಿ ?'' ಎನ್ನುವ ಕ್ರೌರ್ಯವೂ ಇದೆ. ''ಭಕ್ತೋಽಸಿ ಮೇಸಖಾಸಿ, ಶೃಣುಮೇ ಪರಮಂವಚಃ, ವಕ್ಷ್ಯಾಮಿ ಹಿತ ಕಾಮ್ಯಯಾ—ನನಗೆ ಭಕ್ತನೂ ಸಖನೂ ಆದವನು : ಉತ್ತಮನಾದ ನನ್ನ ಮಾತನ್ನು ಕೇಳು, ಹಿತವಾಗಲೆಂದು ಹೇಳುವೆನು'' ಎಂಬ ಅನುಗ್ರಹವೂ ಇದೆ. ಇತ್ತ ಆತನ ಎದುರು, ರಥಿಯಾದರೂ ಸಾರಥಿಗೆ ಹೆದರಿ ಕೈಮುಗಿದುಕೊಂಡು ಕುಳಿತಿರುವ ವೀರಾಗ್ರೇಸರನಾದ ಅರ್ಜುನನು ''ಯಚ್ಛ್ರೇಯ ಸ್ಯಾನ್ನಿಶ್ಚಿತಂ ಬ್ರೂಹಿ ತನ್ಮೇ ಶಿಷ್ಯಸ್ತೇಹಂ ಶಾಧಿ ಮಾಂ ತ್ವಾಂ ಪ್ರಪನ್ನಂ—ನನಗೆ ಶ್ರೇಯಸ್ಸು ಯಾವುದೋ ಅದನ್ನು ಖಚಿತವಾಗಿ ಹೇಳು. ನಾನು ನಿನ್ನ ಶಿಷ್ಯನು : ನಿನ್ನನ್ನು ಸೇರಿದೆನು. ನನಗೆ ಬುದ್ಧಿ ಹೇಳು'' ಎಂದು ಕೇಳುವುದಕ್ಕೆ ಸಿದ್ಧನಾಗಿ ಕುಳಿತಿದ್ದಾನೆ. ಆ ಚಿತ್ರ ನಮ್ಮ ಮುಂದಿರಬೇಕು. ಆಗ ನಾವು ಅರ್ಜುನರಾಗಿ ಭಗವದ್ಗೀತೆಯ ಉಪದೇಶದ ಪೂರ್ಣಫಲವನ್ನು ಪಡೆಯುತ್ತೇವೆ.

ಈ ಭಾವದಿಂದ ಗೀತೆಯನ್ನು ಕೇಳಿದರೆ ಏನಾಗುವುದು ? ಬಲ್ಲಿರಾ ? ತುಲಸೀದಾಸರು ರಾಮಾಯಣ ಹೇಳುತ್ತಿದ್ದರಂತೆ ! ಅಲ್ಲಿ ಸುಂದರಕಾಂಡವಲ್ಲಿ ಹನುಮಂತನು ಸಾಗರವನ್ನು ದಾಟಿಬರುವಾಗ ಸೀತೆಯು ಕೊಟ್ಟಿದ್ದ ಆಭರಣ ನೀರಿನಲ್ಲಿ ಬಿದ್ದುಹೋಯಿತು ಎಂದರಂತೆ. ಅಲ್ಲಿ ಕುಳಿತಿದ್ದವನು ಒಬ್ಬನು ''ಆಹಾ ! ಕೆಲಸ ಕೆಟ್ಟಿತು !'' ಎಂದು ಓಡಿಹೋದನಂತೆ. ಮಗ್ಗುಲಲ್ಲಿಯೇ ಸಮುದ್ರ ! ಅಲ್ಲಿ ಅವನು ಹುಡುಕಿದ. ಆಭರಣ ಸಿಕ್ಕಿತು. ತಂದು ತುಲಸೀದಾಸರ ಮುಂದಿಟ್ಟು ಇದನ್ನು ಹನುಮಂತನಿಗೆ ಕೊಡಿ ಎಂದನಂತೆ. ಇದನ್ನು ಹಿಂದುಗಳಿಗೆ ವಿವರಿಸಬೇಕಾಗಿಲ್ಲ.

ಎರಡನೆಯದು ಶ್ರೋತಾ-ಕೇಳುವವನು, ವಕ್ತಾ-ಹೇಳುವವನು ಇಬ್ಬರಿಗೂ ಸಂಬಂಧಪಟ್ಟುದು. ಶ್ರೋತೃವಿಗೆ ಅನಸೂಯೆ ಬೇಕು :

ನೀನು ಹೇಳುವುದೇನು ? ನಾನು ಕೇಳುವುದೇನು ? ಎಂಬ ಭಾವ ಅಸೂಯೆ. ಅದು ಇರಬಾರದು. ಶ್ರೀರಾಮಕೃಷ್ಣ ಪರಮಹಂಸರು ಹೇಳಿದರು : "ಹುಡುಗರಿಗೆ, ಎತ್ತರವಾದ ಮನೆಗಳ ಮೇಲಿಂದ ಬೀಳುವ ನೀರು, ಬಸವ, ಹುಲಿ, ನರಿ ಮೊದಲಾದವುಗಳ ಮುಖ ದಂತಿರುವ ಬಚ್ಚಲುಗಳಿಂದ ಬರುತ್ತದೆ ಎನ್ನಿಸುತ್ತದೆ. ಆದರೆ ತಿಳಿದವರಿಗೆ ಅದೆಲ್ಲ ಮಳೆಯ ನೀರು." ಅದರಂತೆ, ಹೇಳುವವನು ಯಾರಾದರೇನು ? ಅವನು ಹೇಳುವುದು ಸರಿಯಾಗಿದ್ದರೆ ಅದು ಆ ಪರಮಾತ್ಮನ ಗೀತೆ ಎಂಬ ಭಾವವಿರಬೇಕು. ಹೇಳುವವನಿಗೆ ಹೊಣೆ ಗಾರಿಕೆ ಇನ್ನೂ ಹೆಚ್ಚು. ತಾನು ಕುಳಿತಿರುವುದು ಗೀತಾ ಪ್ರವಚನಕ್ಕೆ : ತನ್ನ ಅಹಂಕಾರವನ್ನು ತೋರಿಸುವುದಕ್ಕಲ್ಲ. ತಾನು ಹೇಳುತ್ತಿರು ವುದು ಭಗವತಾ ಗೀತಾ, ಭಗವಂತನೇ ಹೇಳಿದ ಗೀತೆಯನ್ನು : ಅದು ಭಗವತೇ ಗೀತಾ ಆಗಬೇಕು. ತಾನು ಹೇಳಿದುದರಿಂದ ಭಗವಂತನಿಗೆ ತೃಪ್ತಿಯಾಗಬೇಕು. ಹಾಗಾಗದಿದ್ದರೆ ತಾನು ಅಪರಾಧಿಯಾಗುವೆನು ಎಂಬ ಭಾವವಿರಬೇಕು.

ಹಾಗೆ ಆಗುವುದು ಹೇಗೆ ? ಎಂದರೆ ವಕ್ತೃವು ತನ್ನ ಅಹಂಕಾರ ವನ್ನು ನಿರೋಧಿಸಬೇಕು. ತನ್ನ ಗುರುವನ್ನು ತನ್ನ ಇಷ್ಟ ದೈವವನ್ನು ನೆನೆದು, ತನ್ನನ್ನು ಅವರಿಗೆ ಒಪ್ಪಿಸಿಕೊಂಡು, ತನ್ನ ಬಾಯಿಂದ ಅವರು ನುಡಿಯುತ್ತಿರುವರು ಎಂಬುದನ್ನು ಮನಗಂಡು, ತಾನೂ ಶ್ರೋತೃ ವರ್ಗದಲ್ಲಿ ಒಬ್ಬನಾಗಿ ಕೇಳುತ್ತ ಕುಳಿತುಕೊಳ್ಳಬೇಕು. ಈಗಲೂ ಹಾಗೆಯೇ ಆಗಲಿ: ಈ ಭಾಷಣದಲ್ಲಿ ಗೀತಾಚಾರ್ಯನ ಉಪದೇಶ ಒಡೆದು ಮೂಡಲಿ; ಎಂದು ಪ್ರಾರ್ಥನೆ ಮಾಡಿ ಆರಂಭಿಸೋಣ.

ಕೊನೆಯ ಅಧ್ಯಾಯದಲ್ಲಿ ಪರಮಾತ್ಮನು "ಅಧ್ಯೇಷ್ಯತೇ ಚ ಯ ಇಮಂ ಧರ್ಮ್ಯಂ ಸಂವಾದಮಾವಯೋಃ! ಜ್ಞಾನಯಜ್ಞೇನ ತೇನಾಹಮಿಷ್ಟಸ್ಸ್ಯಾಮಿತಿಮೇ ಮತಿಃ (೧೮–೭೦) – ನಮ್ಮಿಬ್ಬರ ಈ ಸಂವಾದವು ಧರ್ಮಕ್ಕೆ ಸಮ್ಮತವಾದುದು. ಯಾರಾದರೂ ಇದನ್ನು ಅಧ್ಯಯನ ಮಾಡಿದರೆ, ಆತನು ನನ್ನನ್ನು ಜ್ಞಾನಯಜ್ಞದಿಂದ ಆರಾಧಿಸಿ

ದಂತಾಗುವುದು ಎಂದು ನನ್ನ ಅಭಿಮತವು "—ಎನ್ನುತ್ತಾನೆ. ಅದರಂತೆ ನಮ್ಮ ಈ ಭಾಷಣವು ಜ್ಞಾನಯಜ್ಞವಾಗಲಿ ಎಂದು ಆರಂಭಿಸೋಣ.

ಇನ್ನು ಗೀತಾಚಾರ್ಯ, ಆತನ ಶಿಷ್ಯ, ಇವರ ವಿಚಾರವಾಗಿ ನಾವಷ್ಟು ತಿಳಿಯಬೇಕು. ಶಿಷ್ಯನ ವಿಚಾರ ನೋಡಿ ಗುರುವಿನ ಬಳಿ ಸಾರೋಣ.

ಅರ್ಜುನನು ಸಭಾಪರ್ವದ ಕೊನೆಯಲ್ಲಿ ದ್ರೌಪದಿಯ ಮಾನ ಭಂಗವಾದಾಗಲೇ ಕೌರವನ ಮೇಲೆ ಹಲ್ಲು ಕಡಿದಿದ್ದಾನೆ. ಮುಂದೆ ಘೋಷಯಾತ್ರಾಪರ್ವದಲ್ಲಿ ಪಾಂಡವರನ್ನು ಹಂಗಿಸಲು ಬಂದ ಕೌರವನು ತಾನೇ ಗಂಧರ್ವರಿಗೆ ಸೋತು ಸೆರೆ ಸಿಕ್ಕುತ್ತಾನೆ. ಆಗ ಧರ್ಮರಾಯನು ಆತನನ್ನು ಬಿಡಿಸಿಕೊಂಡು ಬರಬೇಕೆಂದು ಹೇಳಿದರೆ, ಭೀಮನು "ಯದಸ್ಮಾಭಿರನುಷ್ಠೇಯಂ ತದ್ಗಂಧರ್ವೈರನುಷ್ಠಿತಂ— ನಾವು ಮಾಡಬೇಕಾಗಿದ್ದುದನ್ನು ಗಂಧರ್ವರು ಮಾಡಿದರು" ಎಂದು ಸುಮ್ಮನಾಗುತ್ತಾನೆ. ಅರ್ಜುನನು ಅಣ್ಣನಪ್ಪಣೆಯೆಂದು ಹೋಗಿ ಕೌರವರನ್ನೆಲ್ಲಾ ಗೆದ್ದಿದ್ದ ಗಂಧರ್ವರನ್ನು ಗೆದ್ದು ಅವನನ್ನು ಬಿಡಿಸಿ ಕೊಂಡು ಬರುತ್ತಾನೆ. ತಾನು ಕೌರವರಿಗಿಂತ ಬಲಶಾಲಿಗಳಾದ ಗಂಧರ್ವರನ್ನೂ ಗೆದ್ದವನಾದರೂ ಮತ್ತೆ ಪಾಶುಪತವನ್ನೂ ಸಂಪಾದಿಸಿ ಕೊಂಡು ಬರುತ್ತಾನೆ.

ಮುಂದೆ ಒಂದು ವರ್ಷ ವೇಷವನ್ನು ಮರೆಯಿಸಿಕೊಂಡು ವಿರಾಟನಗರದಲ್ಲಿರುವಾಗ ಕೌರವ ದ್ವೇಷವನ್ನು ತೊರೆದಿದ್ದನೇನು? ಇಲ್ಲ. ಕೊನೆಗೆ ಕಾಲಬಂದಾಗ ಭೀಷ್ಮದ್ರೋಣ ಕರ್ಣಾದಿಗಳು ಇರುವಾಗಲೇ, ಹೆದರಿದ ಉತ್ತರನನ್ನು ಸಾರಥಿಯನ್ನು ಮಾಡಿ ಕೊಂಡು, ಕೌರವ ಬಲವನ್ನು ಗೆದ್ದು ಹಸುಗಳನ್ನೂ ಬಿಡಿಸಿಕೊಂಡು ಹೋಗುತ್ತಾನೆ. ಮುಂದೆ, ಉತ್ತರೆಯ ವಿವಾಹವಾದ ಮೇಲೆ ಶ್ರೀಕೃಷ್ಣನು ಸಂಧಾನಕ್ಕೆ ಹೊರಟಾಗ ಆತನು ಎಲ್ಲರನ್ನೂ ಕಳುಹಿಸಿದ ಮೇಲೆ ಅರ್ಜುನನ್ನು ಕರೆದು "ನೀನು ಹೇಳು ಏನು ಮಾಡಿಕೊಂಡು

ಬರಲಿ ?" ಎಂದಾಗ, "ಅಹಂ ರಣೋತ್ಸವಃ" ನಾನು ಯುದ್ಧ ಬೇಕು ಎನ್ನುವವನು" ಎನ್ನುತ್ತಾನೆ.

ಶ್ರೀಕೃಷ್ಣನು ಸಂಧಾನವು ವಿಫಲವಾದಮೇಲೆ ಹಿಂತಿರುಗ ಬೇಕಾಗಿರುವಾಗ ಕುಂತೀದೇವಿಯನ್ನು ನೋಡಲು ಹೋಗುತ್ತಾನೆ. ಆಗ ಆಕೆಯು "ಕೃಷ್ಣ, ನೀನಿದ್ದರೂ ನನ್ನ ಮಕ್ಕಳು ಕಾಡಪಾಲಾ ದರು" ಎಂದರೆ, ಆತನು "ಹಾಗೆನ್ನದಿರು. "ಅಂತೇಷು ರೇಮಿರೇ ಧೀರಾನತೇ ಮಧ್ಯೇಷು ರೇಮಿರೇ"–ನಿನ್ನ ಮಕ್ಕಳು ಧೀರರು, ಅವರು ಧರ್ಮಾರ್ಥಕಾಮ ಮೋಕ್ಷಗಳಲ್ಲಿ ಮೊದಲು ಕೊನೆಗಳನ್ನು ಹಿಡಿದರು ; ನಡುವಿನ ಅರ್ಥಕಾಮಗಳನ್ನು ಹಿಡಿಯಲಿಲ್ಲ" ಎನ್ನುತ್ತಾನೆ. ಹೀಗೆ ಸಮಾಧಾನ ಹೇಳಿ, "ಗ್ರಾಮ್ಯ ಸುಖವನ್ನು ಒಲ್ಲದೆ ನಿನ್ನ ಮಕ್ಕಳು ಧೀರ ಸುಖವನ್ನು ಬಯಸಿದರು. ಈಗ ಸಂಧಾನವು ವಿಫಲವಾಯಿತು. ಅವರು ಏನು ಮಾಡಬೇಕು ಹೇಳು" ಎನ್ನುತ್ತಾನೆ. ಶ್ರೀಕೃಷ್ಣನ ಮಾತು ಗಮನಿಸಿದಿರಾ ? ಸತ್ಯ ಧರ್ಮಗಳಿಗಾಗಿ ಎಲ್ಲವನ್ನೂ ತೊರೆಯುವುದು ವೀರಸುಖವಂತೆ! ಈಗ ನಾವು ಸುಖ ಸುಖ ಎನ್ನುತ್ತಿರುವ ಅರ್ಥಕಾಮಗಳು ಗ್ರಾಮ್ಯ ಸುಖವಂತೆ! ಆಯಿತು. ಕುಂತಿಯ ಮಾತನ್ನು ಕೇಳೋಣ. ಕುಂತಿಯು ಹೇಳಿದಳು : "ಹೇಳುವುದೇನು ಕೃಷ್ಣ ? ಯದರ್ಥಂ ಕ್ಷತ್ರಿಯಾ ಸೂತೇ ತಸ್ಯಾ ಲೋಯಮಾಗತಃ—ಕ್ಷತ್ರಿಯ ಸ್ತ್ರೀಯು ಮಕ್ಕಳನ್ನು ಹಡೆಯುವುದು ಯುದ್ಧಕ್ಕಾಗಿ : ಆ ಕಾಲವು ಬಂತು ಎಂದು ಹೇಳು" ಎಂದಳು. ಅದೂ ಅರ್ಜುನನಿಗೆ ಗೊತ್ತಿತ್ತು.

ಇನ್ನೊಂದು ಸಂದರ್ಭ. ಬಹಳ ಸ್ವಾರಸ್ಯವಾದುದು. ಅರ್ಜುನ ದುರ್ಯೋಧನರಿಬ್ಬರೂ ಶ್ರೀಕೃಷ್ಣನ ಬಳಿಗೆ ಸಹಾಯವನ್ನು ಕೇಳುವು ದಕ್ಕೆ ಬಂದಿದ್ದಾರೆ. ಆತನು ನಿದ್ದೆ ಹೋಗುತ್ತಿದ್ದಾನೆ. ಅರ್ಜುನನು ಪಾದಮೂಲದಲ್ಲಿ ಕುಳಿತರೆ ಸುಯೋಧನನು ತಲೆಯ ಕಡೆ ಕುಳಿತಿ ದ್ದಾನೆ. ಸ್ವಾಮಿಯು ಎದ್ದು ಅರ್ಜುನನ್ನು ನೋಡಿ ಅನಂತರ ಸುಯೋಧನನನ್ನೂ ನೋಡುತ್ತಾನೆ: ಆಶ್ಚರ್ಯಪಟ್ಟಂತೆ, "ಇಬ್ಬರೂ

ಒಟ್ಟಿಗೆ ಬಂದಿದ್ದೀರಿ. ನನ್ನಿಂದ ಏನಾಗಬೇಕು ? " ಎಂದು ಕೇಳು ತ್ತಾನೆ. ಅವರ ಮನಸ್ಸು ತಿಳಿದು, "ಯುದ್ಧ ಮಾಡದ ನಾನು ಒಂದು ಕಡೆ; ನನಗೆ ಸಮಬಲಗಾಗಿ ಹೋರಾಡುವ ಮೂರು ಅಕ್ಷೌಹಿಣಿಯ ಯಾದವ ಬಲ ಒಂದುಕಡೆ. ನೀವು ನಿಮಗೆ ಯಾವುದು ಬೇಕೋ ಹೇಳಿ. ಅರ್ಜುನನು ಕಿರಿಯವನು. ಹಿರಿಯರೂ ಕಿರಿಯರೂ ಒಟ್ಟಿಗೆ ಬಂದರೆ, ಕಿರಿಯರ ಇಚ್ಛೆಯನ್ನು ಮೊದಲು ನೆರವೇರಿಸಬೇಕು. ಅದರಿಂದ ಅರ್ಜುನನು ಮೊದಲು ವರಿಸಲಿ" ಎನ್ನುತ್ತಾನೆ. ಅರ್ಜುನನು ಮನಃಪೂರ್ವಕವಾಗಿ ಶ್ರೀಕೃಷ್ಣನೇ ಬೇಕೆನ್ನುತ್ತಾನೆ. ಶ್ರೀಕೃಷ್ಣನು ಕೌರವನು ಹೊರಟುಹೋದ ಮೇಲೆ, ಏಕಾಂತದಲ್ಲಿ ಹೀಗೇಕೆ ಮಾಡಿದೆ ಎಂದರೆ ಅರ್ಜುನನೇನು ಹೇಳಬೇಕು ? "ಶ್ರೀಕೃಷ್ಣ, ಖಾಂಡವದಹನ ಕಾಲದಲ್ಲಿ ನಿನ್ನ ಧನುರ್ವಿದ್ಯಾ ಪ್ರೌಢಿಮೆ ಯನ್ನು ಕಂಡೆ, ನಿನ್ನ ಮುಂದೆ ನಾನೆಲ್ಲಿ ಎನ್ನಿಸಿತು. ಮತ್ತೆ ಸುಭದ್ರೆ ಯನ್ನು ಹೊತ್ತುಕೊಂಡು ಹೋದಾಗ ಆಕೆಯ ಸಾರಥ್ಯ ಚಾತುರ್ಯವನ್ನು ಕಂಡು, ನೀನು ಸಾರಥ್ಯವನ್ನು ಯಾರಿಂದ ಕಲಿತೆ ? ಎಂದು ಕೇಳಿದರೆ, ನೀನು ಆಕೆಯ ಗುರು ಎಂದು ತಿಳಿಯಿತು. ಈ ಕೌರವ ಪಾಂಡವ ಯುದ್ಧವು ಬಂದೇಬರುವುದು ಎಂದು ಗೊತ್ತೇ ಇತ್ತಲ್ಲ! ಅಂದಿನಿಂದ ಶ್ರೀಕೃಷ್ಣನು ನನಗೆ ಸಾರಥಿಯಾದರೆ, ಮೂರು ಲೋಕವನ್ನೂ ಗೆಲ್ಲು ವೆನು. ನನ್ನಂತಹ ಬಿಲ್ಲುಗಾರನಿನ್ನಿಲ್ಲ ಎನ್ನಿಸಿಕೊಳ್ಳುವೆನು ಎಂದಿದ್ದೆ. ಈಗ ಅವಕಾಶವು ದೊರೆಯಿತು. ಅದಕ್ಕಾಗಿ ನಿನ್ನನ್ನೇ ವರಿಸಿದೆ" ಎಂದ.

ಎರಡು ಕಡೆಯವರೂ ಯುದ್ಧಕ್ಕೆ ಬಂದು ಕುರುಕ್ಷೇತ್ರದಲ್ಲಿ ಬೀಡು ಬಿಟ್ಟಿದ್ದಾರೆ. ಬೆಳಗಾದರೆ ಯುದ್ಧ. ಆ ದಿನ ಸಂಜೆ ಧರ್ಮ ರಾಯನು "ತಮ್ಮದು ಏಳು ಅಕ್ಷೋಹಿಣಿ: ಶತ್ರುಗಳದು ಹನ್ನೊಂದು" ಎಂದು ಹೆದರುತ್ತಾನೆ. ಆಗ ಅರ್ಜುನನು "ಯತೋಧರ್ಮಃ ತತೋಜಯಃ"—ಎಂದು ನಾರದರು ಇಂದ್ರನಿಗೆ ಹೇಳಿದ ಕಥೆಯನ್ನು ಹೇಳಿ, "ಶ್ರೀಕೃಷ್ಣನೇ ಧರ್ಮಸ್ವರೂಪನು. ಅವನಿರುವಕಡೆಗೇ ಜಯ" ಎಂದು ನಂಬಿಸುತ್ತಾನೆ.

ಶ್ರೀಕೃಷ್ಣನು ಅರ್ಜುನನನ್ನು ಯುದ್ಧಕ್ಕೆ ಮುಂಚೆ ಎಚ್ಚರಿಸಿ ದುರ್ಗಾದೇವಿಯ ಸ್ತೋತ್ರ. ಮಾಡಿಸುತ್ತಾನೆ. ಆಕೆಯು ಪ್ರಸನ್ನಳಾಗಿ "ನಮ್ಮ ಅಣ್ಣನ ಕಡೆ ನಾನು" ಎಂದು ಅಭಯ ಪ್ರದಾನ ಮಾಡುತ್ತಾಳೆ.

ಇಷ್ಟೆಲ್ಲಾ ಆಗಿ ಗೆಲುವು ನಮ್ಮದು ಎಂಬ ದೃಢವಿಶ್ವಾಸದಿಂದ ಇರುವ ಅರ್ಜುನನು ಶ್ರೀಕೃಷ್ಣ ಸಾರಥಿಯಾಗಿ ರಣರಂಗಕ್ಕೆ ಬಂದಿದ್ದಾನೆ. "ಸೇನಯೋರುಭಯೋರ್ಮಧ್ಯೇ ರಥಂ ಸ್ಥಾಪಯ ಮೇಽಚ್ಯುತ" ಎನ್ನುತ್ತಾನೆ. ಆಗ ಅರ್ಜುನನ ಠೀವಿ ಎಷ್ಟಿರಬೇಕು! ಅವನದೆಷ್ಟು ಸಲ ಮೀಸೆ ತಿರುವಿರಬೇಕು. ಅಚ್ಯುತನು—ಹೆಸರಿನ ಅರ್ಥನೋಡಿ—ಅಚ್ಯುತ—ಚ್ಯುತಿಗಾಣದವನು—ಶಾಶ್ವತ—ಸನಾತನ—ಇಂತಹ ಶ್ರೀಕೃಷ್ಣನು ರಥವನ್ನು ಉಭಯ ಸೈನ್ಯಗಳ ನಡುವೆ ನಿಲ್ಲಿಸಿದ್ದಾನೆ.

ಅರ್ಜುನನು ಸುತ್ತಲೂ ನೋಡಿದ. ಎತ್ತ ತಿರುಗಿದರೂ ಬಾಂಧವರು, ಮಿತ್ರರು. ಒಬ್ಬನು ಮಗನ ವರಸೆಯಾದರೆ ಇನ್ನೊಬ್ಬ ತಂದೆಯ ವರಸೆ. ಒಬ್ಬನು ಮೈದುನನ ವರಸೆಯಾದರೆ ಇನ್ನೊಬ್ಬ ಭಾವ. ಒಬ್ಬ ಅಣ್ಣನಾದರೆ ಇನ್ನೊಬ್ಬ ತಮ್ಮ. ಎಲ್ಲೆಲ್ಲಿಯೂ ಬಂಧು ಜಾಲ. ಮನೆಯಲ್ಲಿ ಹಬ್ಬವಾಗಿ ಪಾಯಸ ಮಾಡಿದರೆ, ತಿಥಿಯಾಗಿ ವಡೆ ಮಾಡಿದರೆ, ಎರಡೂ ತಿನ್ನುವುದಕ್ಕೆ ಬರುವ, ಬರಬೇಕಾದ ಜನ. ತಾನು ಗೆಲ್ಲಬೇಕಾದರೆ ಅವರೆಲ್ಲ ಮಡಿಯಬೇಕು: ಅವರಿಗೆಲ್ಲ ಮಾರಣ ಹೋಮವಾಗಬೇಕು. "ಯಾನೇವ ಹತ್ವಾ ನ ಜಿಜೀವಿಷಾಮಃ,"—ಯಾರನ್ನು ಕೊಂದರೆ ತನಗೆ ಜೀವನವೇ ಬೇಡವೆನ್ನಿಸುವುದೋ ಅವರು.

ಅರ್ಜುನನ ಅಂತರಂಗ ಅಲ್ಲಾಡಿಹೋಯಿತು. ಕೊಲ್ಲುತ್ತೇನೆ ಎನ್ನುವುದು ಬೇರೆ: ಕೊಲ್ಲಬೇಕಾಗಿ ಬಂದಾಗ ಕೊಲ್ಲುವುದು ಬೇರೆ. ಇವರನ್ನೆಲ್ಲಾ ಕೊಂದರೆ ಹೇಗೆ? "ಏತಾನ್ನಹಂತು ಮಿಚ್ಛಾಮಿ"–ಕೊಲ್ಲುವುದಕ್ಕೆ ಇಷ್ಟವಿಲ್ಲ ಎಂದ. ಆ ಮನೋಭಾವವು ದೇಹವನ್ನೆಲ್ಲಾ ವ್ಯಾಪಿ

ಸಿತು. ಇದುವರೆಗೆ ಇದ್ದ ಕೋಪ ಕರುಣವಾಯಿತು. “ ನೋಡು ಕೃಷ್ಣ. ಗಾಂಡೀವವು ಜಾರುತ್ತಿದೆ. ಕೈ ನಡುಗುತ್ತಿದೆ. ಮೈ ಒಣಗುತ್ತಿದೆ. ಮುಖವನ್ನು ನೋಡು. ನನಗೆ ಈ ಯುದ್ಧ ಬೇಡ. ಹಿರಿಯರು, ಓರಗೆಯವರು, ಕಿರಿಯರು ಇವರನ್ನು ಕೊಲ್ಲಲೇ ? ಆಗದು” ಎಂದು, ಪಾಪ ಪುಣ್ಯ, ಧರ್ಮಾಧರ್ಮಗಳ ಕಥೆ ಹೇಳಿ ಸುಮ್ಮನಾದ. ರಜೋಗುಣದ ಆಟ ತಾನೇ ತಾನಾಯಿತು.

ಶ್ರೀಕೃಷ್ಣನು ಹಿಂತಿರುಗಿದ: ದುರುಗುಟ್ಟಿಕೊಂಡು ನೋಡಿದ. ತನ್ನ ಗಂಟು ಹೋದಹಾಗೆ ರೇಗಿದ. “ ಕ್ಲೈಬ್ಯಂ ಮಾಸ್ಮಗಮಃ ಪಾರ್ಥ, ನೈತತ್ ತ್ವಯ್ಯುಪಪದ್ಯತೇ। ಕ್ಷುದ್ರಂ ಹೃದಯ ದೌರ್ಬಲ್ಯಂ ತ್ವಕ್ತ್ವೋತ್ತಿಷ್ಠ ಪರಂತಪ”—ಅರ್ಜುನ, ಹೇಡಿಯಾಗಬೇಡ. ನಿನಗಿದು ತಕ್ಕುದಲ್ಲ. ಈ ಹೃದಯ ದೌರ್ಬಲ್ಯವನ್ನು ಬಿಡು. ಇದು ಕ್ಷುದ್ರ. ನೀನು ಗೆಲ್ಲಬಲ್ಲವನು ” ಎಂದು ಗದರಿಸಿದ.

ಅರ್ಜುನನು ವಿಷಾದ ಭಾವ ಬಿಡಲಿಲ್ಲ. “ ಭೀಷ್ಮ ದ್ರೋಣರು ಪೂಜಾರ್ಹರು. ಅವರನ್ನು ಬಾಣಗಳಿಂದ ಹೊಡೆದು ಕೊಲ್ಲಲೆ ? ಗುರುಗಳನ್ನು ಕೊಂದು ಅವರ ರಕ್ತದಿಂದ ಕೂಡಿದ ಭೋಗಗಳನ್ನು ಅನುಭವಿಸುವುದಕ್ಕಿಂತ ಭಿಕ್ಷಾಟನವು ಉತ್ತಮ” ಎಂದ. ಅಷ್ಟೇ ಅಲ್ಲ. ಸಂಶಯವೂ ಬಂತು : “ ನಮ್ಮಲ್ಲಿ ಯಾರು ಹೆಚ್ಚೋ ಯಾರು ಬಲ್ಲರು ? “ಯದ್ವಾಜಯೇಮ, ಯದಿವಾ ಜಯೇಯುಃ”–ನಾವೇ ಗೆಲ್ಲುವೆವೋ? ಅವರೇ ಗೆಲ್ಲುವರೋ ?” ಎಂದೂ ಹೇಳಿದ. ಆದರೂ ಬಹು ದಿನದಿಂದ ಶ್ರೀಕೃಷ್ಣನನ್ನು ದೊಡ್ಡವನೆಂದು ಎಂದು ಅಭ್ಯಾಸವಾಗಿದ್ದ ಮನಸ್ಸು ಆಗಲೂ, ಆ ದುಷ್ಕಾಲದಲ್ಲೂ ಅಭ್ಯಾಸದಂತೆ ಆತನನ್ನೇ ಆಶ್ರಯಿಸಿತು : “ಕಾರ್ಪಣ್ಯದೋಷೋಪಹತಸ್ವಭಾವಃ ಪೃಚ್ಛಾಮಿ ತ್ವಾಂ ಧರ್ಮಸಮ್ಮೂಢಚೇತಾಃ”–ನನ್ನ ಮನಸ್ಸು ಕಾರ್ಪಣ್ಯಕ್ಕೊಳಗಾಗಿದೆ. ನಾನು ಧರ್ಮವು ಯಾವುದು ತಿಳಿಯದೆ ಮೂಢನಾಗಿದ್ದೇನೆ. ನಿನ್ನನ್ನೇ ಕೇಳುವೆನು. “ಯಚ್ಛ್ರೇಯಃಸ್ಯಾನ್ನಿಶ್ಚಿತಂ ಬ್ರೂಹಿ ತನ್ಮೇ”–ನನಗೆ ಯಾವುದು ಶ್ರೇಯಸ್ಸು ಎಂಬುದನ್ನು ನೀನೇ ಗೊತ್ತುಮಾಡಿ ಹೇಳು.

"ಶಿಷ್ಯಸ್ತೇಹಂ ಶಾಧಿ ಮಾಂ ತ್ವಾಂ ಪ್ರಪನ್ನಂ"—ನಿನಗೆ ನಾನು ಶಿಷ್ಯನು. ನಿನ್ನನ್ನು ಸೇರಿದೆನು. ನನ್ನನ್ನು ಕಾಪಾಡು " ಎಂದನು. ಅಷ್ಟೇ ಅಲ್ಲ.ಆತನಿಗೆ ತನಗೆ ದುಃಖವು ಬಂದಿದೆಯೆಂಬುದೂ ಗೊತ್ತು : ಆ ದುಃಖವು ಎಷ್ಟು ದೊಡ್ಡದು ಎಂಬುದೂ ಗೊತ್ತು. ಆ ಶೋಕವು ಎಂತಹುದು ! "ಉಚ್ಛೋಷಣಮಿಂದ್ರಿಯಾಣಾಂ"–ಇಂದ್ರಿಯಗಳನ್ನು, ದೇಹವನ್ನು,ಒಣಗಿಸುವಂತಹ ಶೋಕ. "ನ ಹಿ ಪ್ರಪಶ್ಯಾಮಿ ಮಮಾಪನುದ್ಯಾತ್ ಯತ್"–ಅದನ್ನು ಅಡಗಿಸುವುದು ಯಾವುದೋ ಕಾಣೆ, ಎಂದ.

ಇಂತಹ ಶೋಕ ಬಂದಾಗ, ಶೋಕವನ್ನು ಸಹಿಸಲಾರದೆ, ರೋಗವು ಅತಿಬಲವಾದಾಗ ಯಾವ ವೈದ್ಯನಾದರೂ ಸರಿಯೇ, ಔಷಧ ಎಂದು ಕೊಟ್ಟರೆ ಸಾಕು ಎನ್ನುವಂತೆ, ಅರ್ಜುನನು ಶ್ರೀಕೃಷ್ಣನ ಮರೆ ಹೊಕ್ಕಿದ್ದಾನೆ. "ಅನ್ಯಥಾ ಶರಣಂ ನಾಸ್ತಿ ತ್ವಮೇವ ಶರಣಂ ಮಮ"–ಇನ್ನು ಗತಿಯಿಲ್ಲ : ನೀನೇ ನನಗೆ ಶರಣು ಎಂಬಂತೆ ! ಆಗ ಗೀತೆಯು ಹುಟ್ಟಿದುದು. ವಿಷಮವಾದ ಸನ್ನಿವೇಶದಲ್ಲಿ, ಮಾಡಿದರೂ ಪಾಪ, ಬಿಟ್ಟರೂ ಪಾಪ, ಎಂಬ ಪ್ರಬಲವಾದ ಧರ್ಮಸಂಕಟದಲ್ಲಿ, ಏನು ಮಾಡಬೇಕೋ ತಿಳಿಯದೆ ಅಪಾರವಾದ ಶೋಕಕ್ಕೆಡೆಯಾಗಿರುವಾಗ, ಗೀತೆಯು ಹುಟ್ಟಿದುದು. ಅದನ್ನು ನಾವು ಮರೆಯಬಾರದು. ಗೀತೆ ಮಾನವನು ಕಾರ್ಯಪರನಾದಾಗ ಬಂದ ಸಂಕಟವನ್ನು ಕಳೆದುಕೊಳ್ಳುವುದಕ್ಕೆ ಕೊಟ್ಟ ಉಪದೇಶ. ಧರ್ಮ ಸಂಕಟ ಬಂದಾಗ ಅದರಿಂದ ಪಾರಾಗಲು ಸ್ವಾಮಿಯು ಕರುಣಿಸಿದ ಸಾಧನ.

ಇನ್ನು ಗೀತಾಚಾರ್ಯನ ವಿಷಯವಾಗಿ ಅಷ್ಟು ನೋಡೋಣ.

ಗೀತಾಚಾರ್ಯನು 'ನಾನು' ಎಂದು ಮೊಟ್ಟಮೊದಲು ಹೇಳಿಕೊಳ್ಳುವುದು ಮೂರನೆಯ ಅಧ್ಯಾಯದಲ್ಲಿ. "ನ ಮೇ ಪಾರ್ಥಾಸ್ತಿ ಕರ್ತವ್ಯಂ ತ್ರಿಷು ಲೋಕೇಷು ಕಿಂಚನ"–ಮೂರು ಲೋಕದಲ್ಲಿಯೂ ನಾನು ಮಾಡಬೇಕಾದುದು ಎಳ್ಳಷ್ಟೂ ಇಲ್ಲ. ಏಕೆಂದರೆ, "ನಾನವಾಪ್ತಮವಾಪ್ತವ್ಯಂ"—ಬೇಕೆಂದುದು ಯಾವುದೂ ಸಿಕ್ಕದೇ ಇಲ್ಲ. ಆದರೂ "ವರ್ತಏವಚ ಕರ್ಮಣಿ"–ಕರ್ಮವನ್ನು ಮಾಡುತ್ತಲೇ ಇರು

ವೆನು. ಏಕೆ ? ಎನ್ನುವೆಯಾ ? ಜಾಗ್ರತೆಯಿಂದ ನಾನು ಕೆಲಸ ಮಾಡದೆ ಹೋದರೆ ಲೋಕದವರೂ ನನ್ನ ಹಾದಿಯನ್ನು ಹಿಡಿದಾರು. ನಾನು ಕೆಲಸ ಮಾಡದಿದ್ದರೆ ಲೋಕಗಳು ನಾಶವಾದಾವು ! ಪ್ರಜೆಗಳನ್ನು ಕೆಡಿಸಿದವನಾದೇನು ! ಏನು ಮಾತು ! "ಮಮವರ್ತ್ಮಾನುವರ್ತಂತೇ ಮನುಷ್ಯಾಃ ಪಾರ್ಥ ಸರ್ವಶಃ"—ಲೋಕದಲ್ಲಿ ಎಲ್ಲರೂ ನನ್ನ ಮಾರ್ಗವನ್ನು ಅನುಸರಿಸುವರು. "ಉತ್ಸೀದೇಯುರಿಮೇ ಲೋಕಾಃ ನ ಕುರ್ಯಾಂ ಕರ್ಮಚೇದಹಂ"—ನಾನು (ಮಾಡುವ ಕರ್ಮದಿಂದಲೇ ಈ ಲೋಕವು ಉಳಿದಿರುವುದು : ಆದ್ದರಿಂದ) ಕರ್ಮವನ್ನು ಮಾಡದೇ ಹೋದರೆ ಲೋಕವು ನಾಶವಾದೀತು. ಸಂಕರವಾದೀತು. ಪ್ರಜೆಗಳೆಲ್ಲರೂ ಸತ್ತಂತಾಗುವರು".

ಹೀಗೆ, ತನ್ನ ವಿಚಾರವಾಗಿ ಹೇಳುವಾಗಲೇ ತಾನೊಬ್ಬ ಜಗದ್ಗುರು, ಜಗದಾಚಾರ್ಯ ಎಂಬಂತೆ ಮಾತನಾಡುವ ಶ್ರೀಕೃಷ್ಣನು ನಾಲ್ಕನೆಯ ಅಧ್ಯಾಯದಲ್ಲಿ ಸ್ಪಷ್ಟವಾಗಿ ತಾನು ಪರಮಾತ್ಮನೆಂತಲೇ ಹೇಳಿಕೊಳ್ಳುತ್ತಾನೆ. ನಾಲ್ಕನೆಯ ಅಧ್ಯಾಯದ ಮೊದಲಲ್ಲಿ "ಇಮಂ ವಿವಸ್ವತೇ ಯೋಗಂ ಪ್ರೋಕ್ತವಾನಹಮವ್ಯಯಂ । ಸ ಏವಾಯಂ ಮಯಾ ತೇऽದ್ಯಯೋಗಃ ಪ್ರೋಕ್ತಃ ಪುರಾತನಃ"—ಅರ್ಜುನ, ಈಗ ತಾನೇ ನಾನು ನಿನಗೆ ಹೇಳಿದೆನಲ್ಲವೇ ? ಬುದ್ಧಿಯಿಂದ ಆಚಿನದನ್ನು ತಿಳಿ ; ಮನಸ್ಸನ್ನು ಭದ್ರವಾಗಿ ಹಿಡಿ : ಕಾಮವನ್ನು ಕೊಲ್ಲು ಎಂದು. ಆ ಯೋಗವನ್ನು ನಾನು ಹಿಂದೆ ಸೂರ್ಯನಿಗೆ ಹೇಳಿದೆನು : ಅದನ್ನೇ, ಆ ಪುರಾತನ ಯೋಗವನ್ನೇ ಈಗ ನಾನು ನಿನಗೆ ಹೇಳಿದೆನು" ಎಂದನು. ಅರ್ಜುನನು ಅದನ್ನು ಒಪ್ಪಲಿಲ್ಲ : "ಅಪರಂ ಭವತೋ ಜನ್ಮ ಅಪರಂಚ ವಿವಸ್ವತಃ"–ಸೂರ್ಯನು ಆಗಿದ್ದವನು : ನೀನು ಈಗಿರುವವನು. ನೀನು ಅವನಿಗೆ ಹೇಳಿದೆಯೆಂದರೆ, "ಕಥಮೇತದ್ವಿಜಾನೀಯಾಂ." ನಾನು ತಿಳಿಯುವುದು ಹೇಗೆ ?" ಎಂದು ಕೇಳಿದನು.

ಆಗ ಶ್ರೀಕೃಷ್ಣನು ಏನು ಹೇಳುತ್ತಾನೆ ನೋಡಿ. "ಬಹೂನಿಮೇ ವ್ಯತೀತಾನಿ ಜನ್ಮಾನಿ ತವ ಚಾರ್ಜುನ"-ನನಗೂ ನಿನಗೂ ಎಷ್ಟೋ ಜನ್ಮ

ಗಳಾಗಿವೆ. "ತಾನ್ಯಹಂ ವೇದ ಸರ್ವಾಣಿ ನತ್ವಂ ವೇತ್ಥ ಪರಂತಪ"–(ಆದರೆ) ಅವೆಲ್ಲವನ್ನೂ ನಾನು ಬಲ್ಲೆ: ನೀನು ಕಾಣೆ" ಅಷ್ಟೆಂದು ಸ್ವಾಮಿಯು ಸುಮ್ಮನಾಗಲಿಲ್ಲ. ತನ್ನ ಜನ್ಮದ ಸ್ವರೂಪವೇನು ಎಂಬುದನ್ನು ಹೇಳಿದ: ಅಷ್ಟೇ ಅಲ್ಲ: "ಜನ್ಮ ಕರ್ಮ ಚ ಮೇ ದಿವ್ಯ ಮೇವಂ ಯೋ ವೇತ್ತಿ ತತ್ತ್ವತಃ। ತ್ಯಕ್ತ್ವಾ ದೇಹಂ ಪುನರ್ಜನ್ಮ ನೈತಿ ಮಾಮೇತಿ ಸೋಽರ್ಜುನ"–ನನ್ನ ಜನ್ಮವೂ ಕರ್ಮವೂ ದಿವ್ಯ ಎಂದರೆ ಮಾನವರಿಗಿಂತ ಮೇಲಿನ ಮಟ್ಟದ್ದು: ಅದನ್ನು ನಾನು ಹೇಳಿದಂತೆ ಸರಹಸ್ಯವಾಗಿ ಯಾರಾದರೂ ತಿಳಿದರೆ ಸಾಕು. ಅವರು ದೇಹಾನಂತರದಲ್ಲಿ ನನ್ನನ್ನೇ ಹೊಂದುವರು." ಗೀತೆಯಲ್ಲಿ ಕರ್ಮಯೋಗ, ಜ್ಞಾನಯೋಗ, ಧ್ಯಾನಯೋಗ ಮೊದಲಾದ ನಾನಾ ವಿಧ ಯೋಗಗಳನ್ನು ಹೇಳಿರುವುದೆಲ್ಲ ಏಕೆ? ಕರ್ಮಬಂಧವನ್ನು ಬಿಡಿಸಿಕೊಂಡು, ಶಾಂತಿಯನ್ನು ಪಡೆದು, ಪರಮನ ಧಾಮವನ್ನು ಪಡೆಯುವುದಕ್ಕೆ: ಆ ಕಾರ್ಯವು ಶ್ರೀಕೃಷ್ಣನ ದಿವ್ಯ ಜನ್ಮಕರ್ಮಗಳನ್ನು ತತ್ತ್ವತಃ ತಿಳಿದರೆ ಆಗುವುದಂತೆ. ಅದೂ ಆ ಜನ್ಮ ಕರ್ಮಗಳ ದಿವ್ಯತ್ವವನ್ನು ನಮಗೆ ತಿಳಿದಂತೆ, ನಮಗೆ ತೋರಿದಂತೆ ತಿಳಿದರೆ ಸಾಲದು. "ಏವಂ, ತತ್ತ್ವತಃ," ಏವಂ, ನಾನು ಹೇಳಿರುವಂತೆ, ತತ್ತ್ವತಃ, ಅದಿರುವಂತೆ, ತಿಳಿಯಬೇಕು. ಎನ್ನುತ್ತಾನೆ.

ಒಂದು ವಸ್ತುವನ್ನು ನೋಡಿ ನಮಗೆ ತೋರಿದಂತೆ ಭಾವಿಸಿಕೊಂಡರೆ ಅದು ನಮ್ಮ ಮನೋಭಾವನೆ. ಅದು ವೃತ್ತಿ: ದಿಟವಿರಬಹುದು: ದಿಟವಲ್ಲದಿರಬಹುದು. ಅದು ತತ್ತ್ವವಲ್ಲ: ಅದು ವ್ಯಾಖ್ಯಾನ: (Interpretation not truth). ತತ್-ತ್ವವು ವಸ್ತುಸ್ವಭಾವದ ಜ್ಞಾನ. ಅದನ್ನು ವಸ್ತುವೇ ಹೇಳಬೇಕೇ ಹೊರತು ಹೊರಗಿನಿಂದ ತಿಳಿಯುವಂತಿಲ್ಲ. ಒಂದು ವೃತ್ತಿ: ಇನ್ನೊಂದು ಸತ್ಯ—ರಾಜಸೂಯ ಯಾಗ ಮಂಟಪದಲ್ಲಿ ಕೌರವನಿಗೆ ನೀರು ನೋಡಿ ಕನ್ನಡಿಯೆನ್ನಿಸಿತು. ಅದು ಅವನ ವೃತ್ತಿ. ಅದರಲ್ಲಿ ಬಿದ್ದ ಮೇಲೆ ಕನ್ನಡಿಯಲ್ಲ: ನೀರು ಎನ್ನಿಸಿತು. ಅದು ಸತ್ಯ. ಹಾಗೆ. ಅದರಿಂದ ತನ್ನ ದಿವ್ಯಜನ್ಮಕರ್ಮ

ತತ್ತ್ವವನ್ನು ಸ್ವಾಮಿಯು ತಾನೇ ಹೇಳಬೇಕಾಯಿತು. ಏನು ಹೇಳು ವನು ನೋಡೋಣ.

"ಅಜೋಽಪಿ ಸನ್ನವ್ಯಯಾತ್ಮಾ ಭೂತಾನಾಮೀಶ್ವರೋಽಪಿ ಸನ್॥ ಪ್ರಕೃತಿಂ ಸ್ವಾಂ ಅಧಿಷ್ಠಾಯ ಸಂಭವಾಮ್ಯಾತ್ಮಮಾಯಯಾ "— 'ಅಜ' ಎಂದರೆ ಜನ್ಮರಹಿತನಾದರೂ, 'ಅವ್ಯಯಾತ್ಮಾ' ವಿಕಾರ ಗಳನ್ನು ಪಡೆಯದವನಾದರೂ, 'ಭೂತಾನಾಂ ಈಶ್ವರೋಽಪಿ ಸನ್' ಭೂತಗಳಿಗೆಲ್ಲ ಎಂದರೆ ಪ್ರಾಣಿಗಳಿಗೆಲ್ಲ ಈಶ್ವರನಾದರೂ, ಪ್ರಕೃತಿಂ ಸ್ವಾಂ ಅಧಿಷ್ಠಾಯ ಸಂಭವಾಮಿ—ನನ್ನದೇ ಆದ ಪ್ರಕೃತಿಯನ್ನು ಅವಲಂಬಿಸಿ ಹುಟ್ಟಿಬರುವೆನು. ಅಜನೂ ಅವ್ಯಯನೂ ಈಶ್ವರನೂ ಆದವನು ಸಂಭವವನ್ನು ಹೊಂದುವುದು ಹೇಗೆ? ಎಂದರೆ ಆತ್ಮ ಮಾಯಯಾ; ಮನುಷ್ಯನಿಗೆ ಅರ್ಥವಾಗದ ದೈವದ ವಿಚಿತ್ರಗತಿ ಯೊಂದಿದೆ; ಅದು ಈಶ್ವರ ಮಾಯೆ: ಅದನ್ನು ಹಿಡಿದು, ಎಂದರ್ಥ. ಕೃಷ್ಣರಾಜಸಾಗರದಲ್ಲಿ ಕಟ್ಟೆಯ ಹಿಂದೆ ಅಗಾಧವಾಗಿ ನಿಂತಿರುವ ಜಲ ರಾಶಿ ತೂಬಿನೊಳಗೆ ಹೇಗೆ ಬಂತು? ಎಂದು ನಾವು ಕೇಳುವುದಿಲ್ಲ. ಕೇಳಿದರೆ ಅದೂ ಬಹುಶಃ "ಆತ್ಮಮಾಯಯಾ" ಎಂದೀತೋ ಏನೋ? ನಾವು ಬಹು ದಿವಸದಿಂದ ಸ್ಥಿರವಾದ ಜಲರಾಶಿಯನ್ನೂ ಚರವಾದ ಜಲಪ್ರವಾಹವನ್ನೂ ಕಂಡು ಕಂಡು ಅದರಲ್ಲಿ ನಮಗೆ ತಿಳಿಯದಿರುವುದೆಷ್ಟು ಎಂಬುದನ್ನು ಮರೆತು ಹೋಗಿದ್ದೇವೆ. ಹಾಗೆಯೇ ಅವತಾರ ಎನ್ನುವ ಮಾತು ನಮ್ಮಲ್ಲಿ ಬಹಳ ದಿನದಿಂದ ಉಪಯೋಗದಲ್ಲಿದ್ದು ಸವೆದು ಹೋಗಿ ಸವೆಕಲು ಕಾಸಾಗಿದೆ. ಆ ಮಾತನ್ನು ಮತ್ತೆ ಇಂದು ನಾವು ಅರ್ಥಮಾಡಿಕೊಳ್ಳಬೇಕು. ಹಾಗೆ ನಮ್ಮ ಹಿಂದಿನ ಜೀವನವನ್ನು ಅರ್ಥಮಾಡಿಕೊಳ್ಳಬೇಕು. ಭಾರತೀಯನ ಜೀವನ ಎಷ್ಟು ಸುಂದರವಾಗಿತ್ತು! ಎಷ್ಟು ಶಾಂತಿ ಮಯವಾಗಿತ್ತು! ಎಷ್ಟು ಸುಖವಾಗಿತ್ತು! ಅದರ ಪುನರುಜ್ಜೀವನವೇ ಇಂದಿನ ಸಂಸ್ಕೃತಿಪ್ರಸಾರದ ಗುರಿ. ನಮ್ಮಲ್ಲಿ ಇಂತಹ ಸವೆಕಲು

ಕಾಸಾದ ಮಾತುಗಳು ಎಷ್ಟೋ ಇವೆ. ಅವನ್ನೂ ಮತ್ತೆ ಹೊಸದು ಮಾಡಬೇಕು. ಮಾಡೋಣ: ಆಗುತ್ತದೆ.

ಅಜೋऽಪಿ ಎಂಬ ಶ್ಲೋಕದಲ್ಲಿ ನಾವು ವಿಚಾರಮಾಡಿ ಅರ್ಥ ಮಾಡಿಕೊಳ್ಳಬೇಕಾದ ಐದು ಶಬ್ದಗಳಿವೆ. ಅಜ, ಅವ್ಯಯಾತ್ಮಾ, ಈಶ್ವರ, ಪ್ರಕೃತಿ, ಆತ್ಮಮಾಯಾ, ಎಂಬೀ ಐದು ಶಬ್ದಗಳೂ ವಿಚಾರಾರ್ಹವಾದವು. ಲೋಕವೆಲ್ಲವೂ ಜ-ಹುಟ್ಟಿದುದು. ಆತನೊಬ್ಬನೇ ಅಜ. ಹೌದೇ ಅಲ್ಲವೇ ಎಂದು ಕೇಳೋಣವೆಂದರೆ ಆಗ ಯಾರು ಇದ್ದರು? ಉಪನಿಷತ್ತು ಹೇಳಿತು "ಆತ್ಮಾ ವಾ ಇದಮೇಕ ಏವಾಗ್ರ ಆಸೀತ್: ನಾನ್ಯತ್ಕಿಂಚನಮಿಷತ್"-ಮೊದಲಲ್ಲಿ ಆತ್ಮವೊಂದೇ ಇತ್ತು: ಇನ್ನೇನೂ ಇರಲಿಲ್ಲ. ಹೋಗಲಿ, ದೇವತೆಗಳನ್ನಾಗಲಿ ಮಹರ್ಷಿಗಳನ್ನಾಗಲಿ ಕೇಳೋಣ ಎಂದರೆ—ನಮಗೆ ಬಂದಿರುವ ಆತ್ಮಜ್ಞಾನವೆಲ್ಲ ದೇವತೆಗಳಿಂದ ಮಹರ್ಷಿಗಳಿಂದ ಬಂದುದು—ಆತನೇ ಹೇಳಿದ: "ನಮೇ ವಿದುಃ ಸುರಗಣಾ ಪ್ರಭವಂ ನ ಮಹರ್ಷಯಃ"-ದೇವತೆಗಳೂ ಮಹರ್ಷಿಗಳೂ ಕೂಡ ನನ್ನ ಜನ್ಮದ ಗುಟ್ಟನ್ನು ಕಾಣರು. ಯಾಕೆಂದರೆ "ಅಹಮಾದಿರ್ಹಿದೇವಾನಾಂ ಮಹರ್ಷೀಣಾಂಚ ಸರ್ವಶಃ"—ಅವರೆಲ್ಲರೂ ನನ್ನಿಂದ ಹುಟ್ಟಿಬಂದವರು. ಆದರಿಂದ ನನ್ನ ಮಾತನ್ನು ಕೇಳು. "ಅಹಮಾದಿಶ್ಚ ಮಧ್ಯಶ್ಚ ಭೂತಾನಾಮಂತ ಏವಚ"—ನಾನು ಭೂತಗಳೆಲ್ಲರ ಆದಿ, ಮಧ್ಯ, ಅಂತ. ಅದರಿಂದ "ಮಾಮಜಮನಾದಿಂಚ ವೇತ್ಥ"—ನಾನು ಅಜ, ಅನಾದಿ ಎಂದು ತಿಳಿದುಕೊ.

ನಾನು ಅವ್ಯಯಾತ್ಮಾ—ನನಗೆ ವ್ಯಯ ಎಂದರೆ ವಿಕಾರವಿಲ್ಲ. ಸುವರ್ಣವು ಸುವರ್ಣವೇ ಆಗಿದ್ದೂ ನಾನಾ ಆಭರಣಗಳಾಗಿರುವಂತೆ, ನಾನು ನಾನೇ ಆಗಿದ್ದೂ ಲೋಕವೆಲ್ಲಾ ಆಗಿರುವೆನು. "ಮಯಾ ತತಮಿದಂ ಸರ್ವಂ ಜಗದವ್ಯಕ್ತಮೂರ್ತಿನಾ"-ನಾನು ಅವ್ಯಕ್ತನೇ ಆಗಿದ್ದುಕೊಂಡು ಈ ಲೋಕವನ್ನೆಲ್ಲಾ ತುಂಬಿಕೊಂಡಿರುವೆನು. "ವಿಷ್ಟಭ್ಯಾಹಮಿದಂ ಕೃತ್ಸ್ನಮೇಕಾಂಶೇನ ಸ್ಥಿತೋ ಜಗತ್"—ಈ ಜಗತ್ತೆಲ್ಲವನ್ನೂ ನನ್ನ ಏಕಾಂಶದಿಂದ ಆವರಿಸಿಕೊಂಡಿರುವೆನು. "ಬ್ರಹ್ಮಣೋಹಿ ಪ್ರತಿ

ಷ್ಠಾಹಮವ್ಯಯಸ್ಯಾಮೃತಸ್ಯಚ, ಶಾಶ್ವತಸ್ಯಚ ಧರ್ಮಸ್ಯ ಸುಖಸ್ಯೈ ಕಾಂತಿಕಸ್ಯಚ'' ಅವ್ಯಯವೂ ಅಮೃತವೂ ಆದ ಬ್ರಹ್ಮ, ಸನಾತನವಾದ ಧರ್ಮ, ಅಖಂಡವಾದ ಸುಖ, ಇವು ಮೂರಕ್ಕೂ ನಾನೇ ಆಶ್ರಯನು. ಎಂದು ಹೇಳಿ ತನ್ನ ಸ್ವರೂಪವನ್ನು ಹೇಳಿದ್ದಾನೆ.

ಮೂರನೆಯದು ಭೂತಾನಾಂ ಈಶ್ವರೋಽಪಿ ಸನ್. ಹುಟ್ಟಿರುವುದೆಲ್ಲ ಭೂತ. ಅವೆಲ್ಲಕ್ಕೂ ಈಶ್ವರನೊಬ್ಬನಿದ್ದಾನೆ. ಅತನು ಸರ್ವಲೋಕ ಮಹೇಶ್ವರ. ಎಲ್ಲಕ್ಕೂ ಪ್ರಭು. ''ಮತ್ತಃ ಪರತರಂ ನಾನ್ಯತ್ ಕಿಂಚಿದಸ್ತಿ ಧನಂಜಯ.''—ನನಗಿಂತಲೂ ಹೆಚ್ಚಿನದು ಇನ್ನೊಂದಿಲ್ಲ ಎಂದ. ಆ ಈಶ್ವರನು ಎಲ್ಲಿಯೋ ಇದ್ದಾನೆ. ನಾವು ಆತನಿಗೇನು ಸಲ್ಲಿಸಬೇಕೋ ಆ ಕಾಣಿಕೆ ಸಲ್ಲಿಸಿದ ಮೇಲೆ ಸ್ವತಂತ್ರರು ಎನ್ನೋಣ ಎಂದರೆ, ಇಲ್ಲ. ''ಈಶ್ವರಸ್ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ। ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ''—ಈಶ್ವರನು ಎಲ್ಲರ ಹೃದಯದಲ್ಲೂ ಇದ್ದಾನೆ. ಯಂತ್ರದಲ್ಲಿ ಕುಳಿತು ಅದನ್ನು ಆಡಿಸುವಂತೆ ತನ್ನ ಮಾಯೆಯಿಂದ ಎಂದರೆ ಅವರಿಗೆ ತಿಳಿಯದಂತೆ ತಿರುಗಿಸುತ್ತಿರುತ್ತಾನೆ. ನಮ್ಮ ಹೃದಯದಲ್ಲಿ ಇರುವವನು ನಮಗೆ ತಿಳಿಯನೇ ಎಂದರೆ, ಅದಕ್ಕೂ ಹೇಳಿದ. ''ಸರ್ವಸ್ಯ ಚಾಹಂ ಹೃದಿಸನ್ನಿವಿಷ್ಟಃ ಮತ್ತಃ ಸ್ಮೃತಿರ್ಜ್ಞಾನಮಪೋಹನಂಚ.''-ಎಲ್ಲರ ಹೃದಯದಲ್ಲೂ ನಾನೇ ಇದ್ದೇನೆ. ಅವರವರ ನೆನೆವು, ಅರಿವು, ಮರೆವು, ಇವೂ ನನ್ನಿಂದಲೇ! ನಾನು ಬಲ್ಲೆ ಎಂದರೆ ಅವನಿಂದ: ನಾನು ಮರೆತೆ ಎಂದರೆ ಅವನಿಂದ: ನೆನೆಪಾಯಿತು ಎಂದರೆ ಅವನಿಂದ. ಇಂಥವನು ಈಶ್ವರನಲ್ಲವೆ? '' ನಮ್ಮ ಹೃದಯದಲ್ಲಿ ಇರುವವನು ನಮಗೆ ತಿಳಿಯಬೇಕಲ್ಲವೆ ಎಂದರೆ, ''ನಾಹಂ ಪ್ರಕಾಶಃ ಸರ್ವಸ್ಯ ಯೋಗಮಾಯಾ ಸಮಾವೃತಃ''—ಯೋಗಮಾಯೆ ನನ್ನನ್ನು ಮುಚ್ಚಿದೆ. ಅದರಿಂದ ನಾನು ಎಲ್ಲರಿಗೂ ಕಾಣಿಸುವುದಿಲ್ಲ''. ಎಂದ.

ಇನ್ನು ನಾಲ್ಕನೆಯದಾದ ಪ್ರಕೃತಿಯ ವಿಚಾರ. ಆ ಪ್ರಕೃತಿಯು ಎಂಥಹುದು! ಸವ್ಯಸಾಚಿಯಾದ ಅರ್ಜುನನನ್ನೂ ಹಿಡಿತದಲ್ಲಿಟ್ಟುಕೊಂಡಿದೆ.

ಸ್ವಾಮಿ ಹೇಳಿದ, "ಅರ್ಜುನ, ಎಚ್ಚರಿಕೆ! "ಯದಹಂಕಾರ ಮಾಶ್ರಿತ್ಯ ನ ಯೋತ್ಸ್ಯ ಇತಿಮನ್ಯಸೇ! ಮಿಥ್ಯೈಷ ವ್ಯವಸಾಯಸ್ತೇ ಪ್ರಕೃತಿಸ್ತ್ವಾಂ ನಿಯೋಕ್ಷ್ಯತಿ ‖"—ನೀನು ಅಹಂಕಾರದಿಂದ ಯುದ್ಧ ಮಾಡುವುದಿಲ್ಲ ಎನ್ನುವೆಯೇನೋ? ನಿನ್ನ ಇಚ್ಛೆಯು ಫಲಿಸುವುದಿಲ್ಲ. ನಿನ್ನ ಪ್ರಕೃತಿಯೇ ನಿನ್ನಿಂದ ಕೆಲಸ ಮಾಡಿಸುತ್ತದೆ. "ಪ್ರಕೃತೇಃ ಕ್ರಿಯಮಾಣಾನಿ ಗುಣೈಃ ಕರ್ಮಾಣಿ ಸರ್ವಶಃ| ಅಹಂಕಾರವಿಮೂಢಾತ್ಮಾ ಕರ್ತಾಹ ಮಿತಿ ಮನ್ಯತೇ‖"–ಪ್ರಕೃತಿಯ ಗುಣಗಳು ಎಲ್ಲ ಕರ್ಮವನ್ನೂ ಮಾಡುತ್ತವೆ. ಅಹಂಕಾರದಿಂದ ಬುದ್ಧಿ ಕೆಟ್ಟವನು ನಾನು ಮಾಡಿದೆ ಎಂದುಕೊಳ್ಳುತ್ತಾನೆ. ಅಷ್ಟೇ ಅಲ್ಲ! ಅರ್ಜುನ, "ಸದೃಶಂ ಚೇಷ್ಟತೇ ಸ್ವಸ್ಯಾಃ ಪ್ರಕೃತೇರ್ಜ್ಞಾನವಾನಪಿ."–ಜ್ಞಾನಿಯೂ ತನ್ನ ಪ್ರಕೃತಿಯನ್ನು ಮೀರಲಾರ. "ಪ್ರಕೃತಿಂ ಯಾಂತಿ ಭೂತಾನಿ"—ಭೂತಗಳು ತಮ್ಮ ತಮ್ಮ ಪ್ರಕೃತಿಯಂತೇ ನಡೆಯಬೇಕು. ಪ್ರತಿಯೊಂದಕ್ಕೂ ಒಂದು ಮಿತಿಯಿದೆ. ಕೀಳು (ಮಿನಿಮಂ), ಮೇಲು (ಮ್ಯಾಕ್ಸಿಮಂ) ಎಂಬ ಎರಡು ದಡಗಳ ನಡುವೆ ಭೂತಗಳ ವ್ಯವಹಾರ. ಈ ಕೀಳು ಮೇಲುಗಳನ್ನು ಬದಲಾಯಿಸಬೇಕಾದರೆ ಅದನ್ನು ಬಿಟ್ಟು ಈಚೆಗೆ ಬರಬೇಕು. ಅಲ್ಲಿಯೇ ಇದ್ದು ಏನೂ ಮಾಡುವುದಕ್ಕಾಗುವುದಿಲ್ಲ ಎಂದು "ನಿಗ್ರಹಃ ಕಿಂಕರಿಷ್ಯತಿ" ಎಂದು ಪ್ರಕೃತಿಯ ಸರ್ವಸ್ವಾಮ್ಯವನ್ನು ಹೇಳಿದ.

ಆಯಿತು: ಆ ಪ್ರಕೃತಿಯು ಯಾರು? ಯಾರದು? ಅದಕ್ಕೆ ತಾನೇ ಉತ್ತರವನ್ನು ಯಾರು ಹೇಳಬೇಕು? ಸ್ವಾಮಿಯೇ ಹೇಳಿದ. ಇದೇ ಶ್ಲೋಕದಲ್ಲಿ ಪ್ರಕೃತಿ ನನ್ನದು ಎಂದ. ಮುಂದೆ ಅದನ್ನೇ ವಿಸ್ತರಿಸಿ. ನನ್ನವು ಎರಡು ಪ್ರಕೃತಿಗಳಿವೆ: ಪರಾ, ಅಪರಾ, ಎಂದು. ಪಂಚಭೂತಗಳೂ ಮನೋಬುದ್ಧ್ಯಹಂಕಾರಗಳೂ ಒಂದು ಪ್ರಕೃತಿ. ದೇಹವನ್ನು ಕಟ್ಟುವ ಪಂಚ ಭೂತಗಳು, ಅವುಗಳೊಳಗೆ ಇರುವ ಅಂತಃಕರಣ ಇದಿಷ್ಟೂ ಒಂದು ಪ್ರಕೃತಿ. ಇದೇ ಚರವಾಗಿ ಲೋಕವನ್ನೆಲ್ಲಾ ರಚಿಸುವುದು. ಇದು ಅಪರಾ. ಕೆಳಗಿನದು. ಇದಲ್ಲದೆ ಇನ್ನೊಂದು ಪ್ರಕೃತಿಯಿದೆ. ಅದು ಇದನ್ನು ಧರಿಸುವುದು. ಅದು ಪರಾ ಪ್ರಕೃತಿ.

ಅದು ಜೀವ ಎನ್ನಿಸಿಕೊಳ್ಳುವುದು. ಈ ಎರಡು ಪ್ರಕೃತಿಗಳೂ ಒಂದೇ! ಅಥವಾ ನಿನ್ನ ಅನುಕೂಲಕ್ಕೆ ಅವು ಬೇರೆ ಬೇರೆ ಎಂದುಕೊ. ಅಂತೂ ಎರಡೂ ನನ್ನವೇ! ಎಂದು ತಿಳಿದುಕೊ. ಅಷ್ಟೇ ಅಲ್ಲ: "ಮಯಾಧ್ಯಕ್ಷೇಣ ಪ್ರಕೃತಿ ಸೂಯತೇ ಸಚರಾಚರಂ":—ನಾನು ಅಧ್ಯಕ್ಷನಾಗಲು, ಈ ಪ್ರಕೃತಿಯು ಚರಾಚರವನ್ನೆಲ್ಲ ಹೆರುವುದು. "ಅಹಂ ಬೀಜಪ್ರದಃ ಪಿತಾ." ಇದೆಲ್ಲಕ್ಕೂ ಬೀಜವನ್ನು ಕೊಡುವ ತಂದೆಯು ನಾನು. ಎಂದ.

ಇನ್ನು ಕೊನೆಯದಾಗಿ ಆತ್ಮಮಾಯಯಾ—ಎಂಬ ಶಬ್ದ. ಮಾಯಾ ಎಂಬ ಶಬ್ದವನ್ನು ಸ್ವಾಮಿಯು ಗೀತೆಯಲ್ಲಿ ಮೂರು ನಾಲ್ಕು ಕಡೆಯಲ್ಲಿ ಉಪಯೋಗಿಸಿದ್ದಾನೆ. ಅಲ್ಲೆಲ್ಲಾ ಮುಚ್ಚುಮರೆ, ಎಂಬ ಅರ್ಥವಿದೆ. "ದೈವೀಹ್ಯೇಷಾ ಗುಣಮಯೀ ಮಮ ಮಾಯಾ ದುರತ್ಯಯಾ" ಎಂಬುದೊಂದು ಕಡೆ. ಅಲ್ಲಿ ನೋಡಿ. ಅರ್ಜುನ, ಮಮ ಮಾಯಾ ದುರತ್ಯಯಾ—ನನ್ನ ಮಾಯೆಯನ್ನು ಯಾರೂ ದಾಟಲಾರರು. ಏಕೆ ಎನ್ನುವೆಯಾ? ಅದು ದೈವೀ! ನೀನು ಮಾನವ. ನಿನಗಿಂತ ಮಾಯೆ ಮೇಲಿನ ಮಟ್ಟದ್ದು, ಈ ಲೋಕದಲ್ಲಿ ದೈವ, ಮಾನವ, ತಿರ್ಯಕ್, ಎಂದು ಸೃಷ್ಟಿಯು ಮೂರು ವಿಧ. ಒಂದಕ್ಕಿಂತ ಒಂದು ಹೆಚ್ಚು. ಕೆಳಗಿನದು ಮೇಲಿನದನ್ನು ಮೀರಲಾರದು: ಅದರಂಕೆಗೆ ತಾನು ಒಳಪಟ್ಟಿರಬೇಕು. ಇದು ಸೃಷ್ಟಿಯ ನಿಯಮ. ಅದರ ಸ್ವರೂಪವು ಏನು ಬಲ್ಲೆಯಾ? ಅದು ಗುಣಮಯೀ. ಸತ್ತ್ವ ರಜಸ್ಸು ತಮಸ್ಸು ಎಂಬ ಮೂರು ಗುಣಗಳಾಗಿ ತೋರುವುದೇ ಅದರ ಸ್ವರೂಪ. ಹಾಗಾದರೆ ಅದನ್ನು ದಾಟುವಂತಿಲ್ಲವೇ? ದಾಟಲಾಗುವುದಿಲ್ಲದೇ? ಎಂದರೆ, ಸ್ವಾಮಿಯು ಹೇಳಿದ. "ಉಂಟು. ಹೆದರಬೇಡ. ಅರ್ಜುನ, ಮಾಮೇವ ಯೇ ಪ್ರಪದ್ಯಂತೇ ಮಾಯಾಮೇತಾಂ ತರಂತಿ ತೇ॥—ನನ್ನನ್ನು ಆಶ್ರಯಿಸಿದವರು ಈ ಮಾಯೆಯನ್ನು ದಾಟಿಯೇ ದಾಟುವರು" ಎಂದು.

ಇನ್ನೊಂದು ಕಡೆ 'ಮಾಯಯಾಪಹೃತಜ್ಞಾನಾ' ಎಂದ. ಹುಟ್ಟಿದ ಜಂತುಗಳೆಲ್ಲ ಹುಟ್ಟುತ್ತಿದ್ದ ಹಾಗೆಯೇ ರಾಗದ್ವೇಷಗಳಿಂದ

ಮೋಹಗೊಂಡೇ ಹುಟ್ಟುವರು. ಈ ಮೋಹವೇ ಅಜ್ಞಾನವು. "ಅಜ್ಞಾನೇನಾವೃತಂ ಜ್ಞಾನಂ ತೇನ ಮುಹ್ಯಂತಿ ಜಂತವಃ"—ಅಜ್ಞಾನವು ಜ್ಞಾನವನ್ನು ಮುಚ್ಚಿರುವುದು. ಅದರಿಂದ ಜಂತುಗಳು ಮೋಹಗೊಳ್ಳುವರು. ಅವರು ಅಬುದ್ಧಿಗಳು. "ಅವ್ಯಕ್ತಂ ವ್ಯಕ್ತಿಮಾಪನ್ನಂ ಮಾಂ ಮನ್ಯಂತೇ ಪರಂಭಾವಮಜಾನಂತಃ ಮಮಾವ್ಯಯಮನುತ್ತಮಂ ‖"—ನನ್ನ ಅವ್ಯಯವೂ ಅನುತ್ತಮವೂ ಆದ ಪರಮಭಾವವನ್ನರಿಯದವರು ವ್ಯಕ್ತಿಯಲ್ಲದ ನನ್ನನ್ನು ವ್ಯಕ್ತಿಯೆಂದುಕೊಳ್ಳುವರು. ಏಕೆ ಎನ್ನುವೆಯಾ? "ನಾಹಂ ಪ್ರಕಾಶಸ್ಸರ್ವಸ್ಯ ಯೋಗಮಾಯಾಸಮಾವೃತಃ"—ನನ್ನನ್ನು ಒಂದು ಯೋಗಮಾಯೆಯು ಬಳಸಿದೆ. ಅದನ್ನು ಭೇದಿಸಿಕೊಂಡು ನನ್ನ ಬಳಿಗೆ ಬರುವುದು ಮೂಢರಿಗೆ ಸಾಧ್ಯವಿಲ್ಲ, ಅರ್ಜುನ. ಎಂದ ಆ ಸ್ವಾಮಿ.

ಹೀಗೆ ನಮ್ಮ ಸುತ್ತಲೂ ಇದ್ದರೂ, ಅಭಿತೋ ಬ್ರಹ್ಮ ನಿರ್ವಾಣಂ—ಬ್ರಹ್ಮಾನಂದವು ನಮ್ಮ ಒಳಗೆ ಹೊರಗೆ ಎಲ್ಲಿ ಇದ್ದರೂ, ಅದನ್ನು ತಿಳಿಯದೆ ಇರುವುದೇ ಮಾಯಯಾಪಹೃತಜ್ಞಾನವಾಗಿರುವಿಕೆ. ಅದು ತಪ್ಪಬೇಕಾದರೆ "ಋಷಯಃ ಕ್ಷೀಣಕಲ್ಮಷಾಃ" ಆಗಬೇಕು. ದಿವ್ಯದರ್ಶನವುಳ್ಳವನು ಋಷಿ, ಅಂತಃಕರಣದಲ್ಲಿ ತುಂಬಿರುವ ಕತ್ತಲೆ, ದೋಷ, ಕಲ್ಮಷ, ಪಾಪ—ಗೀತೆಯಲ್ಲಿ ಪಾಪವೆಂದರೆ ಅಪೂರ್ಣತೆ: ಪುಣ್ಯೋಗಂಧಃ ಪೃಥಿವ್ಯಾಂ ಮೊದಲಾದ ಕಡೆ ನೋಡಿ.—ಅದು ಕಳೆಯಬೇಕು. ಮುಂದೆ ಹನ್ನೊಂದನೆಯ ಅಧ್ಯಾಯ ನೋಡಿ. ಅರ್ಜುನ ದಿವ್ಯಚಕ್ಷುಸ್ಸು ಪಡೆದು ಋಷಿಯಾಗುತ್ತಾನೆ.

ಇದಿಷ್ಟು ಅರ್ಥವನ್ನೂ ಮನಸ್ಸಿನಲ್ಲಿಟ್ಟುಕೊಂಡು "ಅಜೋಽಪಿ ಸನ್ನವ್ಯಯಾತ್ಮಾ ಭೂತಾನಾಮೀಶ್ವರೋಽಪಿಸನ್। ಪ್ರಕೃತಿಂ ಸ್ವಾಮಧಿಷ್ಠಾಯ ಸಂಭವಾಮ್ಯಾತ್ಮಮಾಯಯಾ ‖"—ಎಂಬ ಶ್ಲೋಕವನ್ನು ಅನುಸಂಧಾನ ಮಾಡೋಣ. ಆತ್ಮನು ಅಜನು: ಜನ್ಮಾದಿ ವಿಕಾರಗಳನ್ನು ಪಡೆದವನಲ್ಲ: ಅವ್ಯಯಾತ್ಮಾ ಒಂದು ವೇಳೆ ಜನ್ಮಾದಿಗಳನ್ನು ಪಡೆದರೂ ಆ ಜನ್ಮಾದಿಗಳಿಂದ ಆಗುವ ವಿಕಾರಗಳು ಅವನಿಗಿಲ್ಲ.

ಭೂತಾನಾಮೀಶ್ವರೋಽಪಿ ಸನ್: ಆತನು ಎಲ್ಲದಕ್ಕೂ ಈಶ್ವರನಾದುದರಿಂದ ಕಾಲ, ದೇಶ, ವರ್ತಮಾನಗಳೂ ಆತನಿಗೆ ಅಧೀನವಾದ್ದರಿಂದ, ಕಾಲದೇಶಗಳಿಗೆ ಅಧೀನವಾದ ಜಗತ್ತಿನಲ್ಲಿ ಒಂದು ಕಾರ್ಯವನ್ನು ಮಾಡಬೇಕು ಎಂಬ ನಿಯಮವೂ ಇಲ್ಲ: ಆದರೂ ಬರುವನು. ಹೇಗೆ ಎಂದರೆ, ಪ್ರಕೃತಿಂ ಸ್ವಾಂ ಅವಷ್ಟಭ್ಯ—ತನ್ನ ಪ್ರಕೃತಿಯನ್ನು ಅವಲಂಬಿಸಿ, ಎಂದರೇನು? ಪ್ರಕೃತಿಗೆ ಒಳಗಾಗಿ. ದೊಡ್ಡದು ಚಿಕ್ಕದಾಗುವುದು ಹೇಗೆ? ಪ್ರಕೃತಿಯ ಆಚೆಯದು ಪ್ರಕೃತಿಯ ಒಳಕ್ಕೆ ಬರುವುದು ಹೇಗೆ? ಅವ್ಯಕ್ತವಾದುದು ವ್ಯಕ್ತಿಯಾದುದು ಹೇಗೆ? ಅಜನಿಗೆ ಸಂಭವವು ಜನ್ಮವು ಹೇಗೆ ಎಂದರೆ? ಅದೊಂದು ಗುಟ್ಟು. ಅದೇ ಆತ್ಮಮಾಯೆ ಅಥವಾ ಯೋಗಮಾಯೆ. ಅದನ್ನು ಮೂಢಾನಾಭಿಜಾನಂತಿ—ಮೂಢರು ಅರಿಯರು. ಹಾಗೆಂದರೆ ಯಾರು ಬಲ್ಲರು? ಅಮೂಢರು ಬಲ್ಲರು: ಆ ಅಮೂಢರು ಯಾರು? ಹದಿನೈದನೆಯ ಅಧ್ಯಾಯದಲ್ಲಿ ಅದನ್ನು ಹೇಳಿದ. ಪುರುಷೋತ್ತಮನನ್ನು ಕುರಿತು ಹೇಳುವ ಆ ಅಧ್ಯಾಯದಲ್ಲಿ ತಾನೇ ಅದನ್ನು ಹೇಳಬೇಕು? "ನಿರ್ಮಾನಮೋಹಾಃ ಜಿತಸಂಗದೋಷಾಃ" ಇತ್ಯಾದಿಯಾಗಿ ಅಮೂಢರನ್ನು ಅಲ್ಲಿ ವರ್ಣಿಸಿದ್ದಾನೆ. ಅಲ್ಲಿಗೆ ಬರೋಣ. ಸದ್ಯದಲ್ಲಿ ಈ ಸಂಭವ, ಈ ಜನ್ಮ, ಇದನ್ನು ಮುಗಿಸೋಣ.

ಲೋಕದಲ್ಲಿ ಮಿಕ್ಕ ಪ್ರಾಣಿಗಳೆಲ್ಲ, ದೇವಮಾನವಾದಿಗಳೆಲ್ಲ, ಪ್ರಕೃತಿಗೆ ವಶರಾಗಿ ಹುಟ್ಟಿದರೆ ಸ್ವಾಮಿಯು ಮಾತ್ರ ಪ್ರಕೃತಿಗೆ ನಾಥನಾಗಿ ಹುಟ್ಟುತ್ತಾನೆ. ಕಳ್ಳನ ಕಡ್ಡಿಯೆಂದು ಒಂದುಂಟಂತೆ! ಅದನ್ನು ಪ್ರವಾಹದಲ್ಲಿ ಹಾಕಿದರೆ, ಮಿಕ್ಕ ಕಡ್ಡಿಗಳೆಲ್ಲ ಪ್ರವಾಹದಲ್ಲಿ ಕೊಚ್ಚಿ ಹೋದರೆ, ಕಳ್ಳನ ಕಡ್ಡಿಯು ಪ್ರವಾಹಕ್ಕೆದುರಾಗಿ ಹೋಗುವುದಂತೆ! ಅದರ ಪ್ರಭಾವವೇನು ಬಲ್ಲಿರಾ? ಸರಪಣಿಗಳಿಂದ ಒಬ್ಬನನ್ನು ಕಟ್ಟಿ ಕೆಳಕ್ಕುರುಳಿಸಿದರೆ, ಆ ಕಳ್ಳನ ಕಡ್ಡಿಯನ್ನು ಮುಟ್ಟಿಸಿದರೆ, ಆ ಕಟ್ಟು ಬಿಚ್ಚಿ ಹೋಗುವುದಂತೆ! ಹಾಗೆ. ಇತರರು ಮಿಕ್ಕಕಡ್ಡಿಗಳಾದರೆ, ಸ್ವಾಮಿಯು ಕಳ್ಳನ ಕಡ್ಡಿಯಾಗಿ ಹುಟ್ಟುತ್ತಾನೆ. ಇದು ಆತನ ಜನ್ಮರಹಸ್ಯ.

ಇನ್ನು ಕರ್ಮ ರಹಸ್ಯವನ್ನು ನೋಡೋಣ. "ಪರಿತ್ರಾಣಾಯ ಸಾಧೂನಾಂ ವಿನಾಶಾಯಚ ದುಷ್ಕೃತಾಂ। ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ!"—ನಾನು ಯುಗ ಯುಗದಲ್ಲಿಯೂ ಹುಟ್ಟುವೆನು. ಮಿಕ್ಕವರೆಲ್ಲರೂ ತಮ್ಮ ತಮ್ಮ ಹಿಂದಿನ ಜನ್ಮಗಳ ಪಾಪಪುಣ್ಯಗಳ ಫಲವನ್ನು ಅನುಭವಿಸುವುದಕ್ಕೆ ಹುಟ್ಟುವರು: ನನಗೆ ಅಂತಹ ಸಂಚಿತ ಪ್ರಾರಬ್ಧಗಳು ಯಾವುದೂ ಇಲ್ಲವಾದ್ದರಿಂದ, ನಾನು ಹುಟ್ಟುವುದು ಅದಕ್ಕಲ್ಲ: ಧರ್ಮ ಸಂಸ್ಥಾಪನಾರ್ಥಾಯ—ಧರ್ಮವನ್ನು ಸಂಸ್ಥಾಪನಮಾಡುವುದಕ್ಕೆ. ಆ ಧರ್ಮಸಂಸ್ಥಾಪನವೆಂದರೇನು? ಎಂದರೆ, ಸಾಧುಪರಿತ್ರಾಣ, ದುಷ್ಟ ವಿನಾಶನ: ಸಾಧುಗಳು ಎಲ್ಲಿ ಅಂಜಿ, ಬೆದರಿ, ಹೆದರಿ, ನಡೆಯಬೇಕಾಗಿರುತ್ತದೆಯೋ, ಎಲ್ಲಿ ದುಷ್ಟರು ತಲೆಯೆತ್ತಿಕೊಂಡು ತಿರುಗುವರೋ, ಅದು ಅಧರ್ಮ ಸ್ಥಾನ. ಅದು ತಪ್ಪಬೇಕು. ಸಾಧುಗಳು ತಲೆಯೆತ್ತಿಕೊಂಡು ತಿರುಗುವಂತಾಗಬೇಕು: ದುಷ್ಟರು ಹೆದರಿ ಅಡಗುವಂತಾಗಬೇಕು. ಅದು ಧರ್ಮ. ಆ ಕಾರ್ಯವನ್ನು ಸಜ್ಜನರೆಲ್ಲರೂ ಮಾಡುತ್ತಾರೆ. ಆದರೆ ಅದಕ್ಕೂ ಸ್ವಾಮಿಯು ಮಾಡುವುದಕ್ಕೂ ವ್ಯತ್ಯಾಸವುಂಟು. ನಮಗೆ ಬಾಯಾರಿಕೆಯಾಗುತ್ತದೆ: ನೀರು ಕುಡಿದು ತೃಪ್ತರಾಗುತ್ತೇವೆ. ನಮ್ಮ ಕೈತೋಟದಲ್ಲಿ ಎರಡು ಗಿಡ ಹಾಕಿಕೊಂಡಿರುತ್ತೇವೆ. ಅದಕ್ಕೆ ಎರಡು ಕೊಡ ನೀರು ಹಾಕುತ್ತೇವೆ. ನಾವು ನೀರು ಕುಡಿದರೆ, ನಮ್ಮ ಎರಡು ಗಿಡಕ್ಕೆ ನೀರು ಹಾಕಿದರೆ, ನಮ್ಮ ಊರಿಗೆಲ್ಲಾ ತೃಪ್ತಿಯಾಯಿತೆ? ಇಲ್ಲ. ಮಳೆಯು ಬಂದರೆ? ಆ ದೇಶಕ್ಕೆಲ್ಲಾ ತೃಪ್ತಿಯಾಗುವುದು ಮಾತ್ರವಲ್ಲ: ನೀರು ಯಥೇಚ್ಛವಾಯಿತು. ಆ ವರುಷದ ಅನ್ನ ಸಿದ್ಧವಾಯಿತು. ಹಾಗೆ ವ್ಯಕ್ತಿ ವ್ಯಕ್ತಿಯೂ ತಾವೊಬ್ಬೊಬ್ಬರಾಗಿ ಮಾಡುವ ಧರ್ಮ ಕರ್ಮಗಳಿಂದ ಅವರವರಿಗೆ ತೃಪ್ತಿಯಾಗುವುದರ ಜೊತೆಗೆ ಸುತ್ತಮುತ್ತಲಿಗೂ ಅಷ್ಟು ಸಣ್ಣ ತೃಪ್ತಿಯಾಗಬಹುದು. ಆದರೆ ಪರಮೇಶ್ವರನು ಬಂದು ಧರ್ಮ ಸಂಸ್ಥಾಪನಮಾಡಿದರೆ ಆಗುವ ಉಪಕಾರ ಬೇರೆ!

ಪರಮೇಶ್ವರನು ಸರ್ವಶಕ್ತನಾಗಿರಲು ಇದ್ದೆಡೆಯಿಂದಲೇ ಧರ್ಮಸಂಸ್ಥಾಪನವಾಗಲಿ ಎಂದರಾಗುವುದಿಲ್ಲವೆ ? ಏಕೆ ಅವತಾರ ಮಾಡಬೇಕು ? ಎಂಬುದೊಂದು ಪ್ರಜ್ಞಾವಾದ. ಪ್ರಜ್ಞಾವಾದಿಗಳಿಗೆಲ್ಲ ಉತ್ತರಕೊಡುವುದು ಸಾಧ್ಯವಿಲ್ಲ. ಹಾಗೆಂದು ಸುಮ್ಮನಿರಲೂ ಸಾಧ್ಯ ವಿಲ್ಲ. ಆದರಿಂದ ಒಂದು ಮಾತು ಹೇಳಿ ಮುಂದೆ ಹೋಗೋಣ. ಪ್ರಜ್ಞಾವಾದದ ಆವಿರ್ಭಾವ ಜ್ಞಾನಾಜ್ಞಾನಗಳ ಸಂಧಿಯಲ್ಲಿ ; ಸಂಶ ಯದಲ್ಲಿ. ಆ ಸಂಶಯವು ಹೃದಯಗ್ರಂಥಿಯಿರುವವರೆಗೂ ಬಿಟ್ಟುದಲ್ಲ. ಹೃದಯಗ್ರಂಥಿಯೆಂದರೆ ಪಿಂಡಗ್ರಹ: ಅಥವಾ ಈ ದೇಹ, ಈ ಸಂಪೂತ, ಈ ಕ್ಷೇತ್ರ, ತಾನು ಎಂಬ ನಂಬಿಕೆ. ಅದು ತೀರುವ ವರೆಗೂ ಪ್ರಜ್ಞಾವಾದ ಬಿಟ್ಟುದಲ್ಲ. ಆದರಿಂದಲೇ ಎರಡನೆಯ ಅಧ್ಯಾಯದಲ್ಲಿಯೇ ಸ್ವಾಮಿಯು ಅರ್ಜುನನನ್ನು ಪ್ರಜ್ಞಾವಾದಾಂಶ್ಚ ಭಾಷಸೇ ಎಂದು ಗದರಿಸಿಕೊಂಡುದು.

ಈಗ ಬಂದಿರುವ ಈ ವಾದಕ್ಕೆ ಸಮಾಧಾನವಿಷ್ಟು. ಮಳೆಯ ಮೋಡಗಳು ಮೇಲೆ ಆಡುತ್ತಲೇ ಇರುತ್ತವೆ. ಭೂಗರ್ಭದಲ್ಲಿ ಬೇಕಾ ದಷ್ಟು ನೀರು ಇದ್ದೇಇದೆ. ಆದರೂ ಲೋಕದಲ್ಲಿ ಮಳೆಯಿಲ್ಲದೆ ಪೈರು ಬೆಳೆಯುವುದಿಲ್ಲ. ಹಾಗೆಯೇ ಈಶ್ವರನು ಭೂತಗಳ ಅಂತರಂಗದಲ್ಲಿ ಬಹಿರಂಗದಲ್ಲಿ ಇದ್ದರೂ ಒಮ್ಮೊಮ್ಮೆ ಪ್ರಕೃತಿಯಲ್ಲಿ ಆತನ ತೇಜಸ್ಸು ಹೆಚ್ಚಾಗಿ ಬೇಕಾಗಿಬರುತ್ತದೆ. ಮನೆತುಂಬ ಬೆಳಕಿದ್ದರೂ, ಬೀದಿಯ ತುಂಬ ಬೆಳಕಿದ್ದರೂ, ರಾತ್ರಿಯ ಕತ್ತಲು ತಪ್ಪುವುದಿಲ್ಲ ; ತಪ್ಪಬೇಕಾ ದರೆ, ಸೂರ್ಯೋದಯ ಚಂದ್ರೋದಯಗಳಲ್ಲಿ ಒಂದಾಗಬೇಕು. ಹಾಗೆ ಅವತಾರ !

ಇನ್ನು ಮುಂದಕ್ಕೆ ಹೋಗೋಣ. ಹೀಗೆ ಅನನ್ಯ ಸಾಧಾರಣ ವಾದ ಕರ್ಮ ಧರ್ಮಸಂಸ್ಥಾಪನ. ಅದನ್ನು ಮಾಡುವುದಕ್ಕೆ ಅವ ತಾರ. ಇದು ಜನ್ಮಕರ್ಮಚ ಮೇ ದಿವ್ಯಂ. ಅದನ್ನು ಇನ್ನೂ ಯಾರೂ ತಿಳಿಯಲಾರರು. ಆದರಿಂದ ಸ್ವಾಮಿಯೇ ಹೇಳಬೇಕಾಯಿತು. ಅದನ್ನು ಎಲ್ಲರೂ ತಿಳಿಯಿರಿ ಎಂದ. ತಿಳಿದರೇನಾಗುವುದು ಎಂದರೆ,

ಯ ಏವಂವೇತ್ತಿ ತತ್ತ್ವತಃ—ಯಾರಾದರೂ ಇದನ್ನು ಸರಹಸ್ಯವಾಗಿ ತಿಳಿದುದೇ ಆದರೆ, ದೇಹಂ ತ್ಯಕ್ತ್ವಾ ಮಾಮೇತಿ—ದೇಹಾಂತದಲ್ಲಿ ನನ್ನನ್ನು ಪಡೆಯುವನು. ಮಾಮೇವೈತಿ-ನನ್ನನ್ನೇ ಹೊಂದುವನು. ಎಂದು ಆ ಜ್ಞಾನದ ಪ್ರಯೋಜನವನ್ನೂ ಹೇಳಿದ. ಗೀತೆಯಲ್ಲಿ ಅಲ್ಲಲ್ಲಿ ಈ ಮಾತು ಹೇಳಿದ್ದಾನೆ ಸ್ವಾಮಿ. "ನನ್ನನ್ನು ಪಡೆಯುವುದೇ ಜೀವನದ ಗುರಿ. ಮಮ ವರ್ತ್ಮಾನುವರ್ತಂತೇ ಮನುಷ್ಯಾಃ ಪಾರ್ಥ ಸರ್ವಶಃ—ಲೋಕದಲ್ಲಿರುವವರೆಲ್ಲಾ ಒಂದಲ್ಲ ಒಂದು ವಿಧದಲ್ಲಿ ನನ್ನ ಹಾದಿ ಹಿಡಿವರೇ ! ಅರ್ಜುನ." ಎಂದ. ಅಷ್ಟೇ ಅಲ್ಲ. "ಯೋ ಯೋ ಯಾಂಯಾಂ ತನುಂ ಭಕ್ತಃ ಶ್ರದ್ಧಯಾ ಅರ್ಚಿತು ಮಿಚ್ಛತಿ। ತಸ್ಯ ತಸ್ಯಾಚಲಾಂ ಶ್ರದ್ಧಾಂತಾಮೇವ ವಿದಧಾಮ್ಯಹಂ॥"—ಯಾರು ಯಾರು ಯಾವ ರೂಪದಲ್ಲಿ ನನ್ನನ್ನು ಅರ್ಚಿಸಬೇಕೆಂದರೆ ಅವರವರಿಗೆ ಅದದೇ ರೂಪದಲ್ಲಿ ಅಚಲವಾದ ಶ್ರದ್ಧೆಯು ಹುಟ್ಟುವಂತೆ ಮಾಡುವೆನು" ಎಂದ. ಈ ಉದಾರ ಭಾವವು ಇನ್ನು ಯಾವ ಗುರುವಿನಲ್ಲೂ ಇಲ್ಲ : ಇನ್ನು ಯಾವ ಶಾಸ್ತ್ರದಲ್ಲೂ ಇಲ್ಲ.

ಒಂದು ಕಥೆ. ತೆಂಗಿನ ತೋಟದವರು: ಅಡಕೆಯ ತೋಟದವರು ಎಂದು ಎರಡು ಸಂಪ್ರದಾಯಗಳಂತೆ, ಒಬ್ಬರು ಯಾವ ಕೆಲಸ ಯಾರು ಮಾಡುತ್ತಿದ್ದರೆ ಅದನ್ನೇ ಚೆನ್ನಾಗಿ ಮಾಡು ಎನ್ನುವವರು. ಇನ್ನೊಬ್ಬರು ಯಾವ ಕೆಲಸ ಮಾಡುತ್ತಿದ್ದರೂ ಅದನ್ನು ಬಿಟ್ಟು ತಾವು ಹೇಳಿದುದನ್ನು ಮಾಡು ಎನ್ನುವವರು. ಮಿಕ್ಕೆಲ್ಲ ಗುರುಗಳೂ ಶಾಸ್ತ್ರಗಳೂ ಅಡಕೆಯ ತೋಟದವರು. ಎಲ್ಲರೂ ಯಾರೇ ಆಗಲಿ "ತಾವು ಹೇಳಿದಂತೆಯೇ ಮಾಡಬೇಕು. ಸ್ವರ್ಗದ್ವಾರದ ಬೀಗದ ಕೈ ತಮ್ಮ ಕೈಯಲ್ಲಿಯೇ ಇರುವುದು" ಎನ್ನುವವರು. ಗೀತಾಚಾರ್ಯ ಹಾಗಲ್ಲ: ತೆಂಗಿನ ತೋಟದವನು ಆತ. ಅವರವರಿಗೆ ತೋರಿದ ಕೆಲಸ ಅವರವರು ಮಾಡಲಿ ಎನ್ನುತ್ತಾನೆ. "ಎಲ್ಲರಿಗೂ ಪ್ರೇರಕ ನಾನು : ಎಲ್ಲರಿಂದಲೂ ಕೆಲಸಮಾಡಿಸುವ ಪ್ರಕೃತಿಯು ನನ್ನದು." ಎನ್ನುವವನಿಗೆ ಒಪ್ಪುವ

ಮಾತು ಅದು. ಅದರಿಂದಲೇ ಗೀತೆಯಂತಹ ಶಾಸ್ತ್ರವಿಲ್ಲ: ಗೀತಾ ಚಾರ್ಯನಂತಹ ಗುರುವಿಲ್ಲ.

ಇನ್ನು ಗೀತೆಯ ವಿಚಾರವಾಗಿ ಅಷ್ಟು ಹೇಳೋಣ. ನಮ್ಮವರು "ಗೀತಾ ಸುಗೀತಾ ಕರ್ತವ್ಯಾ ಕಿಮನ್ಯೈಶ್ಶಾಸ್ತ್ರ ವಿಸ್ತರೈಃ॥"–ಮಾಡು ವುದಾದರೆ ಒಂದು ಗೀತೆಯ ಅಧ್ಯಯನ ಮಾಡಬೇಕು. ಮಿಕ್ಕ ಶಾಸ್ತ್ರ ಶಾಸ್ತ್ರಗಳನ್ನೆಲ್ಲ ಓದಿದರೇನು ಬಿಟ್ಟರೇನು ? ಸಕೃದ್ಗೀತಾಂಭಸಿ ಸ್ನಾನಂ ಸಂಸಾರ ಮಲಮೋಚನಂ॥—ಗೀತಾ ಪ್ರವಾಹದಲ್ಲಿ ಒಮ್ಮೆ ಮಡಿಯಾ ದರಾಯಿತು: ಸಂಸಾರದ ಕೊಳೆಯೆಲ್ಲ ಕಳೆಯುವುದು ಎಂದರು. ಅದೆಲ್ಲ ಗೀತೆಯನ್ನು ಒಪ್ಪಿದ ಭಕ್ತರ ಮಾತು. ಅದು ನಿಜ: ಸುಳ್ಳಲ್ಲ. ಆದರೆ ಮಾನವನ ಹೃದಯ ಅದಷ್ಟನ್ನು ಒಪ್ಪುವುದೇ ? ಮೂಗುದಾರ ವಿಲ್ಲದ ಹೋರಿಯ ಹಾಗೆ ಹಾರಾಡುತ್ತಿರುವುದೇ ಅದರ ಸ್ವಭಾವ. ಅದಕ್ಕೆ ವಿಚಾರದ ಮೂಗುದಾರ ದಳೆಯಬೇಕು. ಆಗ ಅದಕ್ಕೆ ಅದು ಒಗ್ಗುವುದು. ಅಲ್ಲದೆ ಶಾಸ್ತ್ರವೂ ವಿಚಾರಮಂತರೇಣ, ವಿಚಾರವಿಲ್ಲದೆ ಯಾವುದನ್ನೂ ಒಪ್ಪು ಎನ್ನುವುದಿಲ್ಲ. ಅದರಿಂದ ಇನ್ನೊಂದು ಮುಖ ವನ್ನೂ ನೋಡಬೇಕು.

ಆ ಮುಖವನ್ನೂ ಗೀತೆಯ ಉಪೋದ್ಘಾತದಲ್ಲಿ ಹೇಳಿದೆ: "ಸರ್ವೋಪನಿಷದೋಗಾವಃ ದೋಗ್ಧಾಗೋಪಾಲನಂದನಃ। ಪಾರ್ಥೋ ವತ್ಸಸ್ಸುಧೀರ್ಭೋಕ್ತಾ ದುಗ್ಧಂ ಗೀತಾಮೃತಂ ಮಹತ್"—ಉಪ ನಿಷತ್ತುಗಳೆಲ್ಲ ಹಸುಗಳು. ಆದರೆ ಎಂಥಾ ಹಸುಗಳು ? ನಮ್ಮಲ್ಲಿ ಹೊಗೆ ದನ ಎಂಬುದೊಂದು ಜಾತಿ ಇದೆ. ಅದು ಸಾಕಿದವರಿಗೆ ಹಸು, ಇತರರಿಗೆ ಹುಲಿ. ಅಂತಹ ಹಸುಗಳು. ಉಪನಿಷತ್ಸಂಪ್ರದಾಯ ಬಲ್ಲವರಿಗೆ ಅವು "ಹಸು ಸಾಧುವಾದ ಪ್ರಾಣಿ" ಇತರರಿಗೆ ಏನೂ ಅರ್ಥವಾಗುವುದಿಲ್ಲ. ಅದರ ರಹಸ್ಯವನ್ನರಿಯದೆ ಹರಟುವವರಿಗೆ ಯಾಜ್ಞವಲ್ಕ್ಯ ಶಾಕಲ್ಯಸಂವಾದದೊಂದು ಮಾತು ನೆನೆಪಿದ್ದರೆ ಒಳ್ಳೆ ಯದು. ಶಾಕಲ್ಯನು ಯಾಜ್ಞವಲ್ಕ್ಯನನ್ನು ಕುರಿತು ದೇವತಾರಹಸ್ಯ ಗಳನ್ನು ಕೇಳುತ್ತಾ ಬಂದ. ಕೊನೆಗೆ ಅವೆಲ್ಲಕ್ಕೂ ಉತ್ತರಕೊಟ್ಟು

ಯಾಜ್ಞವಲ್ಕ್ಯನು "ಆಯಿತು. ನಾನಿನ್ನು ಕೇಳುವೆನು. ತಂತ್ವೌಪನಿಷದಂ ಪುರುಷಂ ಪೃಚ್ಛಾಮಿ। ತಂಚೇನ್ಮೇ ನ ವಿವಕ್ಷ್ಯಸಿ ಮೂರ್ಧಾ ತೇ ವಿಪತಿಷ್ಯತಿ"–ನಾನು ನಿನ್ನನ್ನು ಆ ಉಪನಿಷತ್ಪುರುಷನನ್ನು ಕುರಿತು ಕೇಳುವೆನು : ನೀನು ನನಗೆ ಅವನನ್ನು ಕುರಿತು ಹೇಳದಿದ್ದರೆ ನಿನ್ನ ತಲೆಯು ಉರುಳುವುದು" ಎಂದನು. ಶಾಕಲ್ಯನು "ಅವನನ್ನು ನಾನರಿಯೆ" ಎಂದನು. ಅವನ ತಲೆಯು ಕೆಳಗುರುಳಿತು.

ಪ್ರಶ್ನೋಪನಿಷತ್ತಿನಲ್ಲಿ ಇನ್ನೊಂದು ಮಾತಿದೆ : "ಸಮೂಲೋವಾ ಏಷ ಪರಿಶುಷ್ಯತಿ ಯೋಽನೃತಮಭಿವದತಿ, ತಸ್ಮಾನ್ನಾರ್ಹಾಮಿ ಅನೃತಂ ವಕ್ತುಂ."–ಸುಳ್ಳು ಹೇಳುವವನು ಸಮೂಲವಾಗಿ ನಾಶವಾಗುವನು : ಅದರಿಂದ ನಾನು ಸುಳ್ಳುಹೇಳಬಾರದು." ಇನ್ನೊಂದೆಡೆ, ತೈತ್ತಿರೀಯ ಆರಣ್ಯಕದಲ್ಲಿ, "ನ ಅನಂತೇವಾಸಿನೇ ಪ್ರಬ್ರೂಯಾತ್, ನ ಅಸಂವತ್ಸರ ವಾಸಿನೇ, ನ ಅಪ್ರವಕ್ತ್ರೇ,"–ತನ್ನೊಡನೆ ವಾಸಮಾಡದವನಿಗೆ, ಒಂದು ವರ್ಷ ಬ್ರಹ್ಮಚರ್ಯ ಮಾಡದವನಿಗೆ, ಇತರರಿಗೆ ಹೇಳಲಾರದವನಿಗೆ ಹೇಳಬಾರದು." ಎಂದು ಹೇಳಲಾಗಿದೆ. ಅಷ್ಟೇ ಅಲ್ಲ : ಉಪನಿಷತ್ತು ಅರಿಯುವುದಕ್ಕೆ "ಯೇಯೇ ಉಪನಿಷದಿ ಧರ್ಮಾಸ್ತೇ ಮಯಿ ಸಂತು":–ಉಪನಿಷತ್ತಿನಲ್ಲಿ ಯೇನೇನು ಧರ್ಮಗಳೋ ಅವು ನನ್ನಲ್ಲಿ ಆಗಲಿ." ಆಗಬೇಕು. ಅದರಿಂದ ಉಪನಿಷತ್ತುಗಳ ಅರಿವಾಗುವುದು ಸುಲಭವಲ್ಲ.

ಇಂತಹ ಉಪನಿಷತ್ತುಗಳನ್ನೆಲ್ಲ ಗೋಪಾಲಕೃಷ್ಣನು ಪಾರ್ಥನನ್ನು ವತ್ಸನನ್ನು ಮಾಡಿಕೊಂಡು ಕರೆದಿಟ್ಟಿದ್ದಾನೆ. ಯಾರಿಗಾಗಿ ? "ಸುಧೀರ್ಭೋಕ್ತಾ"–ಸದ್ಬುದ್ಧಿಯುಳ್ಳವರಿಗಾಗಿ. ಯಾರು ಸದ್ಬುದ್ಧಿಗಳು ? ಎಂದರೆ ಕೃತಾರ್ಥರಾಗಬೇಕು ಎಂಬ ನಿಶ್ಚಯವುಳ್ಳವರು. ಕರೆದಿಟ್ಟಿರುವುದೇನು ? "ದುಗ್ಧಂ ಗೀತಾಮೃತಂ ಮಹತ್"—ಮಹತ್ತಾದ ಗೀತೆಯೆಂಬ ಅಮೃತ. ಯಾವುದನ್ನು ಸೇವಿಸಿದರೆ ಮರಣಧರ್ಮವುಳ್ಳ ಮಾನವನೂ ಅಮರನಾಗುವನೋ ಅದು. ಇದು ಗೀತೆ.

ಗೀತೆಯಲ್ಲಿ ಒಂದು ವಿಶೇಷ. ಪರಪಕ್ಷಗಳನ್ನು ಕುರಿತು ಏನೂ ಹೇಳಿಲ್ಲ. ಅಷ್ಟೇ ಅಲ್ಲ: ಬಹುಶಃ ವಿರೋಧ ಪಕ್ಷದವರನ್ನು ಕುರಿತು ಹೇಳಿದಾಗಲೂ ಅದೆಷ್ಟು ಮೃದು! "ವೇದವಾದರತಾಃ ಪಾರ್ಥ ನಾನ್ಯದಸ್ತೀತಿವಾದಿನಃ ಕಾಮಾತ್ಮಾನಃ ಸ್ವರ್ಗಪರಾಃ"–ವೇದವಾದಗಳಲ್ಲಿ ನಿರತರಾಗಿ, ಇನ್ನಿದಕ್ಕಿಂತ ಬೇರೆಯುಂಟೇ ಎನ್ನುತ್ತ, ಕಾಮಸಹಿತರಾಗಿ, ಸ್ವರ್ಗ ಬೇಕು ಎನ್ನುವವರು. ಅವರ ಮತದಲ್ಲಿ ಏನು ತಪ್ಪು ಎಂದರೆ ಜನ್ಮಕರ್ಮ ಫಲಪ್ರದಾ, ಕ್ರಿಯಾವಿಶೇಷ ಬಹುಲಾ—ಬಹು ಆಯಾಸಪಟ್ಟರೂ ಶಾಶ್ವತವಾದ ಗತಿಯನ್ನು ಕಾಣರು. ಎಲ್ಲದಕ್ಕಿಂತ ಹೆಚ್ಚಾಗಿ "ತ್ರೈಗುಣ್ಯ ವಿಷಯಾ ವೇದಾಃ ನಿಸ್ತ್ರೈಗುಣ್ಯೋ ಭವಾರ್ಜುನ." ವೇದಗಳು ಹೇಳುವುದೆಲ್ಲಾ ತ್ರಿಗುಣಗಳ ಒಳಗಿನದು: ನೀನು ಅದರಿಂದ ಆಚೆಗೆ ಹೋಗು. ಇನ್ನೊಂದು ಕಡೆ "ಅವಜಾನಂತಿ ಮಾಂ ಮೂಢಾಃ ಮಾನುಷೀಂ ತನುಮಾಶ್ರಿತಂ। ಪರಂಭಾವಮಜಾನಂತೋ ಮಮಭೂತಮಹೇಶ್ವರಂ ॥ ಮೋಘಾಶಾ ಮೋಘಕರ್ಮಾಣೋ ಮೋಘಜ್ಞಾನಾವಿಚೇತಸಃ। ರಾಕ್ಷಸೀಮಾಸುರೀಂ ಚೈವ ಪ್ರಕೃತಿಂ ಮೋಹಿನೀಂ ಶ್ರಿತಾಃ"—ಸರ್ವ ಪ್ರಾಣಿಗಳಿಗೂ ಈಶ್ವರನಾದ ನನ್ನ ಪರಮಭಾವ ಪೊಂದಿದೆಯೆಂಬುದನ್ನರಿಯದೆ, ಮಾನುಷ ದೇಹದಲ್ಲಿರುವ ನನ್ನನ್ನು ಮೂಢರು ಕಡೆಗಾಣಿಸುವರು. ಅವರು ವ್ಯರ್ಥವಾದ ಆಶೆ, ಕರ್ಮ, ಜ್ಞಾನಗಳುಳ್ಳ ಬುದ್ಧಿಹೀನರು. ಅವರು ರಾಕ್ಷಸೀ ಆಸುರೀ, ಮೋಹಿನೀ, ಆದ ಪ್ರಕೃತಿಯನ್ನು ಆಶ್ರಯಿಸಿದವರು.*

---

*ಇಲ್ಲಿಯೂ ನೋಡಿ ಮಾನುಷೀಂ ತನುಮಾಶ್ರಿತಂ ಮಾಂ. ತಾನು ಮಾನುಷ ದೇಹದಲ್ಲಿರುವವನಂತೆ—ಆದರೂ ಭೂತಮಹೇಶ್ವರವಾದ ಪರಮಭಾವ ಒಂದು ಇದೆಯಂತೆ. ಹೀಗೆ ತನ್ನ ಮೂಲಭಾವ ಬೇರೊಂದಿದೆ ಎಂದಾತನು ಅವತಾರಿಯಲ್ಲವೆ? ಇದೇ ಜಾತಿಯ ಮಾತು ಹದಿನೈದನೆಯ ಅಧ್ಯಾಯದಲ್ಲಿಯೂ ಬರುತ್ತದೆ. ಅಲ್ಲಿ ಯಸ್ಮಾತ್ಕ್ಷರಮತೀತೋಽಹಂ ಅಕ್ಷರಾದಪಿ ಚೋತ್ತಮಃ। ಅತೋಽಸ್ಮಿ ಲೋಕೇ ವೇದೇಚ ಪ್ರಥಿತಃ ಪುರುಷೋತ್ತಮಃ—ನಾನು ಕ್ಷರವನ್ನು ದಾಟಿದವನು: ಅಕ್ಷರಕ್ಕಿಂತ ಉತ್ತಮನು. ಅದರಿಂದ ಲೋಕದಲ್ಲಿಯೂ ವೇದದಲ್ಲಿಯೂ ಪುರುಷೋತ್ತಮನು ಎಂದು ಹೆಸರಾದವನು ಎನ್ನುತ್ತಾನೆ. ಈ ಭಾವವಿರುವವನು ಅವತಾರಿಯಲ್ಲವೇ?

ಪರವಾದಿಗಳನ್ನು ಕುರಿತು ಏನೂ ಹೇಳದಿರಲು ಇನ್ನೂ ಒಂದು ಕಾರಣವಿರಬೇಕು. ತಾನೇ ಹದಿನಾರನೆಯ ಅಧ್ಯಾಯದಲ್ಲಿ ಲೋಕವು ಹುಟ್ಟುವಾಗಲೇ ಎರಡು ಭಾಗಗಳಾಗಿ ಹುಟ್ಟಿದೆ. ದೈವಾಸುರ ಗಳೆಂಬ ಎರಡು ಭಾಗಗಳಲ್ಲಿ ದೈವವು ದೇವಾಭಿಮುಖ, ಅಸುರವು ದೇವವಿಮುಖ ಎಂದು ಹೇಳಿರುವುದರಿಂದ, ಇತರರ ವಿಚಾರವಾಗಿ ಹೇಳದೆಯೇ ಇರಲೂ ಸಾಧ್ಯ.

ಗೀತೆಯ ಮತ್ತೊಂದು ವಿಶೇಷವೆಂದರೆ, ಸಮನ್ವಯ. ಗೀತೆ ಯಲ್ಲಿ ಕರ್ಮಯೋಗ, ಜ್ಞಾನಯೋಗ, ಧ್ಯಾನಯೋಗ, ಸಂನ್ಯಾಸ ಯೋಗ, ಭಕ್ತಿಯೋಗ, ಎಂದು ನಾನಾಮುಖವಾದ ಸಾಧನಗಳನ್ನು ಹೇಳಿದೆ ಎನ್ನುವವರಿದ್ದಾರೆ. ಇದಕ್ಕೆ ಸಾಕ್ಷಿಯಾಗಿ "ಧ್ಯಾನೇನಾತ್ಮನಿ ಪಶ್ಯಂತಿ ಕೇಚಿದಾತ್ಮಾನ ಮಾತ್ಮನಾ। ಅನ್ಯೇ ಸಾಂಖ್ಯೇನ ಯೋಗೇನ ಕರ್ಮಯೋಗೇನ ಚಾಪರೇ॥ ಅನ್ಯೇತ್ವೇವಮಜಾನಂತಃ ಶ್ರುತ್ವಾನ್ಯೇಭ್ಯ ಉಪಾಸತೇ"–ಎಂಬ ಶ್ಲೋಕಗಳನ್ನು ಉದಾಹರಿಸುತ್ತಾರೆ. ಕೆಲವರು ಧ್ಯಾನದಿಂದ ಆತ್ಮನನ್ನು ಆತ್ಮನಲ್ಲಿ ಆತ್ಮನಿಂದ ಕಾಣುತ್ತಾರೆ. ಸಾಂಖ್ಯ ದಿಂದ ಕೆಲವರು, ಯೋಗದಿಂದ ಕೆಲವರು, ಕರ್ಮಯೋಗದಿಂದ ಕೆಲವರು (ಆತ್ಮ ದರ್ಶನಮಾಡುತ್ತಾರೆ) : ಇದನ್ನು ತಿಳಿಯದ ಕೆಲವರು ಇತರರಿಂದ ಶ್ರವಣಮಾಡಿ ಉಪಾಸನಮಾಡುತ್ತಾರೆ ಎಂದು ಹೇಳಿದೆ : ಆದರೆ, ಈ ಸಾಧನೆಗಳನ್ನು ಹೇಳುವುದಕ್ಕಿಂತ ಗೀತಾಚಾರ್ಯನು ಎಲ್ಲ ವನ್ನೂ ಸಮನ್ವಯ ಮಾಡಬೇಕೆಂಬ ಒಲವಿನವನು ಎನ್ನುವುದೇ ಚೆನ್ನ.

ಎರಡನೆಯ ಅಧ್ಯಾಯದಲ್ಲಿ "ಏಷಾ ತೇऽಭಿಹಿತಾ ಸಾಂಖ್ಯೇ ಬುದ್ಧಿಂ ಯೋಗೇತ್ವಿಮಾಂ ಶೃಣು" ಎಂದು ಹೇಳಿದ್ದಾನೆ. "ಇದು ವರೆಗೆ ಸಾಂಖ್ಯವನ್ನು ಕುರಿತು ಹೇಳಿದೆ : ಇನ್ನು ಯೋಗದ ಬುದ್ಧಿಯನ್ನು ಕೇಳು" ಎನ್ನುತ್ತಾನೆ. ಮತ್ತೆ ಮೂರನೆಯ ಅಧ್ಯಾಯದಲ್ಲಿ ಅರ್ಜುನನು ಕೇಳುತ್ತಾನೆ: "ಜ್ಯಾಯಸೀಚೇತ್ ಕರ್ಮಣಸ್ತೇ ಮತಾ ಬುದ್ಧಿರ್ಜ ನಾರ್ದನ"–ನೋಡಿದರೆ ನಿನ್ನ ಮತದಲ್ಲಿ ಕರ್ಮಕ್ಕಿಂತ ಬುದ್ಧಿಯೇ ಹೆಚ್ಚು ಎನ್ನುವಂತಿದೆ." ಅದಕ್ಕೆ ಉತ್ತರವಾಗಿ "ಲೋಕೇऽಸ್ಮಿನ್ದ್ವಿ

ವಿಧಾ ನಿಷ್ಠಾ ಪುರಾ ಪ್ರೋಕ್ತಾಮಯಾನಘ—ಹಿಂದೆ ನಾನು ದ್ವಿವಿಧ ವಾದ ನಿಷ್ಠೆಯನ್ನು ಹೇಳಿದ್ದೇನೆ.'' ಎನ್ನುತ್ತಾನೆ. ಮುಂದಕ್ಕೆ ಹೋಗಿ, " ಸಾಂಖ್ಯಯೋಗೌ ಪೃಥಗ್ಬಾಲಾಃ ಪ್ರವದಂತಿ ನ ಪಂಡಿತಾಃ। ಏಕಮ ಪ್ಯಾಸ್ಥಿತಸ್ಸಮ್ಯಗುಭಯೋರ್ವಿಂದತೇ ಫಲಂ॥ ಯತ್ಸಾಂಖ್ಯೈಃ ಪ್ರಾಪ್ಯತೇ ಸ್ಥಾನಂ ತದ್ಯೋಗೈರಪಿ ಗಮ್ಯತೇ॥ ಏಕಂ ಸಾಂಖ್ಯಂಚ ಯೋಗಂಚ ಯಃ ಪಶ್ಯತಿ ಸ ಪಶ್ಯತಿ''–ಅರಿಯದವರು ಸಾಂಖ್ಯ ಯೋಗ ಬೇರೆಬೇರೆ ಎನ್ನುವರು : ಅದನ್ನು ಪಂಡಿತರು ಒಪ್ಪುವುದಿಲ್ಲ. ಯಾವು ದಾದರೂ ಒಂದನ್ನು ಚೆನ್ನಾಗಿ ಹಿಡಿದರೆ ಎರಡರ ಫಲವೂ ಸಿಕ್ಕುವುದು. ಸಾಂಖ್ಯದಿಂದ ಲಭಿಸುವ ಗತಿಯು ಯೋಗದಿಂದಲೂ ಲಭಿಸುವುದು. ಅದರಿಂದ ಸಾಂಖ್ಯಯೋಗಗಳೆರಡೂ ಒಂದೇ ಎಂದವನೇ ಬಲ್ಲವನು.'' ಎನ್ನುತ್ತಾನೆ. ಅಲ್ಲದೆ, ಗೀತೆಯಲ್ಲಿ ಎರಡು ಘಟ್ಟಗಳು. ವಿಶ್ವರೂಪ ದರ್ಶನವಾಗುವವರೆಗೆ ಒಂದು ಘಟ್ಟ : ಅಲ್ಲಿಂದಾಚೆಗೆ ಇನ್ನೊಂದು ಘಟ್ಟ. ಕೆಲವರು ಹದಿನೆಂಟು ಅಧ್ಯಾಯಗಳನ್ನು ತತ್ತ್ವಮಸಿ ಎಂಬ ಮಹಾವಾಕ್ಯಕ್ಕೆ ಸಮನ್ವಯಮಾಡಿ ಆರಾರು ಅಧ್ಯಾಯಗಳು ಒಂದೊಂದು ಘಟ್ಟ ಎನ್ನುತ್ತಾರೆ. ಆದರೆ ನಮ್ಮಂಥವರಿಗೆ ಅದು ದೂರಾ ಕೃಷ್ಟ ಎನ್ನಿಸುತ್ತದೆ. ನಮ್ಮ ಬುದ್ಧಿಯು ಅದನ್ನು ಅರ್ಥಮಾಡಿಕೊಳ್ಳಲು ಇನ್ನೂ ಅಷ್ಟು ಬೆಳೆಯಬೇಕೋ ಏನೋ ? ಅದಿರಲಿ. ನಾವು ಎರಡು ಘಟ್ಟದವರು.

ಹತ್ತು ಅಧ್ಯಾಯಗಳನ್ನು ಕೇಳಿದ ಮೇಲೆ ಎಂದರೆ ಸ್ವಾಮಿಯು ತನ್ನ ವಿಭೂತಿಯನ್ನು ಹೇಳಿದ ಮೇಲೆ, ಅರ್ಜುನನು " ಮದನುಗ್ರಹಾಯ ಪರಮಂ ಗುಹ್ಯಮಧ್ಯಾತ್ಮಸಂಜ್ಞಿತಂ॥ ಯತ್ತ್ವ ಯೋಕ್ತಂ ವಚಸ್ತೇನ ಮೋಹೋಽಯಂವಿಗತೋ ಮಮ''–ನನ್ನನ್ನು ಅನುಗ್ರಹಿಸಲೆಂದು ಶ್ರೇಷ್ಠವೂ ರಹಸ್ಯವೂ ಆದ ಈ ಅಧ್ಯಾತ್ಮವನ್ನು ಹೇಳಿದೆಯಾಗಿ ನನ್ನ ಮೋಹವು ಕಳೆಯಿತು '' ಎನ್ನುತ್ತಾನೆ. ಮತ್ತು ಮುಂದಿನ ಏಳು ಅಧ್ಯಾಯಗಳನ್ನು ಕೇಳಿದ ಮೇಲೆ " ನಷ್ಟೋಮೋಹಃ ಸ್ಮೃತಿರ್ಲಬ್ಧಾ—ಮೋಹವು ಹೋಯಿತು : ಸ್ಮೃತಿಯು ಬಂತು '' ಎನ್ನು

ತ್ತಾನೆ. ಅದರಿಂದ ನಾವು ಎರಡು ಷಟ್ಕಗಳು ಎನ್ನುವುದಕ್ಕೆ ಗೀತೆಯಲ್ಲಿ ಆಧಾರವಿದೆ. ಅದರಿಂದ ನಾವೂ ಗೀತೋಪದೇಶವನ್ನು ಎರಡು ಷಟ್ಕಗಳಲ್ಲಿ ನೋಡೋಣ.

ಗೀತಾ ಸಂದೇಶ ಎನ್ನುವ ಮಾತು ಅಲ್ಲಲ್ಲಿ ಕೇಳಬರುತ್ತದೆ. ಆದರೆ ಗೀತೆಯು ನಮಗೆ ಕೊಡುವುದು ಸಂದೇಶವೊ ಉಪದೇಶವೋ ? ಸಂದೇಶವೇನಿದ್ದರೂ ಶುಭವಾದ ಒಂದೆರಡು ಮಾತು. ಸಂದೇಶದಲ್ಲಿ ಪ್ರಚೋದನವಿಲ್ಲ : ಇದರಂತೆಮಾಡಿ ಕೃತಾರ್ಥರಾಗಿ ಎಂಬ ಭಾವವಿಲ್ಲ : ಇದರಂತೆ ಮಾಡಿದರೆ ಕೃತಾರ್ಥರಾಗುವಿರಿ ಎಂಬ ಭರವಸೆಯನ್ನೂ ಕೊಡುವುದಿಲ್ಲ. ಅದರಿಂದ ಉಪದೇಶವೇ ಸರಿ ಎಂದು ನನಗೆ ತೋರುತ್ತದೆ. ನಾನಂತೂ ಗೀತೆಯು ನಮಗೆ ಕೊಡುವುದು ಉಪದೇಶ ಎನ್ನುವವನು.

ಇನ್ನು ಗೀತೋಪದೇಶದ ಕಡೆ ತಿರುಗೋಣ. ಎರಡನೆಯ ಅಧ್ಯಾಯದಲ್ಲಿ ಆರಂಭದಲ್ಲಿಯೇ ಒಂದು ಸೊಗಸಿದೆ. "ಏವಮುಕ್ತ್ವಾ ಹೃಷೀಕೇಶಂ ಗುಡಾಕೇಶಃ ಪರಂತಪ"—ಗುಡಾಕೇಶನು ಹೃಷಿಕೇಶನಿಗೆ ಹೀಗೆ ಹೇಳಿ ಎಂದಿದೆ. ಹೃಷಿಕೇಶ ಎಂದರೆ ಇಂದ್ರಿಯಗಳಿಗೆ ಒಡೆಯನಾದವನು. ಗುಡಾಕೇಶನೆಂದರೆ ನಿದ್ದೆಯನ್ನು ಗೆದ್ದವನು. ಗೀತೆಯನ್ನು ಹೇಳಿದವನು ಹೃಷಿಕೇಶ, ಕೇಳಿದವನು ಗುಡಾಕೇಶ. ಹಾಗಾದರೆ ಗೀತೆಯನ್ನು ಅರ್ಥಮಾಡಿಕೊಳ್ಳಲು ಜೀವನು ಗುಡಾಕೇಶನಾಗಿರಬೇಕೇನು ? ನಿದ್ದೆಯನ್ನು ಗೆದ್ದಿರಬೇಕೇನು ? ಅರ್ಥಾತ್ ಜಾಗ್ರತ್ಸ್ವಪ್ನ ಸುಷುಪ್ತಿಗಳ ವಿಚಾರವನ್ನು ಅರಿತಿರುವುದು ಮಾತ್ರವಲ್ಲ : ಅವುಗಳನ್ನು ಗೆದ್ದವನೂ ಆಗಿರಬೇಕೇನು ?

ಆಯಿತು, ಮುಂದೆ ಹೋಗೋಣ. ಮಹಾಶೋಕ ನಿಮಗ್ನನಾದ ಅರ್ಜುನನನ್ನು ಕಾರ್ಯಪರನಾಗುವಂತೆ ಮಾಡಿದುದು ಗೀತೆ. ಅರ್ಜುನನಿಗೆ "ಉಚ್ಛೋಷಣ ಮಿಂದ್ರಿಯಾಣಾಂ" ಆದ ಶೋಕ ಬಂದಿತ್ತು. ಆ ಶೋಕವು ಗೀತಾಶ್ರವಣದಿಂದ ಕಳೆಯಿತು. ಅಥವಾ ಅವನ ಮಾತಿನಲ್ಲಿ ಹೇಳಬೇಕೆಂದರೆ ಗೀತಾಶ್ರವಣದಿಂದ ಮೋಹ ಹೋಯಿತು : ಸ್ಮೃತಿ

ಬಂತು : ಅದರ ಫಲವಾಗಿ ಅವನು "ಕರಿಷ್ಯೇ ವಚನಂ ತವ" ನಿನ್ನ ಮಾತಿನಂತೆ ನಡೆಯುವೆನು ಎಂದ, ತವ ವಚನಂ ಎಂದರೇನು ? "ತಸ್ಮಾದ್ಯುಧ್ಯಸ್ವ ಭಾರತ, ಯುದ್ಧಸ್ವ ವಿಗತಜ್ವರಃ", ಎಂದು ಮುಂತಾಗಿ ಅರ್ಜುನನಿಂದ ಯುದ್ಧ ಮಾಡಿಸುವುದೇ ಸ್ವಾಮಿಯ ಉದ್ದೇಶ ! "ಅದೇ ಗೀತೆಯ ಉಪದೇಶ" ಎನ್ನುತ್ತಾರೆ. ನಾವು ಹಾಗೆನ್ನುವುದಿಲ್ಲ. ಅವನ ಪ್ರಕೃತಿಯು ಅವನಿಗೆ ಕ್ಷಾತ್ರಿಯ ವೃತ್ತಿಯನ್ನು ಕೊಟ್ಟಿದೆ. ಅವನ ಸ್ವಭಾವ ಕ್ಷಾತ್ರಿಯ. ಅದು ನಿಯತ. ಅದು ಅವನಿಗೆ ಸಹಜವಾದ ಕರ್ಮ. ಸ್ವಧರ್ಮ ಎಂದರೆ ಗುಣಕರ್ಮವಿಭಾಗಕ್ಕೆ ಅನುಗುಣವಾಗಿ ಇರುವ ಸ್ವಭಾವ—ಅದರಿಂದ ನಿಯತವಾದ ಕರ್ಮ : ಅದು ಶೌರ್ಯ, ತೇಜಸ್ಸು, ಧೃತಿ, ದಾಕ್ಷ್ಯ, ಯುದ್ಧ, ಅಪಲಾಯನ, ದಾನ, ಈಶ್ವರ ಭಾವ, ಎಂಬ ರೂಪವಾಗಿರುವುದು. ಅರ್ಜುನನು ಆ ಕ್ಷಾತ್ರಸ್ವಭಾವಕ್ಕನುಗುಣವಾಗಿ ವಿಹಿತಕರ್ಮವನ್ನು ಮಾಡಲು ಬಂದು ರಣರಂಗದಲ್ಲಿ ನಿಂತ. ಆಗ ಅವನಿಗೆ-ಮೋಹ, ವಿಸ್ಮೃತಿ ಬಂತು. "ಸಹಜಂ ಕರ್ಮ ಸದೋಷಮಪಿ ನ ತ್ಯಜೇತ್! ಸರ್ವಾರಂಭಾಹಿ ದೋಷೇಣ ಧೂಮೇನಾಗ್ನಿರಿವಾವೃತಾಃ"—ಎಂಬುದು ಮರೆತುಹೋಯಿತು. ಪ್ರಾಣಿಯು ತನ್ನ ಸ್ವಭಾವ-ಪ್ರಕೃತಿಗಳನ್ನು ಮೀರಲಾರ. ತಾನು ಒಂದು ಅಚ್ಚಿನಲ್ಲಿ, ಯೋನಿಯಲ್ಲಿ, ಬಿದ್ದಿದ್ದಾನೆ. ಅದು ತನ್ನ ಕರ್ಮವನ್ನು ಗೊತ್ತುಮಾಡಿದೆಯೆಂಬುದು ಮರೆತು ಹೋಯಿತು. ಅದು ವಿಸ್ಮೃತಿ. ಅದರಿಂದ, ತನ್ನ ತೇಜಸ್ಸನ್ನು ಕಳೆದುಕೊಂಡವನಂತೆ, ಯುದ್ಧವು ಪಾಪವೆನ್ನಿಸಿತು : ಮಾಡುವುದಿಲ್ಲ : ಶತ್ರುಗಳು ತನ್ನನ್ನು ಕೊಂದರೂ ಕೊಲ್ಲಲಿ ಎಂದ. ಅದು ಮೋಹ.

ಹೀಗೆ ಅರ್ಜುನನು ಕಾರ್ಯಪರನಾಗಲು ಮೋಹ, ವಿಸ್ಮೃತಿ, ಎರಡೂ ಅಡ್ಡಿಯಾದುವು. ಶ್ರೀಕೃಷ್ಣನು ಗೀತೆಯನ್ನು ಉಪದೇಶ ಮಾಡಿ ಆ ಮೋಹ ವಿಸ್ಮೃತಿಗಳನ್ನು ಕಳೆದನು. ಆಗ ಅರ್ಜುನನು ಕಾರ್ಯಪರನಾದನು. ಆ ಕಾರ್ಯವು ಏನು ಎಂಬುದು ನಮಗೆ ಮುಖ್ಯವಲ್ಲ. ಅದನ್ನು ಅವನವನ ಪ್ರಕೃತಿಯು ಗೊತ್ತುಮಾಡುವುದು. ಪ್ರಕೃತಿಸ್ತ್ವಾಂ ನಿಯೋಕ್ಷ್ಯತಿ. ಆ ನಿಯೋಗ, ವಿನಿಯೋಗ, ಅದು ಪ್ರಕೃತಿಯದು.

ಪ್ರಕೃತಿಯು ಮಾಡಿಸುವ ಕೆಲಸಕ್ಕೆ ಬಂದಿದ್ದ ಅಡ್ಡಿ ತೆಗೆಯುವುದು ಯಾವುದೋ ಅದು " ತವ ವಚನಂ ", ಅದು ಯಾವಾಗಲೂ ಇದ್ದೇ ಇದೆ. ಶ್ರುತಿಸ್ಮೃತೀ ತವೈವಾಜ್ಞಾ. ಅದು ಶ್ರುತಿಸ್ಮೃತಿ ರೂಪವಾಗಿದೆ. ಅದನ್ನೇ ನಾವು ಶಾಸ್ತ್ರ ಎನ್ನುವುದು. "ಇತಿ ಗುಹ್ಯತಮಂ ಶಾಸ್ತ್ರಮಿದ ಮುಕ್ತಂ ಮಯಾನಘ–ಏತದ್ಬುಧ್ವಾ ಬುದ್ಧಿಮಾನ್ ಸ್ಯಾತ್ ಕೃತಕೃತ್ಯಶ್ಚ ಭಾರತ." ಬಹು ರಹಸ್ಯವಾದ--ಗುಹ್ಯತಮಂ-ಮಾತುನೋಡಿ-ಇದ ಕ್ಕಿಂತ ಇನ್ನು ರಹಸ್ಯವಿಲ್ಲ ಎಂದು ಶ್ರೀಕೃಷ್ಣನ ಅಭಿಪ್ರಾಯ–ಶಾಸ್ತ್ರವನ್ನು ನೀನು ಅನಘ, ಪಾಪವಿಲ್ಲದವನು ಎಂದು ನಿನಗೆ ಹೇಳಿದ್ದೇನೆ. ಇದನ್ನು ತಿಳಿದವನು ಬುದ್ಧಿವಂತ. ಕೃತಕೃತ್ಯ-ಅವನು ಇನ್ನು ಏನೂ ಮಾಡ ಬೇಕಾಗಿಲ್ಲ ಎಂದ. ಎಲ್ಲಿ ಈ ಮಾತು ? ಹದಿನೈದನೆಯ ಅಧ್ಯಾಯದಲ್ಲಿ. ಎಂದರೇನು ? ಹದಿನಾಲ್ಕು ಅಧ್ಯಾಯಗಳು, ಹದಿನೈದನೆಯ ಅಧ್ಯಾ ಯವೂ ಮುಗಿದಮೇಲೆ.

ಇಲ್ಲಿ ಶಾಸ್ತ್ರ ಎಂಬುದೊಂದು ಮಾತು ಇದೆ. ಶಾಸ್ತ್ರವೆಂದರೇನು ? ಈಗ ನಮಗೆ ಶಾಸ್ತ್ರ ಎಂಬ ಮಾತು ಸರಿಯಾಗಿ ತಿಳಿದಿಲ್ಲ. ನಮಗೆ ತಿಳಿದಿರುವ ಶಾಸ್ತ್ರವೆಲ್ಲ ಬೇಡ ಬೇಡ ಎಂಬ ಅಜ್ಜಿಯ ನಿಷೇಧ ಶಾಸ್ತ್ರ. ಶಾಸ್ತ್ರದಲ್ಲಿ ವಿಧಿ ನಿಷೇಧ ಎರಡೂ ಇವೆ. ವಿಧಿಯೆಂದರೆ ಮಾಡಿಯೇ ತೀರಬೇಕು ಎಂಬ ಆಜ್ಞೆ. ನಿಷೇಧ ಎಂದರೆ ಬಿಡು ಎಂಬ ಆಜ್ಞೆ. ಈ ಮಾಡು–ಬಿಡುಗಳ ಮೂಟೆ ಶಾಸ್ತ್ರ. ಅದರ ಜೊತೆಗೆ ಪ್ರತಿ ಪ್ರಸವ ಗೊತ್ತಿರಬೇಕು—ಅಂದರೇನು ? ಯಾವಾಗ ವಿಧಿಯ ಪ್ರವೃತ್ತಿ, ಯಾವಾಗ ವಿಧಿಯು ಅಪ್ರವೃತ್ತಿ, ಅದು ಗೊತ್ತಿರಬೇಕು. ಕೊಂಚ ಹಗುರವಾದ ಮನೋಭಾವದಿಂದ ಹೇಳಬೇಕೆಂದರೆ, ಮೂರ್ಖ ಪಂಡಿತರ ಕಥೆಯಾಗಬಾರದು. ನೆಲ್ಸನ ಕಥೆಯಾಗಬೇಕು. ಮೂರ್ಖ ಪಂಡಿತರು ನಾಲ್ವರು. ಅವರು ಬರುತ್ತಾ ಒಂದು ಮೂಳೆ ಸಿಕ್ಕಿತು. ಅದನ್ನು ಕಂಡು ಆ ಶಾಸ್ತ್ರ ಬಲ್ಲವನು ಇದು ಸಿಂಹದ ಮೂಳೆ ಎಂದ. ಉಳಿದವರು ನಿನಗೇನು ಗೊತ್ತು ? ಎಂದರು. ಬೇಕಾದರೆ ಇದಕ್ಕೆ ರಕ್ತಮಾಂಸಗಳೂ ಜೀವವೂ ಬರುವಂತೆ ಮಾಡುತ್ತೇನೆ. ಆಗಲಾದರೂ

ನೋಡಿ ಎಂದು, ಅವರ ಮೇಲಿನ ಕೋಪಕ್ಕೆ ಅಭಿಮಂತ್ರಿಸಿ ಅದು ಮೊದಲಿದ್ದಹಾಗೆ ಮಾಡಿದ. ಅದು ಕೂಡಲೇ ಮೇಲೆಬಿದ್ದು ಆ ನಾಲ್ವರನ್ನೂ ಕೊಂದಿತು. "ಸಿಂಹವನ್ನು ಬದುಕಿಸಬಾರದು. ಅದು ದುಷ್ಟ ಜಂತು. ಅದು ತಮಗೆ ಮೃತ್ಯುವಾದೀತು" ಎಂಬ ಯೋಚನೆಯಿಲ್ಲದಿದ್ದುದೇ ಪ್ರತಿಪ್ರಸವವನ್ನು ತಿಳಿಯದಿದ್ದುದು. ವಿಧಿನಿಷೇಧಗಳು ಆಜ್ಞೆಯೆಂಬ ಮೆಷೀನ್ ಆದರೆ, ಪ್ರತಿಪ್ರಸವವೆಂಬುದು ಅದಕ್ಕೆ ಹಾಕುವ ಬ್ರೇಕು. ಮೆಷೀನ್, ಬ್ರೇಕ್, ಎರಡೂ ಇಲ್ಲದಿದ್ದರೆ ನಾವು ಅದನ್ನು ಆಳುವುದು ಹೇಗೆ?

ನೆಲ್ಸನ್ ಕಥೆ ಬಲ್ಲಿರಷ್ಟೆ? ಆತನು ನೌಕಾ ಯುದ್ಧ ಮಾಡುತ್ತಿದ್ದಾನೆ: ಆತನಿಗೆ ತಾನೇ ಗೆಲ್ಲುವೆನೆಂಬ ನಂಬಿಕೆ ಬಂದಿದೆ. ಆಗ ಆತನ ಮೇಲಿನಧಿಕಾರಿ, "Withdraw" ಹಿಂದಕ್ಕೆ ಬಾ ಎಂದು ಅಪ್ಪಣೆಮಾಡಿದ. ಹಡಗಿನಿಂದ ಹಡಗಿಗೆ ಸಿಗ್ನಲ್ ಮೂಲಕ ಅಪ್ಪಣೆ ಬಂತು. ನೆಲ್ಸನ್ ಅಪ್ಪಣೆಯನ್ನು ಕೇಳಿದ. ಟೆಲಿಸ್ಕೋಪ್ ತೆಗೆದುಕೊಂಡು ಸಿಗ್ನಲ್ ನೋಡಿದ. ಅವನಿಗೆ ಒಂದು ಕಣ್ಣು ಕುರುಡು. ಬೇಕೆಂದು ಕುರುಡು ಕಣ್ಣಿಗೆ ಟೆಲಿಸ್ಕೋಪ್ ಇಟ್ಟು ನೋಡಿದ: he put the telescope to the wrong eye and saw nothing. ಕುರುಡು ಕಣ್ಣಲ್ಲಿ ನೋಡುವುದೇನು? ಏನೂ ಕಾಣಲಿಲ್ಲ. ಯುದ್ಧ ನಡೆಯಲಿ ಎಂದ. ಆ ಯುದ್ಧದಲ್ಲಿ ಗೆದ್ದ. ಇದು ಪ್ರತಿಪ್ರಸವ.

ಶಾಸ್ತ್ರದಲ್ಲಿ ವಿಧಿನಿಷೇಧಗಳ ಪ್ರವೃತ್ತಿ ಸಮಗ್ರವಾಗಿ ತಿಳಿಯಲು ಪ್ರತಿಪ್ರಸವದ ಜ್ಞಾನವೂ ಇರಬೇಕು. ಇದು ಸಮಗ್ರ ಜ್ಞಾನ: ಸಮ್ಯಗ್‌ಜ್ಞಾನ. ಇದು ನಮಗೆ ಬೇಕು. ನಾವೀಗ ಶಾಸ್ತ್ರವನ್ನು ಬಂಧಕ ಎನ್ನುತ್ತಿದ್ದೇವೆ. ನಮಗೆ ಸ್ವಯಂಪ್ರಾಪ್ತವಾಗಿರುವ ಸ್ವಾತಂತ್ರ್ಯವನ್ನು ವಿನಾಶಮಾಡುವುದಕ್ಕೋಸ್ಕರ, ಕುಂಠಿತಮಾಡಲೋಸ್ಕರ, ಶಾಸ್ತ್ರ ಎಂಬ ಬುದ್ಧಿ ನಮಗಿದೆ. ಆದರೆ ಶಾಸ್ತ್ರವು ಬಂಧಕವೇನು? ಗೀತೆಯು, ಅದನ್ನ ಆ ಮಾತನ್ನು, ಒಪ್ಪುವುದಿಲ್ಲ. ಹದಿನಾರನೆಯ ಅಧ್ಯಾಯದಲ್ಲಿ ಸೃಷ್ಟಿಯಲ್ಲಿ ಎರಡು ಭಾಗ-ದೈವ, ಅಸುರ ಎಂದು—

ಶ್ರೀ ಭಗವಂತನು ಅಪ್ಪಣೆ ಕೊಡಿಸಿದ. ದೈವಸಂಪತ್, ಅಸುರ ಸಂಪತ್‌ಗಳನ್ನು ಮಗ್ಗುಲು ಮಗ್ಗುಲಲ್ಲಿಟ್ಟು ತೋರಿಸಿದ. ಆದರೆ ಅದು ಪೂರ್ಣವಾಗಿ ನಮಗೆ ಅರ್ಥವಾಗಲು, ಬೃಹದಾರಣ್ಯಕದಲ್ಲಿ ಒಂದೆಡೆ ಆಚಾರ್ಯರು ಭಾಷ್ಯದಲ್ಲಿ ಹೇಳಿದರು: ಮೂಲ ಹೀಗೆ "ದ್ವಯಾ ಹ ಪ್ರಜಾಪತ್ಯಾಃ, ದೇವಾಶ್ಚ ಅಸುರಾಶ್ಚ." ಅದರ ಮೇಲೆ ಆಚಾರ್ಯರು ಭಾಷ್ಯದಲ್ಲಿ ಹೀಗೆ ಹೇಳಿದರು: "ಉಚ್ಯತೇ-ಶಾಸ್ತ್ರಜನಿತ ಜ್ಞಾನಕರ್ಮಭಾವಿತಾತ್, ದ್ಯೋತನಾತ್, ದೇವಾ ಭವಂತಿ। ತ ಏವ ಸ್ವಾಭಾವಿಕ ಪ್ರತ್ಯಕ್ಷಾನುಮಾನ ಜನಿತ ದೃಷ್ಟ ಪ್ರಯೋಜನ ಜ್ಞಾನ ಕರ್ಮ ಭಾವಿತಾ ಅಸುರಾಃ-" ಶಾಸ್ತ್ರದಿಂದ ಜ್ಞಾನ ಕರ್ಮಗಳೇನು ಎಂದು ತಿಳಿಯುವವರು ದೇವತೆಗಳು. ಹಾಗೆ ಇಲ್ಲದೆ ಸ್ವಭಾವಕ್ಕನುಗುಣವಾದ ಪ್ರತ್ಯಕ್ಷ ಅನುಮಾನಗಳನ್ನು ಹಿಡಿದು ದೃಷ್ಟ ಪ್ರಯೋಜನಕ್ಕಾಗಿ ಜ್ಞಾನಕರ್ಮಗಳನ್ನು ನಿರೂಪಿಸಿಕೊಳ್ಳುವವರು ಅಸುರರು. ಅದಷ್ಟೇ ಅಲ್ಲ. ದೇವತೆಗಳು ಅಸುರರಷ್ಟು ಪ್ರಬಲರೂ ಅಲ್ಲ. ಇದನ್ನೇ ಮತ್ತೆ ಛಾಂದೋಗ್ಯದಲ್ಲೂ ಹೇಳುತ್ತಾರೆ. ಹದಿನಾರನೆಯ ಅಧ್ಯಾಯ ಅಲ್ಲಿ ಹೇಳಿರುವುದರ ಸಂಗ್ರಹ. ಅದರಿಂದ ಅದನ್ನು ಬಿಡೋಣ.

ಶಾಸ್ತ್ರವು ಬಂಧಕವಲ್ಲ: ಪರಿಷ್ಕಾರಕ. ಗಂಟುಬಿದ್ದು ಹಾಗೋ ಹೀಗೋ ಎನ್ನುವ ಧರ್ಮಸಂಕಟ ಬಂದಾಗ ಶ್ರೀಕೃಷ್ಣನ ಮಾತು: ಹದಿನಾರನೆಯ ಅಧ್ಯಾಯವನ್ನೆಲ್ಲ ಹೇಳಿ, ನಿನ್ನ ಗುರಿಯೇನು ಮೊದಲು ಗೊತ್ತುಮಾಡಿಕೋ. ನಿನ್ನಗುರಿ ಪ್ರೇಯಸ್ಸಾದರೆ ನಿನಗೆ ಶಾಸ್ತ್ರ ಬೇಕಿಲ್ಲ: ಹಾಗಲ್ಲ, ನನ್ನ ಗುರಿ ಶ್ರೇಯಸ್ಸು ಎನ್ನುವುದಾದರೆ ಆಗ, ಸಿದ್ಧಿಯೂ ಬೇಕು, ಸುಖ ಬೇಕು, ಪರಾಗತಿ ಬೇಕು ಎನ್ನುವುದಾದರೆ, ಆಗ, ಕಾರ್ಯ-ಅಕಾರ್ಯ ವ್ಯವಸ್ಥಿತೌ ಶಾಸ್ತ್ರಂ ಪ್ರಮಾಣಂ—ಮಾಡುವ ಕಾರ್ಯ ಯಾವುದು, ಬಿಡುವ ಅಕಾರ್ಯ ಯಾವುದು ಎಂಬುದನ್ನು ಗೊತ್ತುಮಾಡಲು ಶಾಸ್ತ್ರವು ಬೇಕು. "ಜ್ಞಾತ್ವಾ ಶಾಸ್ತ್ರವಿಧಾನೋಕ್ತಂ ಕರ್ಮ ಕರ್ತುಮಿಹಾರ್ಹಸಿ"—

ಶಾಸ್ತ್ರವು ಹೇಳುವುದೇನು ಎಂಬುದು ತಿಳಿದರೆ, ಆಗ ನೀನು ಕರ್ಮ ಮಾಡಬಲ್ಲವನಾಗುವೆ-—ಎಂದು ಸ್ವಾಮಿಯ ಉಪದೇಶ. ಈ ಉಪದೇಶ ಗೀತೆ. ಅದರಿಂದ ಗೀತಾ ಶಾಸ್ತ್ರ: ಈ ಅರ್ಥವನ್ನು ಆಚಾರ್ಯರು ಒಪ್ಪಿ ಹದಿನೆಂಟನೆಯ ಅಧ್ಯಾಯದಲ್ಲಿ ಮುಕ್ತ ಕಂಠರಾಗಿ ಹೇಳಿದ್ದಾರೆ: "ಗೀತಾ ಶಾಸ್ತ್ರಸ್ಯ" ಎಂದು. ಗೀತೆಯನ್ನು ಈ ದೃಷ್ಟಿಯಿಂದ ನೋಡಿದಾಗ ಅದರ ಸೌಂದರ್ಯವು, ಅದರಿಂದ ಆಗುವ ಉಪಕಾರವು, ನಮಗೆ ಅರ್ಥವಾಗಿ, ಅದರ ಮೇಲಿನ ಗೌರವವು ಬಹುವಾಗಿ ಹೆಚ್ಚುವುದು.

ಈ ಗೀತಾ ಶಾಸ್ತ್ರ ಹೇಳುವುದು-ಸಮ್ಯಗ್‌ಜ್ಞಾನವನ್ನು. ಪ್ರಕೃತಿಗೆ ಅಧೀನವಾಗಿ ಜನ್ಮಿಸಿ ಬಂದ ಜೀವನಿಗೆ ಸಹಜವಾಗಿ ರಾಗ ದ್ವೇಷಗಳು ಬಂದಿವೆ. ಅಥವಾ ಅರ್ಜುನನ ಮಾತಿನಲ್ಲಿ ಹೇಳಬೇಕು ಎಂದರೆ, "ಅಥ ಕೇನ ಪ್ರಯುಕ್ತೋsಯಂ ಪಾಪಂ ಚರತಿ ಪೂರುಷಃ। ಅನಿಚ್ಛನ್ನ ಅಪಿ ವಾರ್ಷ್ಣೇಯ ಬಲಾದಿವ ನಿಯೋಜಿತಃ"—ಮನುಷ್ಯನು ಇಷ್ಟವಿಲ್ಲದಿದ್ದರೂ ಪಾಪ ಮಾಡುತ್ತಾನೆ. ಅದೂ ಬಲವಂತವಾಗಿ. ಹಾಗೆ ಪಾಪ ಮಾಡಿಸುವವರು ಯಾರು ? ಅದಕ್ಕೆ ಸ್ವಾಮಿಯ ಉತ್ತರ ಚೆನ್ನಾಗಿದೆ : "ಕಾಮಏಷ ಕ್ರೋಧಏಷ ರಜೋಗುಣ ಸಮುದ್ಭವಃ । ಮಹಾಶನೋ ಮಹಾ ಪಾಪ್ಮಾ ವಿದ್ಧ್ಯೇನಮಿಹ ವೈರಿಣಂ"–ರಜೋಗುಣದಿಂದ ಹುಟ್ಟಿದ ಕಾಮ-ಕ್ರೋಧ ಎಂಬ ಹೆಸರಿನ-ಎರಡೂ ಒಂದೇ ಬೇರೆಯಲ್ಲ, ಅದನ್ನು ನೋಡಿ–ಒಬ್ಬನುಂಟು. ಎಷ್ಟಾದರೂ ತೃಪ್ತಿಗೊಳ್ಳದೆ ಪಾಪಮಾಡಿಸುವ ಪಾಪಿಯಾದ ವೈರಿಯು ಇವನು. ಇವನು ಎಲ್ಲಿಯೋ ಇದ್ದಾನೆಯೆಂದುಕೊಳ್ಳೋಣವೇ ? ಇಲ್ಲ. ನಮ್ಮಲ್ಲಿಯೇ ಇದ್ದಾನೆ. ಇಂದ್ರಿಯಾಣಿ, ಮನೋ, ಬುದ್ಧಿಃ ತಸ್ಯಾಧಿಷ್ಠಾನಮುಚ್ಯತೇ—ಅವನು ನಮ್ಮ ಇಂದ್ರಿಯಗಳಲ್ಲಿ, ನಮ್ಮ ಮನಸ್ಸಿನಲ್ಲಿ, ನಮ್ಮ ಬುದ್ಧಿಯಲ್ಲಿ ಕುಳಿತಿದ್ದಾನೆ. ಅವನನ್ನು ಗೆಲ್ಲುವುದು ಮೊದಲನೆಯ ಕಾರ್ಯ. ಅದು ಹೇಗೆ ಎಂದರೆ, ಇಂದ್ರಿಯ, ಮನೋ ಬುದ್ಧಿಗಳ ಆಚೆಯಿರುವುದನ್ನು ತಿಳಿದು. " ಏವಂ ಬುದ್ಧೇಃ ಪರಂ ಬುಧ್ವಾ

ಸಂಸ್ತಭ್ಯ ಆತ್ಮಾನಮಾತ್ಮನಾ ॥ ಜಹಿ ಶತ್ರುಂ ಮಹಾಬಾಹೋ ಕಾಮರೂಪಂ ದುರಾಸದಂ''-ಬುದ್ಧಿಯಿಂದ ಆಚೆ ಇರುವುದನ್ನು ತಿಳಿ. ಮನಸ್ಸನ್ನು ನಿಗ್ರಹಿಸು. ಕೈಗೆ ಸಿಕ್ಕದ ಮಹಾ ಶತ್ರುವಾದ ಕಾಮವನ್ನು ಕೊಲ್ಲು. ಆಗ ನೀನು ಉದ್ಧಾರವಾಗುವೆ ಎಂದ ಭಗವಂತ.

ಉಪನಿಷತ್ತೂ (ಮುಂಡಕ) ಇದೇ ಮಾತು ಹೇಳಿತು: "ಭಿದ್ಯತೇ ಹೃದಯ ಗ್ರಂಥಿಃ ಛಿದ್ಯಂತೇ ಸರ್ವಸಂಶಯಾಃ ಕ್ಷೀಯಂತೇ ಚಾಸ್ಯ ಕರ್ಮಾಣಿ ತಸ್ಮಿನ್ ದೃಷ್ಟೇ ಪರಾವರೇ''-ಕಾಮವನ್ನು ಕೊಲ್ಲುವ ಶಕ್ತಿ ಬರುವುದು ಯಾವಾಗ? ಸರ್ವಸಂಶಯಗಳೂ ಹೋದಾಗ-ಅದು ಆಗುವುದು ಯಾವಾಗ? ಕರ್ಮಗಳೆಲ್ಲ ನಾಶವಾದಾಗ. ಅದು ಆಗುವುದು ಯಾವಾಗ? ಹೃದಯ ಗ್ರಂಥಿಯು ಒಡೆದಾಗ. ಅದು ಆಗುವುದು ಯಾವಾಗ? ಪರ ಅಪರಗಳನ್ನು ತಿಳಿದಾಗ. ಪರಾ ಎಂದರೆ ಕಾರಣಾತ್ಮಾ. ಅಪರಾ ಎಂದರೆ ಕಾರ್ಯಾತ್ಮಾ. ಜಗತ್ತು ಜಗತ್ತಿನ ಆದಿಯನ್ನು ತಿಳಿದಾಗ. ಅದು ತಿಳಿಯುವುದು ಯಾವಾಗ? ಕಾಮವು ನಮ್ಮನ್ನು ಬಿಟ್ಟಾಗ. ಗೀತೆಯ ಮಾತಿನಲ್ಲಿ ಕಾಮವೇ ಅಜ್ಞಾನ. ಜ್ಞಾನವಿಲ್ಲದಿರುವುದು. ಅದೇ ಮೋಹ! ಅದೇ ವಿಸ್ಮೃತಿ! ಅದು ತಪ್ಪಿತು ಎಂದರೆ ಆಯಿತು.

ಅದಕ್ಕಾಗಿ ಗೀತೆಯು ನಿಷ್ಕಾಮ ಕರ್ಮವನ್ನು ಹೇಳಿದುದು. ಲೋಕದಲ್ಲಿರುವವರೆಗೂ "ನ ಜಾತು ತಿಷ್ಠತ್ಯಕರ್ಮಕೃತ್. ಕಾರ್ಯತೇ ಹ್ಯವಶಃ ಕರ್ಮ, ಪ್ರಕೃತಿಃ ತ್ವಾಂ ನಿಯೋಕ್ಷ್ಯತಿ'' -ಒಂದು ಗಳಿಗೆಯೂ ಸುಮ್ಮನೆ ಕುಳಿತಿರಲಾಗುವುದಿಲ್ಲ. ಏಕೆ? ಎಂದರೆ ಪರವಶವಾಗಿ ಕರ್ಮಮಾಡುತ್ತಾನೆ. ಪರವಶವಾಗಿ ಎಂದರೇನು? ಎಂದರೆ, ಪ್ರಕೃತಿಯು ನಿನ್ನನ್ನು ನಿಯೋಜಿಸುತ್ತದೆ. ಅದರಿಂದ ನಿಷ್ಕಾಮ ಕರ್ಮ ಎಂದರೆ ಪ್ರಕೃತಿಯನ್ನು ದಾಟುವುದು. ಪ್ರಕೃತಿಯನ್ನು ದಾಟುವುದು ಹೇಗೆ? ಶ್ರೀಕೃಷ್ಣ ಹೇಳಿದ ದಾರಿಯಿದೆ. "ಮಾಯಾ ಮೇತಾಂ ತರಂತಿ ತೇ''-ಅವರು ಮಾಯೆಯನ್ನು ದಾಟುತ್ತಾರೆ. ಯಾರು ಎಂದರೆ, "ಮಾಮೇವಯೇ ಪ್ರಪದ್ಯಂತೇ''—ಯಾರು ನನ್ನನ್ನು ಆಶ್ರಯಿಸು

ವರೋ ಅವರು. ಅಡರಿಂದ ನಿಷ್ಕಾಮ ಕರ್ಮವಾಗಬೇಕಾದರೆ ಅದಕ್ಕೆ ಪರಾವರ ಜ್ಞಾನ, ಪರಾಶ್ರಯ ಎರಡೂ ಬೇಕಾಯಿತು. ಒಂದು ಜ್ಞಾನವಾದರೆ ಇನ್ನೊಂದು ಭಕ್ತಿಯಾಯಿತು. ಜ್ಞಾನ, ಭಕ್ತಿ, ಕರ್ಮಗಳು ಮೂರೂ ಹೀಗೆ ಗೀತೆಯ ಗುರಿಯಾಯಿತು.

ಹಿಂದೆ ಗೀತೆ ಸಮನ್ವಯವನ್ನು ಹೇಳುತ್ತದೆ ಎಂದೆವಲ್ಲ ? ಹೌದು. ಅದು ಸರಿ. ಹನ್ನೊಂದನೆಯ ಅಧ್ಯಾಯದವರೆಗೂ ಹೇಳಿರುವುದೆಲ್ಲ ಕರ್ಮಜ್ಞಾನಗಳು. ಎರಡನೆಯ ಅಧ್ಯಾಯದಲ್ಲಿ ಸಾಂಖ್ಯ ಯೋಗ ಎಂಬ ಎರಡು ಮಾರ್ಗಗಳು ಎಂದ ಸ್ವಾಮಿ. ಸಾಂಖ್ಯವೆಂದರೆ ತ್ಯಾಗ, ಯೋಗವೆಂದರೆ ಕಾರ್ಯ ಎಂದ. ಅದರಿಂದಲೇ ಮುಂದೆ ಉಪಸಂಹಾರಾಧ್ಯಾಯದಲ್ಲಿ ಅರ್ಜುನನ ಪ್ರಶ್ನವೂ ತ್ಯಾಗ ಸಂನ್ಯಾಸಗಳನ್ನೇ ಹಿಡಿದು ಹೊರಟಿತು.

ಕರ್ಮಫಲ ತ್ಯಾಗವಂತೂ ತ್ಯಾಗವಾಯಿತು : ಸಂನ್ಯಾಸವೆಂದರೇನು ? ಎಂದರೆ ಕಾಮ್ಯಕರ್ಮನ್ಯಾಸ ಎಂದರೆ ಕಾಮ್ಯಕರ್ಮಗಳನ್ನು ಮಾಡದಿರುವುದು ಎಂದ ಸ್ವಾಮಿ. ಆದರೆ ಜೊತೆಯಲ್ಲಿಯೇ "ಯಜ್ಞ ದಾನ ತಪಃ ಕರ್ಮ ನ ತ್ಯಾಜ್ಯಂ ಕಾರ್ಯಮೇವತತ್"–ಯಜ್ಞ ದಾನ ತಪಸ್ಸು ಕರ್ಮಗಳನ್ನು ಬಿಡಬಾರದು. ಮಾಡಲೇಬೇಕು. ಅವು ಪಾವನಾನಿ ಪರಿಶುದ್ಧಿ ಕಾರಿಗಳು." ಎಂದು "ಮನುಷ್ಯನು ದೇಹಸಂಗದಲ್ಲಿರುವವರೆಗೂ ಕರ್ಮವನ್ನು ಬಿಡಲಾಗುವುದಿಲ್ಲ : ಅಲ್ಲದೆ ದೇಹಸಂಗ ಇರುವವರೆಗೂ ಪಾಪಪುಣ್ಯಗಳು ಬಿಡುವುದಿಲ್ಲ. ಅದರಿಂದ ಪಾಪವೂ ಪುಣ್ಯವಾಗುವ ಹಾಗೆ ಕರ್ಮ ಮಾಡಬೇಕು" ಎಂದು ಅಪ್ಪಣೆ.

ಅಷ್ಟೇ ಅಲ್ಲ. ಕರ್ಮವನ್ನು ತಿಳಿದು ಮಾಡಬೇಕು. "ಕರ್ಮಣೋಹ್ಯಪಿ ಬೋದ್ಧವ್ಯಂ ಬೋದ್ಧವ್ಯಂಚ ವಿಕರ್ಮಣಃ । ಅಕರ್ಮಣೋಹ್ಯಪಿ ಬೋದ್ಧವ್ಯಂ । ಗಹನಾ ಕರ್ಮಣಾಂ ಗತಿಃ"—ಕರ್ಮ, ವಿಕರ್ಮ, ಅಕರ್ಮ ಮೂರೂ ತಿಳಿದು ಮಾಡಬೇಕು ಎಂದ. ಹಾಗಾದರೆ ಅವು ಯಾವುವು ? ಕರ್ಮ ಯಾವುದು ? ವಿಕರ್ಮ

ಯಾವುದು ? ಅಕರ್ಮ ಯಾವುದು ? ಎಂದರೆ, "ವಿಕರ್ಮ ಸಹಜಾ ಚೇಷ್ಟಾ" ಎಂದು ಉದ್ಧವ ಗೀತೆಯಲ್ಲಿ ಹೇಳಿದೆ. ಅದರಿಂದ ನಾವು ಇಂದ್ರಿಯ ಕರ್ಮ, ಪ್ರಾಣಕರ್ಮ ಎನ್ನುವುವೆಲ್ಲ ವಿಕರ್ಮ, ಕಣ್ಣು ನೀವು ಹೇಳಲಿ, ಹೇಳದಿರಲಿ, ತಾನು ನೋಡುವುದನ್ನು ಬಿಡುವುದಿಲ್ಲ : ಕಿವಿ ಕೇಳುವುದನ್ನು ಬಿಡುವುದಿಲ್ಲ. ಹಾಗೆಯೇ ತಿಂದನ್ನ ಅರಗುವುದು ಮೊದಲಾದವು ಕೂಡ. ಇವು ಇಂದ್ರಿಯ ಕರ್ಮಗಳು, ಪ್ರಾಣ ಕರ್ಮಗಳು. ಇವನ್ನು ಬಿಡುವುದು ಹೇಗೆ ? ದೇಹವಿರುವವರೆಗೂ ಇವು ಆಗಿಯೇ ತೀರುತ್ತವೆ.

ಹಾಗೆಯೇ ಅಕರ್ಮವನ್ನು ನೋಡೋಣ. ಅಕರ್ಮವೆಂದರೆ ರಾಗದ್ವೇಷವಶರಾಗಿ ಮಾಡುವ ಕರ್ಮ. ಇದು ನಮ್ಮೆಲ್ಲರಿಗೂ ತಿಳಿಯದೆಯೇ ನಡೆದು ಹೋಗುತ್ತದೆ. ರಾಗದ್ವೇಷಗಳು ಇಲ್ಲದ ಮನಸ್ಸೆಲ್ಲುಂಟು ? ಅದರಿಂದ ಮನೋನಿಯುಕ್ತವಾಗಿ ನಡೆಯುವ ಕರ್ಮವೇ ಅಕರ್ಮ. ಅದೇ ಪಾಪ !

ಮನಸ್ಸಿಗೆ ಬೇಕಿರಲಿ ಬೇಡದಿರಲಿ ನಡೆವುದೊಂದು ಕರ್ಮವಿದೆ. ಅದೇ ಶಾಸ್ತ್ರವಿಹಿತ ಕರ್ಮ. ಈ ವಿಚಾರ ಆಗಲೇ ಹೇಳಿದ್ದೇವೆ. ಅದರಿಂದ ಮುಂದೆ ಹೋಗೋಣ.

ಹೀಗೆ ಮೂರು ವಿಧವಾದ ಕರ್ಮಗಳಲ್ಲಿ ತಿಳಿಯಬೇಕಾದುದು ಏನು ಎಂದರೆ, ಅಕರ್ಮವನ್ನು ಬಿಡಬೇಕು : ವಿಕರ್ಮದಲ್ಲಿ ಉದಾಸೀನನಾಗಬೇಕು. ಕರ್ಮದಲ್ಲಿ ಪ್ರವೃತ್ತನಾಗಬೇಕು. ಆದರೆ, ಒಂದು ನಿಯಮ, ಕರ್ಮಮಾಡಿದರೂ ತಾನು ಕರ್ತೃವಲ್ಲ ಎಂಬುದು ತಿಳಿಯಬೇಕು.

ಕರ್ಮಮಾಡಿಯೂ ಕರ್ತೃವಲ್ಲದಿರುವುದು ಹೇಗೆ ? ನಮ್ಮಲ್ಲಿ ಗಾದೆಯಿದೆ. ಉಂಡೂ ಉಪವಾಸಿ : ಬಳಸಿಯೂ ಬ್ರಹ್ಮಚಾರಿಯೆಂದು. ಅದರಂತೆ ಇದು. ಪೂರ್ವಾರ್ಧದಲ್ಲಿ "ಯಸ್ಯ ಸರ್ವೇ ಸಮಾರಂಭಾಃ ಕಾಮಸಂಕಲ್ಪ ವರ್ಜಿತಾಃ ಜ್ಞಾನಾಗ್ನಿದಗ್ಧಕರ್ಮಾ"—ಯಾವನು ಕಾಮ, ಸಂಕಲ್ಪಗಳಿಲ್ಲದೆ ಕಾರ್ಯಮಾಡುವನೋ ಅವನ ಕರ್ಮಗಳನ್ನು

ಜ್ಞಾನಾಗ್ನಿಯು ಸುಟ್ಟು ಬಿಡುವುದು. ಅಲ್ಲಿಂದ ಮುಂದಕ್ಕೆ ಇನ್ನೂ ನಾಲ್ಕು ಶ್ಲೋಕಗಳು. "ತ್ಯಕ್ತ್ವಾಕರ್ಮಫಲಾಸಂಗಂ ನಿತ್ಯತೃಪ್ತೋ ನಿರಾಶ್ರಯಃ। ಕರ್ಮಣ್ಯಭಿಪ್ರವೃತ್ತೋಽಪಿ ನೈವ ಕಿಂಚಿತ್ಕರೋತಿ ಸಃ" ಕರ್ಮಫಲದ ಆಶೆಯಿಲ್ಲದೆ ನಿತ್ಯತೃಪ್ತನೂ ನಿರಾಶ್ರಯನೂ ಆದವನು ಕರ್ಮಮಾಡಿದರೂ ಮಾಡಿದಂತಲ್ಲ. "ನಿರಾಶೀರ್ಯತಚಿತ್ತಾತ್ಮಾ ತ್ಯಕ್ತಸರ್ವಪರಿಗ್ರಹಃ ॥ ಶಾರೀರಂ ಕೇವಲಂ ಕರ್ಮ ಕುರ್ವನ್ನಾಪ್ನೋತಿ ಕಿಲ್ಬಿಷಂ"– ಆಶಾರಹಿತನಾಗಿ, ರಾಗದ್ವೇಷಾತ್ಮಕವಾದ ವಾಸನಾಮಯ ಚಿತ್ತವನ್ನು ನಿರೋಧಿಸಿ, ಯಾವುದೊಂದರಲ್ಲಿಯೂ ಅಭಿಮಾನವಿಲ್ಲದೆ, ಶಾರೀರವಾಗಿ ಕರ್ಮಮಾಡುವವನಿಗೆ ಕಿಲ್ಬಿಷ (ಪಾಪ) ವಿಲ್ಲ. "ಯದೃಚ್ಛಾಲಾಭಸಂತುಷ್ಟಃ ದ್ವಂದಾತೀತೋ ವಿಮತ್ಸರಃ ॥ ಸಮಸ್ಸಿದ್ಧಾವಸಿದ್ಧೌಚ ಕೃತ್ವಾಪಿ ನ ನಿಬಧ್ಯತೇ"–ತಾನಾಗಿ ದೊರೆತಷ್ಟರಲ್ಲಿ ತೃಪ್ತಿಪಟ್ಟುಕೊಂಡು, ಸುಖದುಃಖಾದಿಗಳಿಗೆ ವಶನಾಗದೇ, ಇತರರ ಅಭ್ಯುದಯಕ್ಕೆ ಮತ್ಸರಿಸದೆ, ಸಿದ್ಧಿ–ಅಸಿದ್ಧಿಗಳೆರಡೂ ಒಂದೇ ಎಂದು ಕೊಂಡ (ಕುಶಲನು) ಕರ್ಮಮಾಡಿದರೂ ಬದ್ಧನಾಗುವುದಿಲ್ಲ. ಈ ನಾಲ್ಕು ಶ್ಲೋಕಗಳಲ್ಲಿ ಹೇಳಿರುವ ಅರ್ಥದ ಜೊತೆಗೆ ಇನ್ನೂ ಅಷ್ಟು ಸೇರಿಸಿ ಮುಂದೆ ಇನ್ನೊಂದು ಶ್ಲೋಕ ಹೇಳಿದ. "ಯಸ್ಯ ನಾಹಂಕೃತೋ ಭಾವಃ ಬುದ್ಧಿರ್ಯಸ್ಯ ನ ಲಿಪ್ಯತೇ। ಹತ್ವಾಪಿ ಸ ಇಮಾಁಲ್ಲೋಕಾನ್ ನ ಹಂತಿ ನ ನಿಬಧ್ಯತೇ"—ಯಾವನಿಗೆ ತಾನು ಮಾಡಿದೆನೆಂಬ ಅಹಂಕಾರವಿರುವುದಿಲ್ಲವೋ, ಯಾವನಿಗೆ ಮಾಡಿದ ಕರ್ಮವು ಬುದ್ಧಿಲೇಪವಾಗುವುದಿಲ್ಲವೋ, ಎಂದರೆ, ಬುದ್ಧಿಯು ಮಾಡಿದ ಕರ್ಮವನ್ನು ಕುರಿತು ಚಿಂತಿಸುವುದಿಲ್ಲವೋ ಅವನು ಕೊಂದರೂ ಕೊಲ್ಲುವುದಿಲ್ಲ: ಅಷ್ಟೇ ಅಲ್ಲ ಕೊಂದರೂ ಅವನಿಗೆ ಬಂಧವಿಲ್ಲ.

ಕರ್ಮಯೋಗದ ಗುಟ್ಟು ಇಲ್ಲಿದೆ. ಲೌಕಿಕವಾದ ಉಪಮಾನದಿಂದ ಇದನ್ನು ಅನುಸಂಧಾನಮಾಡೋಣ. ದೊಂಬಿಯಾಗುತ್ತದೆ. ಮ್ಯಾಜಿಸ್ಟ್ರೇಟರು ರಿಸರ್ವ್ ಪೋಲೀಸ್ ತರುತ್ತಾರೆ. ಯತ್ನವಿಲ್ಲದೆ ಷೂಟ್ ಎನ್ನುತ್ತಾರೆ. ಜನ ಉರುಳುತ್ತಾರೆ. ಮ್ಯಾಜಿಸ್ಟ್ರೇಟ್

ರಿಸರ್ವ್ ಪೋಲೀಸ್‌ರನ್ನು ಸರಕಾರ ಸೆಷನ್ಸಿಗೆ ಕಮಿಟ್‌ಮಾಡುತ್ತಾ ರೇನು ? ಸೆಷನ್ಸ್ ಜಡ್ಜ್ ನೋಡಿ. ತನ್ನ ಮುಂದೆ ಇರುವ ಅಪಾದಿತ ನನ್ನು ಕೊಲೆಗಾರನೆಂದು ತೀರ್ಪುಕೊಟ್ಟು ಅವನನ್ನು ಫಾಸಿಗೆ ಹಾಕಿ ರೆನ್ನುತ್ತಾನೆ. ಕೊಲೆಗಾರನನ್ನು ಕೊಲೆಮಾಡಿಸುತ್ತಾನೆ. ಆದರೆ ಅವನು ಅಪರಾಧಿಯೇನು ? ಹಾಗೆ, ಕರ್ಮಮಾಡಿದರೂ ಕರ್ತೃತ್ವವಿಲ್ಲ ದಿರುವುದು. ಅದು ಸಿದ್ಧಿಸಿದರೆ ಕರ್ಮಯೋಗ.

ತನಗೆ ಫಲವಿಲ್ಲೆಂದು ಉದಾಸೀನನಾಗಿರಲು ಸಾಧ್ಯವೇ ಎಂದರೆ, ಕೂಡದು. "ಯೋಗಃ ಕರ್ಮಸು ಕೌಶಲಂ." ಕೆಲಸದಲ್ಲಿ ದಕ್ಷತೆ ಇರಬೇಕು: "ಸಮತ್ವಂ ಯೋಗಮುಚ್ಯತೇ॥" ಕೆಲಸಮಾಡಿದರೂ ತಾನು ಅಂಟದಿರಬೇಕು. ಸಮತ್ವವನ್ನು ಪಡೆದರೆ ಅದಾಗುವುದು. ಅದು ಯೋಗ.

ಆಯಿತು. ಹೀಗೆ ಮಾಡಿದ ಕರ್ಮವೇನಾಗುವುದು ? ಕರ್ಮವು ಪೂರ್ಣವಾದರೇನೇ ಅದರ ಫಲ ? ಹಾಗೆ ಪೂರ್ಣವಾದ ಕರ್ಮವು, "ಸರ್ವಂ ಕರ್ಮಾಖಿಲಂ ಪಾರ್ಥ ಜ್ಞಾನೇ ಪರಿಸಮಾಪ್ಯತೇ"-ಯಾವ ಕರ್ಮವೇ ಆಗಲಿ ಪೂರ್ಣವಾಗಿದ್ದರೆ, ಅ-ಖಿಲವಾಗಿದ್ದರೆ, ಜ್ಞಾನದಲ್ಲಿ ಪರಿಸಮಾಪನವಾಗುವುದು ಎಂದರೆ ಜ್ಞಾನವಾಗಿ ಪರಿಣಮಿಸುವುದು." ಇದನ್ನೇ ಜ್ಞಾನಾಗ್ನಿಯಲ್ಲಿ ಕರ್ಮವು ದಗ್ಧವಾಗುವುದು ಎನ್ನುವುದು. ಎಂದರೆ, ಕರ್ಮಕ್ಕೆ ಬಂಧಕವಾದ ಶಕ್ತಿಯೊಂದಿದೆ, ಅದು ನಾಶವಾಗು ವುದು. "ಅಷ್ಟೇ ಅಲ್ಲ. ಪಾರ್ಥ, ಕೇಳು, ಇನ್ನೂ ಒಂದು ದಾರಿಯಿದೆ. ಸ್ವಕರ್ಮನಿರತನಾದವನು ಸಿದ್ಧಿಯನ್ನು ಹೊಂದುವನು ಹೇಗೆನ್ನು ವೆಯಾ ? ಕೇಳು. "ಯತಃ ಪ್ರವೃತ್ತಿರ್ಭೂತಾನಾಂ ಯೇನ ಸರ್ವ ಮಿದಂ ತತಂ। ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿಂದತಿ ಮಾನವಃ॥" ಯಾವುದು ಎಲ್ಲರ ಅಂತರಂಗದಲ್ಲಿಯೂ ಕುಳಿತು ಎಲ್ಲರನ್ನೂ ಆಡಿಸ್ತು ತ್ತಿದೆಯೋ, ಯಾವುದು ಈ ಲೋಕದಲ್ಲಿ ಎಲ್ಲೆಲ್ಲಿಯೂ ತಾನೇ ತಾನಾಗಿ ಹರಡಿಕೊಂಡಿರುವುದೋ, ಅದನ್ನು ತಾನು ಮಾಡುವ ಕೆಲಸ ದಿಂದ ಆರಾಧಿಸಬೇಕು. ಆಗ ಮಾನವನು ಸಿದ್ಧಿಯನ್ನು ಪಡೆಯು

ವನು. ಇದೇ ಗಾಯತ್ರೀ. "ಧಿಯೋಯೋನಃ ಪ್ರಚೋದಯಾತ್". ನಮ್ಮಂತರಂಗದಲ್ಲಿ ನಿಂತು ಪ್ರಚೋದನ ಮಾಡುವವನು ಯಾರು ? ಅವನನ್ನು ಕಾಣುವುದು ಗಾಯತ್ರೀ. ಈಗ ನೆಹರೂ ಅವರು ಹೋದ ಹೋದ ಕಡೆಯಲ್ಲೆಲ್ಲಾ "ನೀವು ಯಾತಕ್ಕೆ ಕೆಲಸಮಾಡುತ್ತಿರುವುದು." ಎಂದು ಕೇಳಿ "ನೀವು ಕೆಲಸಮಾಡುತ್ತಿರುವುದು ದೇಶಕ್ಕಾಗಿ" ಎಂದು ಹೇಳಿ ಅವರಿಗೆ ಮಾನೋನ್ನತಿಯನ್ನು ಕಲ್ಪಿಸುತ್ತಿದ್ದಾರೆ. ಹಾಗೆಯೇ ಶ್ರೀಕೃಷ್ಣನು ಕರ್ಮಯೋಗದ ಗುಟ್ಟುಹೇಳಿ ಜನರಿಗೆ ಜ್ಞಾನೋನ್ನತಿಯನ್ನು ಕಲ್ಪಿಸುವನು. ಕರ್ಮವಾಯಿತು. ಇನ್ನು ಜ್ಞಾನ ವನ್ನು ಕುರಿತು ಅಷ್ಟು ಹೇಳೋಣ.

ಜ್ಞಾನವೆಂದರೇನು ಎಂಬುದನ್ನೂ ಸ್ವಾಮಿಯೇ ಹೇಳಿದ. "ಯೇನ ಭೂತಾನ್ಯಶೇಷೇಣ ದ್ರಕ್ಷ್ಯಸ್ಯಾತ್ಮನಿ ಅಥೋ ಮಯಿ"-ನಾನು ವಾಸುದೇವನು. ನಾನೇ ಎಲ್ಲರ ಆತ್ಮವಾಗಿರುವವನು. ಇಂಥಾ ಆತ್ಮನಾದ ನನ್ನಲ್ಲಿ ಎಲ್ಲಾ ಭೂತಗಳೂ ಕಾಣುವುದು ಜ್ಞಾನ. ಇನ್ನೊಂದೆಡೆ ಹೇಳಿದ: "ಸರ್ವಭೂತಸ್ಥಮಾತ್ಮಾನಂ ಸರ್ವಭೂತಾನಿ ಚಾತ್ಮನಿ ಈಕ್ಷತೇ ಯೋಗಯುಕ್ತಾತ್ಮಾ"–ಯೋಗಿಯಾದವನು ಸರ್ವ ಭೂತಗಳಲ್ಲಿರುವ ಆತ್ಮನನ್ನೂ ಆತ್ಮನಲ್ಲಿರುವ ಸರ್ವಭೂತಗಳನ್ನು ಕಾಣುವನು."

ನೀವು ಯಾವಾಗಲಾದರೂ ಬರಿಕಣ್ಣಿಂದ ಸೂರ್ಯನನ್ನು ನೋಡಿ ರುವಿರಿ ತಾನೇ ? ಆಗ ನೋಡಿ. ಕಣ್ಣುಗಳಿಗೆ ಒಂದು ವಿಶೇಷ ಪರಿಸ್ಥಿತಿಯುಂಟಾಗಿ ಎಲ್ಲಿ ನೋಡಿದರೂ ಒಂದು ತೇಜೋಮಂಡಲ ಕಾಣಿಸುತ್ತದೆ. ಯಾರನ್ನು ನೋಡಿದರೂ ನೋಡಿದೆಡೆ ಆ ಮಂಡಲ ವಿದ್ದು ಅದರ ಹಿಂದೆ ಎಲ್ಲವೂ ಕಾಣಿಸುತ್ತದೆ. ಇದನ್ನು ತಲೆ ಕೆಳಗೆ ಮಾಡಿ ನೋಡಬಲ್ಲಿರಾ ? ನಾವು ನೋಡಿದವರ ಮುಖದ ಮೇಲೆ ಕಾಣುವ ತೇಜೋಮಂಡಲವು ಅವರ ಮುಖದೊಳಗಿಂದ ಹೊರಬೀಳು ವಂತೆ ಕಂಡರೆ ಆಗ ಏನಾಗುವುದು ಹೇಳಬಲ್ಲಿರಾ ? ಈಗ ನಮ್ಮ ಕಣ್ಣು ತೇಜೋಧಿಕವಾದ ಬಿಂಬವನ್ನು ನೋಡಿ ಆಯಾಸಪಟ್ಟು, ರೋಗ

ದಿಂದ ಈ ತೇಜೋಮಂಡಲವನ್ನು ಕಾಣುತ್ತದೆ. ಅದಕ್ಕೆ ಬದಲಾಗಿ ಎದುರು ಬಂದ ವ್ಯಕ್ತಿಯಲ್ಲಿ ಮೇಲೆ ಮುಚ್ಚಿರುವ ದೇಹವು ದಾಳಿಂಬದಂತೆ ಅರಳಿ ತನ್ನೊಳಗಿರುವ ಚೇತನವನ್ನು ತೋರಿಸುವುದಾದರೆ ಆಗ ಹೇಗಿದ್ದೀತು? ಹಾಗೆ, ಎದುರಿಗಿರುವ ಭೂತದಲ್ಲಿ, ಭೂತಪತಿಯನ್ನು ಕಾಣುವುದು ಯಾವುದರಿಂದಲೋ ಅದು ಜ್ಞಾನ. ಮುಂದೆ ಹನ್ನೊಂದನೆಯ ಅಧ್ಯಾಯದಲ್ಲಿ ಅರ್ಜುನನು ಕೇಳಿದ್ದೂ ಕೃಷ್ಣನು ತೋರಿಸಿದ್ದೂ ಇದನ್ನೇ! ಆದರೆ "ಬರಿಗಣ್ಣು ಇದನ್ನು ಕಾಣಲಾರದು. ಅದರಿಂದ ದಿವ್ಯಚಕ್ಷುಸ್ಸನ್ನು ಕೊಡುತ್ತೇನೆ ನೋಡು" ಎಂದ ಸ್ವಾಮಿ. ಆತ ದಿವ್ಯಚಕ್ಷುಸ್ಸನ್ನು ಕೊಟ್ಟ. ಅರ್ಜುನ ವಿಶ್ವರೂಪವನ್ನು ಕಂಡ. ಹಾಗೆ ವಿಶ್ವರೂಪವನ್ನು ತೋರಿಸುವುದು ಯಾವುದೋ ಅದು ಜ್ಞಾನ.

ಜ್ಞಾನದಲ್ಲಿ ಒಂದು ಪ್ರಚೋದನವಿದೆ. ಎಂದರೆ, ಕೆಲಸಮಾಡಿಸುವ ಶಕ್ತಿಯಿದೆ. ಜ್ಞಾನ ಬಂದಿದೆ ಎಂದರೆ ಆ ಕೆಲಸವಾಗಬೇಕು. ಅದನ್ನು ಸ್ವಾಮಿಯೇ ಹೇಳುತ್ತಾನೆ, ಮಳೆಯಾದುದಕ್ಕೆ ಗುರುತೇನು? ನೆಲವು ನೆನೆಯಬೇಕು. ಹಾಗೆ, "ಯತ್ ಜ್ಞಾತ್ವಾ ನ ಪುನರ್ಮೋಹಂ ಏವಂ ಯಾಸ್ಯಸಿ ಪಾಂಡವ".—ಆ ಜ್ಞಾನವು ನಿನಗೆ ಲಭಿಸಿದರೆ ಮತ್ತೆ ನಿನಗೆ ಹೀಗೆ ಮೋಹವು ಬರುವುದಿಲ್ಲ. ಯಾಕೆನ್ನುವೆಯಾ? ಕೇಳು. "ಸರ್ವಂ ಜ್ಞಾನಪ್ಲವೇನೈವ ವೃಜಿನಂ ಸಂತರಿಷ್ಯಸಿ"—ಪಾಪವನ್ನೆಲ್ಲ ಜ್ಞಾನವೆಂಬ ದೋಣಿಯಿಂದ ದಾಟುವೆ. ಅಷ್ಟೇ ಅಲ್ಲ: ಆ ಜ್ಞಾನವು ಅಗ್ನಿಯು ಕಾಷ್ಠಗಳನ್ನು ದಹಿಸುವಂತೆ ಸರ್ವಪಾಪಗಳನ್ನೆಲ್ಲಾ ಧ್ವಂಸಮಾಡುವುದು. ಇಷ್ಟು ಹೇಳಿ ಮತ್ತೆಯೂ ಹೇಳಿದ: "ಜ್ಞಾನಂ ತೇऽಹಂ ಸವಿಜ್ಞಾನಮಿದಂ ವಕ್ಷ್ಯಾಮ್ಯಶೇಷತಃ। ಯಜ್ಜ್ಞಾತ್ವಾ ನೇಹ ಭೂಯೋऽನ್ಯತ್ ಜ್ಞಾತವ್ಯಮವಶಿಷ್ಯತೇ"—ಜ್ಞಾನವನ್ನೂ ವಿಜ್ಞಾನವನ್ನೂ ಕುರಿತು ಶೇಷವಿಲ್ಲದಂತೆ ಹೇಳುವೆನು. ಅದನ್ನು ತಿಳಿದಮೇಲೆ ಇನ್ನು ಏನೂ ತಿಳಿಯಬೇಕಾಗಿಲ್ಲ. "ವಾಸುದೇವಸ್ಸರ್ವಮಿತಿ" ತಿಳಿಯುವುದೇ ಸವಿಜ್ಞಾನವಾದ ಜ್ಞಾನ. ಅದಕ್ಕೋಸ್ಕರವೇ ಸ್ವಾಮಿಯು ಈ ಮಾತು ಆಡುವುದಕ್ಕಿಂತ ಮುಂಚೆ ತನ್ನೆರಡು

ಪ್ರಕೃತಿಗಳನ್ನು ಹೇಳಿ, "ಮತ್ತಃ ಪರತರಂ ನಾನ್ಯತ್ ಕಿಂಚಿದಸ್ತಿ ಧನಂಜಯ"–ನನಗಿಂತ ಬೇರೆಯಾದದ್ದು ಯಾವುದೂ ಇಲ್ಲ. "ಮಯಿ ಸರ್ವಮಿದಂ ಪ್ರೋತಂ ಸೂತ್ರೇಮಣಿಗಣಾಇವ"–ದಾರದಲ್ಲಿ ಪೋಣಿಸಿರುವ ಮಣಿಗಳಂತೆ ನನ್ನಲ್ಲಿ ಎಲ್ಲವೂ ಇರುವುದು ಎಂದು ಸರ್ವಾಧಾರನಾದ ತನ್ನ ಸ್ವರೂಪವನ್ನೂ ಹೇಳಿದ. ಅದನ್ನು ತಿಳಿಯುವುದೇ ಜ್ಞಾನ : ಅದು ಶ್ರವಣ ಮನನಗಳಿಂದ ಲಭಿಸುವುದು. ಆದರೆ ಅದು ನಿಧಿಧ್ಯಾಸನವಾಗಬೇಕು. ಆಗ ಅದು ವಿಜ್ಞಾನವಾಗುವುದು. ಆತ್ಮನು ದೊಡ್ಡವನು. ಆತ್ಮನಿಗಿಂತ ಇನ್ನಿಲ್ಲ ಎಂದು ತಿಳಿದವನು ಏನು ಮಾಡಬೇಕು? "ಶನೈಶ್ಶನೈರುಪರಮೇತ್" ಅಭ್ಯಾಸಬಲದಿಂದ, ಮೆಲ್ಲಮೆಲ್ಲಗೆ ಬಹಿರ್ಮುಖವಾಗಿ "ತನಗಿಂತ ಬೇರೆಯಾದುದು ಇನ್ನೊಂದಿದೆ : ಅದನ್ನು ಸಾಧಿಸಬೇಕು" ಎಂದು ಹೊರಡುವ ಮನಸ್ಸು ಇಂದ್ರಿಯಗಳನ್ನು ಮೆಲ್ಲಮೆಲ್ಲಗೆ ಹಿಂದಿರುಗಿಸಬೇಕು. ಬುದ್ಧಿ ಧೃತಿಬಲಗಳಿಂದ ಅದಕ್ಕೆ ಹೇಳಬೇಕು : "ಎಲೈ ಮನಸ್ಸೇ, ಆತ್ಮನಲ್ಲದೆ ಈ ಲೋಕದಲ್ಲಿ ಇನ್ನೇನೂ ಇಲ್ಲ : ಇರುವುದೆಲ್ಲ ಆತ್ಮವೇ ! ಅದರಿಂದ ನೀನು ಎಲ್ಲೆಲ್ಲಿ ಹೋದರೂ ಆತ್ಮನನ್ನೇ ನೋಡು" ಎನ್ನಬೇಕು. ಅದು–ಆತ್ಮ ಸಂಸ್ಥಂ ಮನಃ ಕೃತ್ವಾ. ಹಿರಿಯರ ಮಾತಿನಲ್ಲಿ ಹೇಳಿದರೆ, "ಯತ್ರ ಯತ್ರ ಮನೋ ಮದೀಯಂ ತತ್ರತತ್ರ ಪದಂ ತ್ವದೀಯಂ"–ನನ್ನ ಮನಸ್ಸು ಹೋದಹೋದಲ್ಲೆಲ್ಲಾ ನಿನ್ನ ಪದವಿರಲಿ. ಲೋಕವೆಲ್ಲ ವಿಷ್ಣುಪದಂ.

ನಾಮದೇವನ ಕಥೆಯನ್ನು ನೋಡಿ. ಆತ ಪುಣ್ಯಾತ್ಮ. ಕೃಷ್ಣನನ್ನು ಸಾಕ್ಷಾತ್ಕರಿಸಿಕೊಂಡು ವಿಹಾರ ಶಯ್ಯಾಸನ ಭೋಜನಾದಿಗಳಲ್ಲಿ ಕೃಷ್ಣನ ಒಡನಾಡಿಯಾದವನು. ಗೋರಾ ಕುಂಬಾರನ ಮನೆಯಲ್ಲಿ ಭಕ್ತರೆಲ್ಲಾ ಸೇರಿದ್ದಾರೆ. ಜ್ಞಾನದೇವರು ಗೋರನನ್ನು ಕರೆದು "ಈ ಭಕ್ತರಲ್ಲಿ ಯಾರು ಪಕ್ವ ? ಯಾರು ಅಪಕ್ವ ? ನೋಡು" ಎಂದರಂತೆ, ಆತನು ತಟ್ಟುಮಣೆ ತೆಗೆದುಕೊಂಡು ಎಲ್ಲರ ತಲೆಯ ಮೇಲೂ ತಟ್ಟುತ್ತಾ ಬಂದ. ನಾಮದೇವನು, "ಸಣ್ಣಗೆ ತಟ್ಟಪ್ಪಾ" ಎಂದ. ಆತನೂ ಸಣ್ಣಗೇ ತಟ್ಟಿದ. ಎಲ್ಲಾ ಆದಮೇಲೆ ನಾಮದೇವನನ್ನು

ತೋರಿಸಿ "ಇದೊಂದು ಅಪಕ್ವ" ಎಂದ. ನಾಮದೇವನು ಅಳುತ್ತಾ ಕೃಷ್ಣನಲ್ಲಿಗೆ ಹೋದ. ಕೃಷ್ಣನು "ಹೌದು ನಿನಗೆ ಗುರೂಪದೇಶವಾಗಿಲ್ಲ. ಅದರಿಂದ ನೀನು ಅಪಕ್ವ" ಎಂದು, "ನಿನ್ನ ಗುರುವು ಇಂಥ ಕಡೆ ಇದ್ದಾನೆ ಹೋಗು" ಎಂದು ಕಳುಹಿಸಿದ.

ನಾಮದೇವನು ಗುರುವನ್ನು ಹುಡುಕಿಕೊಂಡು ಹೊರಟ. ದಾರಿಯಲ್ಲಿ ಒಂದು ನಾಯಿಯು ಅವನ ಬುತ್ತಿಯಲ್ಲಿದ್ದ ರೊಟ್ಟಿಗೆ ಬಾಯ ಹಾಕಬಂತು. ಅದನ್ನು ಹೊಡೆದೋಡಿಸಿ ಮುಂದಕ್ಕೆ ಹೋದ.

ನಾಮದೇವನು ಗುರುದೇವನ ಬಳಿಗೆ ಹೋದ. ಆತ ಶಿವಲಿಂಗದ ಮೇಲೆ ಕಾಲು ಚಾಚಿಕೊಂಡು ಮಲಗಿದ್ದಾನೆ. ನಾಮದೇವನಿಗೆ ಹೇಗಾಗಿರಬೇಕು ? ಆದರೂ ಕೃಷ್ಣನ ಮಾತು. ಅದರಿಂದ ಹೇಳಿದ : "ಸ್ವಾಮಿ, ತಾವು ದೊಡ್ಡವರು. ಹೀಗೆ ಶಿವಲಿಂಗದ ಮೇಲೆ ಕಾಲಿಟ್ಟು ಮಲಗುವುದೇ ?" ಎಂದ. ಅವರೂ "ಶಿವ ಶಿವಾ, ನಾನು ಮುದುಕ ಮಗೂ, ಶಿವಲಿಂಗವಿಲ್ಲದ ಕಡೆ ನನ್ನ ಕಾಲು ಇಡಪ್ಪ" ಎಂದರು. ನಾಮದೇವನು ಅವರ ಕಾಲುಹಿಡಿದೆತ್ತಿ ಇನ್ನೊಂದೆಡೆ ಇಟ್ಟ. ಅಲ್ಲಿ ಶಿವಲಿಂಗ ಕಾಣಿಸಿತು. ಹೀಗೆ ಎಳೆದಾಡಿದ. ಎಲ್ಲಿ ಅವರ ಕಾಲಿಟ್ಟರೂ ಅಲ್ಲಿ ಶಿವಲಿಂಗ. ಅವನೇನು ಮಾಡಬೇಕು ? ಆಗ ಶರಣಾದ. ಅವರು ಹೇಳಿದರು: "ಹುಚ್ಚ, ಶಿವನಿಲ್ಲದ ಎಡೆಯಿಲ್ಲ" ಎಂದರು. ಅವನಿಗೆ ಆಗ ಅರ್ಥವಾಯಿತು. "ತ್ವಯಿ ಮಯಿ ಸರ್ವತ್ರೈಕೋ ವಿಷ್ಣುಃ" ಎಂದು ಅವನಿಗೆ ಗೊತ್ತಿತ್ತು. "ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣ ಸ್ಥಿತಃ" ಅವನಿಗೆ ಗೊತ್ತಿರಲಿಲ್ಲವೆ ? ಆದರದು ಇಂದ್ರಿಯ ಗೋಚರವಾಗಿರಲಿಲ್ಲ. ಇಂದ್ರಿಯ ಮನೋ ಬುದ್ಧಿಗಳು ಕಾಮಾಧೀನವಾಗಿ ಇವನನ್ನು ದಾರಿ ದಾರಿ ಹಿಡಿಸುತ್ತವೆ. ಪೂರ್ಣವನ್ನು ಅಪೂರ್ಣವಾಗಿ ತೋರಿಸುತ್ತವೆ. ಅವ್ಯಕ್ತವನ್ನು ವ್ಯಕ್ತವೆನ್ನುತ್ತವೆ. ಆದೂ ತಪ್ಪುವುದು ಯಾವಾಗ ? ತಾನು ಪಡೆದ ಅನುಭವವನ್ನು ಇಂದ್ರಿಯಗಳೂ ಒಪ್ಪಿಕೊಂಡಾಗ. ಆಯಿತು. ಇಂತಹ ಅನುಭವವನ್ನು ಪಡೆದ ನಾಮದೇವನೇನಾದ? ಹಿಂತಿರುಗಿ ಬರುವಾಗಲೂ ನಾಯಿಯು ಬುತ್ತಿ

ಯನ್ನು ಕದಿಯಲು ಬಂತು. ಒಂದು ರೊಟ್ಟಿಯನ್ನು ತೆಗೆದುಕೊಂಡಿತು. ನಾಮದೇವನು ರೊಟ್ಟಿಗೆ ಬೆಣ್ಣೆಕೊಡುವುದಕ್ಕೆ ಹೋದ.

ಇದು ನಿಧಿಧ್ಯಾಸನ. ತನ್ನಲ್ಲಿರುವ ಆತ್ಮನು ಎಲ್ಲ ಕಡೆಯಲ್ಲಿಯೂ ಎಲ್ಲರಲ್ಲಿಯೂ ಇರುವನೆಂದು ನಂಬಿಕೆ ಬರುವಿಕೆ. ಇನ್ನೊಂದೆಡೆ ಬುದ್ಧಿಲೇಪನವಾಗುವುದು ಎಂಬುದನ್ನು ಕೃಷ್ಣನು ಹೇಳಿದ್ದಾನೆ. ಈಗ ನಮಗೆ ರಾಗದ್ವೇಷಗಳಿಂದ ಭಾವವು ಬುದ್ಧಿಲೇಪನವಾಗುತ್ತದೆ. ಅದು ನಮಗೆ ಗೊತ್ತು. ಕೋಪಬಂದರೆ ಕನಸಿನಲ್ಲಿಯೂ ಅದೇ ವಿಷಯವೇ ! ಮನಸ್ಸು ಬುದ್ಧಿಗಳಲ್ಲಿ ಅದೇ ಅದೇ ಆಗಿಹೋಗುತ್ತದೆ. ಅದು ಬುದ್ಧಿಲೇಪ. ಹಾಗೆಯೇ ನಾವು ಸಂಪಾದಿಸಿದ ಜ್ಞಾನವೂ ಬುದ್ಧಿ ಲೇಪವಾದರೆ, ಅನುಸಂತತವಾಗಿ ಅದು ಬುದ್ಧಿವೃತ್ತಿಯಾದರೆ, ಅದು ನಿಧಿಧ್ಯಾಸನ. ಸಂಗೀತದ ಖಯಾಲಿಯವರು ಯಾವಾಗಲೂ ಕುಯ್' ಎಂದು ರಾಗವನ್ನು ಹಾಡಿಕೊಳ್ಳುವಂತೆ, ಯಾವಾಗಲೂ "ಸದಾಶಿವನಿಗೆ ಅದೇ ಬುದ್ಧಿ" ಆಗಬೇಕು. ಆಗ ನಿಧಿಧ್ಯಾಸನ.

"ಪ್ರಾಣಾನಾಂ ಗ್ರಂಥಿರಸಿ ರುದ್ರ"–ಎಂಬ ವಚನವನ್ನು ಸ್ಮರಿಸಿ. ಇಂದ್ರಿಯವೃತ್ತಿಗಳೆಲ್ಲ ಪ್ರಾಣವೃತ್ತಿಗಳು. ಪ್ರಾಣವೃತ್ತಿಗಳು ಎರಡು ಸೇರಿದೆಡೆ ರುದ್ರ. ಪ್ರಾಣಿ ಪ್ರಾಣಿಯ ಇಂದ್ರಿಯವೃತ್ತಿಯೂ ಪ್ರಾಣವೇ! ಆದ್ದರಿಂದ ರುದ್ರರು ಎಷ್ಟು ಅಸಂಖ್ಯಾತರು ! ಈ ಅನೇಕ ವನ್ನು ಏಕವನ್ನಾಗಿ ನೋಡಿದಾಗ ನಿಧಿಧ್ಯಾಸನ.

ಗೀತೆಯಲ್ಲಿ ಅರ್ಜುನನಿಗೆ ನಾಲ್ಕನೆಯ ಅಧ್ಯಾಯದಲ್ಲಿ ಜ್ಞಾನ ವನ್ನು ಹೇಳಿದ ಸ್ವಾಮಿ. ಏಳನೆಯ ಅಧ್ಯಾಯದಲ್ಲಿ ಮತ್ತೆ ಜ್ಞಾನಂ ಸವಿಜ್ಞಾನಂ ಹೇಳಿದ. ಮತ್ತೆ ಅದೇ ಅಧ್ಯಾಯದ ಕೊನೆಯಲ್ಲಿ ಜ್ಞಾನ ವಿಜ್ಞಾನದ ಫಲವನ್ನು ಹೇಳಿದ: "ಜರಾ ಮರಣಮೋಕ್ಷಾಯ" ನನ್ನನ್ನು ಆಶ್ರಯಿಸುವರು. ಅವರು ಬ್ರಹ್ಮ ತದ್ವಿದುಃ ಬ್ರಹ್ಮವನ್ನು ತಿಳಿಯುವರು. ಅದನ್ನು ಕೃತ್ಸ್ನಂ ಎಂದರೆ ಪೂರ್ಣವಾಗಿ ತಿಳಿಯಬೇಕು. ಉಪನಿಷತ್ತಿನಲ್ಲಿ "ಯಸ್ಮಿನ್ ವಿಜ್ಞಾತೇ ಸರ್ವಂ ವಿಜ್ಞಾತಂ ಭವತಿ"— ಯಾವುದನ್ನು ತಿಳಿದರೆ ಎಲ್ಲವೂ ತಿಳಿಯುವುದೋ ಎಂದು ಹೇಳಿದ ವಚನ

ವನ್ನೂ ಇಲ್ಲಿ ಕೃತ್ಸ್ನಂ ಎಂಬ ಮಾತಿನಿಂದ ಹೇಳಿದ ಸ್ವಾಮಿ. ಅದೇನು ಹಾಗೆಂದರೆ? "ಅಧ್ಯಾತ್ಮಂ, ಅಖಿಲಂ ಕರ್ಮ, ಸಾಧಿಭೂತಂ, ಸಾಧಿದೈವಂ, ಸಾಧಿಯಜ್ಞಂ–ತೇ ವಿದುಃ ಯುಕ್ತ ಚೇತಸಃ"–ಅಧಿಭೂತನೂ ಅಧಿದೈವನೂ ಅಧ್ಯಾತ್ಮನೂ ಆದ ನನ್ನನ್ನು ತಿಳಿಯಬೇಕು. ಕರ್ಮವನ್ನು ಅಖಿಲವಾಗಿ ಎಂದರೆ ಹೇಗೆ ಮಾಡಿದರೆ ಸಾಧಿಯಜ್ಞವಾಗುವುದು ಎಂಬುದನ್ನು ತಿಳಿದರೆ ಆಗ ಜ್ಞಾನ ವಿಜ್ಞಾನ ಪೂರ್ಣವಾಯಿತು.

ಅರ್ಜುನನಿಗೆ ತಿಳಿಯಲಿಲ್ಲ. "ಕಿಂ ಬ್ರಹ್ಮ ತದಧ್ಯಾತ್ಮಂ ಕಿಂ ಕರ್ಮ ಪುರುಷೋತ್ತಮ" ಎಂದು ಕೇಳಿದ. ಭೂತ್ವಾ "ಭೂತ್ವಾಪ್ರಲೀಯತೇ" ಆಗಿ ಹೋಗುವ ಭೂತಗ್ರಾಮ–ಅದು ಕ್ಷರಪುರುಷ–ಅದು ಸಾಧಿಭೂತ. ಅಲ್ಲಿರುವ ಕ್ಷೇತ್ರಜ್ಞ, ಅಕ್ಷರಪುರುಷ, ಅವನು ಸಾಧಿದೈವ–ಅವರಿಬ್ಬರಿಗೂ ಅತೀತನಾದ ಪುರುಷೋತ್ತಮನಾದ ನಾನು ಅಧಿಯಜ್ಞ, ನಾನು ಈ ಲೋಕದಲ್ಲಿ ಹರಡಿರುವುದೇ ವಿಭೂತಿ. ಅದೇ ಅಧ್ಯಾತ್ಮ ಎಂದು ವಿವರವನ್ನು ಹೇಳಿ, ನಶ್ಯತ್ಸು ನ ವಿನಶ್ಯತಿ, ಅಳಿಯುವುದರಲ್ಲಿ ಅಳಿಯದಿರುವುದು ಬ್ರಹ್ಮ ಎಂದು ಮುಗಿಸಿದ, ಎಚ್ಚರಿಕೆಯನ್ನು ಕೊಟ್ಟ "ನಚ ಮತ್ಸ್ಥಾನಿ ಭೂತಾನಿ ಪಶ್ಯ ಮೇ ಯೋಗಮೈಶ್ವರಂ"–ಅಧಿಭೂತ ಅಧಿದೈವಗಳನ್ನು ನೋಡುತ್ತಾ ಕುಳಿತಿರಬೇಡ. ಅದೆಲ್ಲ ಆಗಿರುವ ನನ್ನ ಅಧ್ಯಾತ್ಮವನ್ನು, ನನ್ನ ವಿಭೂತಿಯನ್ನು ನೋಡು. "ಮಯಾ ತತಮಿದಂ ಸರ್ವಂ"-ಇಲ್ಲಿರುವ ಎಲ್ಲದರಲ್ಲಿಯೂ ಇರುವ ನನ್ನನ್ನು ನೋಡು ಎಂದ. ಅರ್ಥಾತ್, ಪರ ಅಪರ, ಕಾರಣವಾದದ್ದು ಪರ, ಕಾರ್ಯವಾದದ್ದು ಅಪರ, ಎರಡೂ ನಾನೇ ಎಂಬುದನ್ನು ಕಂಡರೆ ಬದುಕಿದೆ ಎಂದೂ ಬುದ್ಧಿ ಹೇಳಿದ. ಅದರಿಂದ ನಿನ್ನ ನಿಧಿಧ್ಯಾಸನ ಹೇಗಿರಬೇಕು ಬಲ್ಲೆಯಾ? "ಮನ್ಮನಾ ಭವ, ಮದ್ಭಕ್ತೋ ಭವ,ಮದ್ಯಾಜೀ ಭವ, ಮಾಂ ನಮಸ್ಕುರು"–ನನ್ನಲ್ಲಿ ಮನಸ್ಸಿಡು, ನನ್ನ ಭಕ್ತನಾಗು, ನನಗಾಗಿ ಕರ್ಮ ಮಾಡು, ನನಗೆ ನಮಸ್ಕಾರ ಮಾಡುತ್ತಿರು ಎಂದು ಬೋಧಿಸಿದ.

ಇದಾದ ಮೇಲೆ ವಿಭೂತಿಯೋಗ. ಸ್ವಾಮಿಯು ಅಲ್ಲಿ ಹೀಗೆ ಇಲ್ಲಿ ಹೀಗೆ ಎಂದು ಅಷ್ಟು ಹೇಳಿ, "ಯದ್ಯದ್ ವಿಭೂತಿಮತ್ ಸತ್ವಂ ಶ್ರೀ

ಮದೂರ್ಜಿತಮೇವವಾ। ತತ್ತದೇವಾವಗಚ್ಛತ್ವಂ ಮಮ ತೇಜೋಂಶ ಸಂಭವಂ ”-ವಿಭೂತಿಮತ್ ಎಂದರೆ ದೈವಕೃಪೆಯಿಂದ ದೊಡ್ಡದು ಆದುದು: ಶ್ರೀಮತ್ ಎಂದರೆ ತಂದೆತಾಯಿಗಳಿಂದ ಬಂದುದು : ಊರ್ಜಿತವೆಂದರೆ ತನ್ನ ಸಾಹಸದಿಂದ ಸಂಪಾದಿಸಿದುದು ಇದು ಮೂರೂ ನನ್ನ ಅಂಶಗಳು. ಅಷ್ಟೇಸು ? ಈ ಲೋಕವೆಲ್ಲ ನನ್ನ ಒಂದು ಅಂಶ ಎಂದ.

ಹಾಗೆ ಶ್ರವಣವಾದ ಅಧ್ಯಾತ್ಮ ಜ್ಞಾನದಿಂದ ಅರ್ಜುನನಿಗೆ ಮೋಹವು ಕಳೆಯಿತು. ಆಗ ಆ ಜ್ಞಾನ ಪ್ರಚೋದಕವಾಗಿ “ ದೇವಾ ನಿನ್ನ ವಿಶ್ವರೂಪವನ್ನು ತೋರಿಸು ” ಎಂದು ಕೇಳಿಸಿತು. ಶ್ರೀಭಗವಂತನು ಹೊಸಕಣ್ಣು ಕೊಟ್ಟು ನೋಡು ಎಂದ. ಜೀವ ತಾನು ಸಣ್ಣ ಎಂದು ಕೊಂಡು ನೋಯುತ್ತಿರುವವನು ಆ ವಿಶ್ವರೂಪವನ್ನು ಕಂಡು ಹೆದರಿದ. ನಾನಾವಿಧ, ನಾನಾವರ್ಣ, ನಾನಾಕೃತಿ, ಆದ ಆ ರೂಪಗಳನ್ನೆಲ್ಲಾ ಒಂದೆಡೆ ಕಂಡು ಅವನಿಗೆ ಎದೆಯೊಡೆಯಿತು. “ಕೋ ಭವಾನುಗ: ರೂಪಃ” ಎಂದು ಕೇಳಿದ “ನಿನ್ನನ್ನು ಕಂಡು ನಾನು ಹೆದರಿದೆ. “ಪ್ರವ್ರಥಿತಂ ಮನೋಮೇ, ನನ್ನ ಮನಸ್ಸು ಬೆದರಿದೆ” ಎಂದ. ಈ ಲೋಕದಲ್ಲಿ ತಾನೊಬ್ಬ ಎಂದು ಮರೆಯದಂತೆ ಅರಿತ. ಆಗ ಸ್ವಾಮಿ ಉಪದೇಶಮಾಡಿದ. “ನಿಮಿತ್ತಮಾತ್ರಂ ಭವ ಸವ್ಯಸಾಚಿ.” ನೀನೊಂದು ನಿಮಿತ್ತ, ಆಗಬೇಕಾದುದೆಲ್ಲ ಆಗಿದೆ. ಅದರಿಂದ ನೀನುಮಾಡಬೇಕಾದುದನ್ನು ಮಾಡಿ ಕೃತಾರ್ಥನಾಗು. ನೀನು ಮಾಡುವುದನ್ನು ಮತ್ಕರ್ಮ ಎನ್ನು. ಆಗ ಅದು ಯಜ್ಞವಾಗಿ ನಿನ್ನನ್ನು ಮಾತ್ರವಲ್ಲ, ಲೋಕವನ್ನೆಲ್ಲಾ ಉದ್ಧರಿಸುವುದು ಎಂದ. ಅರ್ಜುನನ ಅಹಂಕಾರವಡಗಿತು.

ನಮಗೂ ಅಹಂಕಾರ ಅಡಗಿತು ಅನ್ನಿ-ಆಗ ನಾವೇನು ಆಗುವೆವು ? ನಿಮಿತ್ತಮಾತ್ರರಾಗುವೆವು. ಆಗ The whole world is a stage and we are actors on it ಎಂಬುದು ಮನಸ್ಸಿಗೆ ಬರುವುದು. ಆಗ ನಾವು ಆ ಮಹಾಪ್ರಭುವಿನ ಕಾರ್ಯಕಾರಿಗಳು. ಆಗ ಕೃಷ್ಣ ಹೇಳದಿದ್ದರೂ ನಾವು ಹೇಳುತ್ತೇವೆ : ತ್ವತ್ಕರ್ಮಕೃತ್, ತ್ವತ್ಪ

ರಮಃ, ತ್ವದ್ಭಕ್ತಸ್ಸಂಗವರ್ಜಿತಃ, ನಿರ್ವೈರಸ್ಸರ್ವ ಭೂತೇಷು''- ನಾವು ಆತನ ಕರ್ಮಕಾರಿಗಳು : ಆತನಿಗಿಂತ ಇನ್ನಿಲ್ಲ ಎನ್ನುವವರು : ಆತನ ಭಕ್ತರು : ಆತನಲ್ಲದ ಬೇರೆ ಏನೂ ಬೇಡದವರು : ಆತನ ದಾದ ಭೂತಗಳೆಂದು ಎಲ್ಲೂ ವೈರವಿಲ್ಲದವರು

ಇನ್ನು ಮುಂದಿನ ವೈಖರಿಯೇ ಬೇರೆ. ಹೀಗೆ ಪರ ಅಪರ ದರ್ಶನವಾದಮೇಲೆ, ತನಗೂ ಆತನಿಗೂ ಇರುವ ಸಂಬಂಧವನ್ನು ಕುರಿತು ಚಿಂತಿಸುವುದೇ ಉಪಾಸನ. ಅವನು ಬೇರೆ ನಾನು ಬೇರೆ ಎಂದರೆ ಅದು ದ್ವೈತಭಕ್ತಿ, ಆತನಲ್ಲಿ ನಾನೊಂದು ಎಂದರೆ ವಿಶಿಷ್ಟಾದ್ವೈತಭಕ್ತಿ, ಆತನ ಭಾಗ ನಾನುಎಂದರೆ ಅದ್ವೈತಭಕ್ತಿ, ಅದು ಅವರ ವರಭಾಗ್ಯ, ಅಂತೂ ಆತ ದೊಡ್ಡವ ಎಂದಮೇಲೆ ಮನಸ್ಸು ಆತನ ಕಡೆಗೇ ಎಳೆಯುತ್ತದೆ. ಭಕ್ತಭಾವ ಪೂರ್ಣವಾದುದರ ಗುರುತೇನು ? ಎಂದರೆ ''ಯಸ್ಮಾನ್ನೋದ್ವಿಜತೇ ಲೋಕೋ ಲೋಕಾನ್ನೋದ್ವಿಜತೇ ಚ ಯಃ ‖ ಹರ್ಷಾಮರ್ಷಭಯೋದ್ವೇಗೈಃ ಮುಕ್ತಃ''-ಅವನಿಂದ ಲೋಕಕ್ಕೆ ಹೆದರಿಕೆಯಿಲ್ಲ : ಲೋಕದಿಂದ ಅವನಿಗೆ ಹೆದರಿಕೆಯಿಲ್ಲ. ಹರ್ಷ, ಕ್ರೋಧ, ಭಯ ಮೊದಲಾದ ಉದ್ವೇಗಗಳು ಅವನಿಗಿಲ್ಲ ಇಂತಹ ಭಕ್ತಿಯೊಂದರಿಂದಲೇ ನನ್ನನ್ನು ಪಡೆಯುವುದು. ಇದೇ ಭಕ್ತಿಯೇ ಉಪಾಸನೆ ''ಯೆಂದ.

ಹೀಗೆ ಕರ್ಮ ಜ್ಞಾನ ಉಪಾಸನೆಗಳನ್ನು ಹೇಳಿ, ಮತ್ತೆ ಏಕಾನೇಕ ಸ್ವರೂಪವನ್ನು ತಿಳಿಯುವುದೇ ಜ್ಞಾನದ ಪರಿಪೂರ್ಣತೆ ಎಂದು ಹದಿಮೂರನೆಯ ಅಧ್ಯಾಯವನ್ನು ಹೇಳಿದ. ''ಕ್ಷೇತ್ರಕ್ಷೇತ್ರಜ್ಞಯೋರ್ಯತ್‌ಜ್ಞಾನಂ ತತ್‌ಜ್ಞಾನಂ ಮತಂ ಮಮ''-ಕ್ಷೇತ್ರ ಕ್ಷೇತ್ರಜ್ಞರನ್ನು ತಿಳಿಯುವುದೇ ಜ್ಞಾನ. ಶರೀರವು ಕ್ಷೇತ್ರ. ಅದು ಅನೇಕ. ಆ ಅನೇಕದಲ್ಲಿರುವ, ''ಕ್ಷೇತ್ರಜ್ಞಂ ಚಾಪಿ ಮಾಂ ಸಿದ್ಧಿ ಸರ್ವಕ್ಷೇತ್ರೇಷು ಭಾರತ'' -ಸರ್ವ ಕ್ಷೇತ್ರಗಳಲ್ಲಿಯೂ ಇರುವ ಕ್ಷೇತ್ರಜ್ಞನು ನಾನೇ ಎಂದು ತಿಳಿ. ಎಂದು ಮತ್ತೆ ಜ್ಞಾನಜ್ಞೇಯಗಳನ್ನು ಹೇಳುತ್ತಾನೆ. ''ಅಧ್ಯಾತ್ಮಜ್ಞಾನ ನಿತ್ಯತ್ವಂ ತತ್ವಜ್ಞಾನಾರ್ಥದರ್ಶನಂ ಏತತ್‌ಜ್ಞಾನಂ ''-ಎಲ್ಲೆಲ್ಲಿಯೂ

ಸ್ವಾಮಿಯುಂಟು, ಎಲ್ಲವೂ ಆತನೇ! "ಸರ್ವಂ ಖಲ್ವಿದಂ ಬ್ರಹ್ಮ" ಎಂಬ ಜ್ಞಾನವು ಯಾವಾಗಲೂ ಇರಬೇಕು. ಅಷ್ಟೇ ಅಲ್ಲ. ಏಕಾನೇಕ ಎಂಬ ತತ್ವವನ್ನು ಯಾವಾಗಲೂ ಅರಿತು ನೋಡುತ್ತಿರಬೇಕು. ಅದು ಜ್ಞಾನ. ದೇಹವತ್ತಾಗಿರುವಾಗ, ಜ್ಞಾತಾ ಇರುವವರೆಗೂ, ತ್ರಿಪುಟಿ ಬಿಟ್ಟದ್ದಲ್ಲ. ಅದರಿಂದ ಜ್ಞಾನಜ್ಞೇಯಗಳೆರಡೂ ಇದ್ದೇ ಇವೆ. ಅವು ಮೂರೂ ಇದ್ದರೆ ಒಟ್ಟಿಗೆ ಇರಬೇಕು. ಹೋದರೆ ಒಟ್ಟಿಗೆ ಹೋಗಬೇಕು. ಅದು ಹದಿಮೂರನೆಯ ಅಧ್ಯಾಯ.

ಹದಿನಾಲ್ಕರಲ್ಲಿ ಕ್ಷೇತ್ರಗಳು ಅನೇಕವಾಗುವುದು ಏಕೆ ಎಂಬುದನ್ನು ಹೇಳಿದ. "ಅದೆಲ್ಲ ಗುಣಗಳಿಂದ. ಈ ಗುಣ ಸಂಸರ್ಗವೇ ಸದಸದ್ಯೋನಿಗಳಲ್ಲಿ ಜನ್ಮವೆತ್ತಲೂ ಕಾರಣ. ನಿರ್ಗುಣನಾದವನು ಸಗುಣನಾದಾಗ ಏಕ ಅನೇಕವಾಯಿತು. ಮತ್ತೆ ಗುಣಾತೀತನಾದರೆ ಮತ್ತೆ ಏಕದೊಡನೆ ಸೇರಿಕೊಂಡ. ಇದು ಏಕಾನೇಕದ ರಹಸ್ಯ" ಎಂದ.

ಹದಿನೈದನೆಯ ಅಧ್ಯಾಯದಲ್ಲಿ ಲೋಕ, ಪುರುಷೋತ್ತಮ ಎರಡನ್ನೂ ಎದುರಿಗಿಟ್ಟು ಸ್ವಾಮಿ ತೋರಿಸುತ್ತಾನೆ. "ಈ ಲೋಕದಲ್ಲಿರುವುದು ಎಂದರೆ, ಅಕ್ಷರನು ಕ್ಷರದಲ್ಲಿ ಸೇರಿಕೊಂಡಿರುವುದು. ಯಾವಾಗ ಅಕ್ಷರನು ತಾನು ಕ್ಷರನೆಂದುಕೊಳ್ಳುತ್ತಿರುವುದು ತಪ್ಪಿ ಪುರುಷೋತ್ತಮನ ಕಡೆಗೆ ತಿರುಗುತ್ತಾನೋ ಆಗ ಆತನು ಸರ್ವವಿತ್- ಹಾಗಾಗಬೇಕಾದರೆ ಜ್ಞಾನ ಚಕ್ಷುಸ್ ಆಗಬೇಕು. ಎಂದರೆ, ಜ್ಞಾನ ಚಕ್ಷುಸ್ ಆದಂತೆ ಜ್ಞಾನಶ್ರೋತ್ರವೂ ಆಗಬೇಕು. ಆಗ ಯದ್ಯತ್ ಪಶ್ಯತಿ ನೇತ್ರಾಭ್ಯಾಂ. ಯದ್ಯತ್ ಶೃಣೋತಿ ಕರ್ಣಾಭ್ಯಾಂ, ಪಶ್ಯತಿ ಶೃಣೋತಿ ಕ್ರಿಯೆಗಳೆರಡಕ್ಕೂ ಕರ್ತೃಕರ್ಮಗಳೆರಡೂ ಆತ್ಮನೇ! ಕಿವಿಯಲ್ಲಿದ್ದು ಕೇಳುವವನೂ ಆತ್ಮ: ಕಿವಿ ಕೇಳುವುದೂ ಆತ್ಮನನ್ನೇ ಎಂಬ ಭಾವ ಮೂಡಿದಾಗ-ಅದು ಜ್ಞಾನಶ್ರೋತ್ರವಾಯಿತು. ಹಾಗೆಯೇ, ಹೀಗೆ ಪುರುಷೋತ್ತಮನನ್ನು ಅರಿತವನು ಸರ್ವವಿತ್ ಮಾತ್ರವಲ್ಲ. ಸರ್ವಭಾವೇನ ಮಾಂ ಭಜತಿ—ಅವನು ಹೇಗೇ ಇರಲಿ, ಏನೇ ಮಾಡಲಿ,

ಅವನು ಮಾಡುವುದು ನನ್ನ ಪೂಜೆ. ಏಕೆಂದರೆ, "ಸರ್ವಸ್ಯ ಚಾಹಂ ಹೃದಿ ಸನ್ನಿವಿಷ್ಟಃ"-ಎಲ್ಲರ ಅರ್ಥಾತ್ ಅಂತಹ ಭಕ್ತನ ಹೃದಯದಲ್ಲಿದ್ದು ಪ್ರೇರೇಪಿಸುವವನೂ ನಾನೇ! ಅಹಂ ವೈಶ್ವಾನರಃ, ವೈಶ್ವಾನರನಾಗಿ ಅವನಲ್ಲಿದ್ದು ಊಟಮಾಡುವವನೂ ನಾನೇ! ಅದರಿಂದ, ಸರ್ವಭಾವ ದಿಂದಲೂ ಅವನು ನನ್ನವನೇ ಆದ್ದರಿಂದ ಅವನು ಮಾಡಿದುದೆಲ್ಲ ನನ್ನ ಪೂಜೆ"ಯೆಂದು ಸ್ವಾಮಿಯು ಒಪ್ಪಿಕೊಳ್ಳುತ್ತಾನೆ. ಲೋಕದಲ್ಲೂ ಹೀಗೆ ಅಲ್ಲವೇನು ? ನಮಗೆ ಬೇಕಾದವರು ನಮ್ಮನ್ನು ಒದ್ದರೂ ಹಿತ ವಲ್ಲವೇನು ?

ಇನ್ನು ಹದಿನಾರನೆಯ ಅಧ್ಯಾಯ. "ಲೋಕದಲ್ಲಿ ಈಶ್ವರನ ಕಡೆಗೆ ತಿರುಗಿದವರು ಕೆಲವರು: ಬೆನ್ನುಮಾಡಿದವರು ಇನ್ನು ಕೆಲ ವರು. ಇದೇ ಲೋಕದ ಸ್ವಭಾವ" ಎಂದು ಶ್ರೀಕೃಷ್ಣನ ಮತ. ಲೋಕ ಸೃಷ್ಟಿಯಾದಾಗಲೇ ಈ ದೈವಾಸುರ ಭೇದ ಬಂತು. ಅದಕ್ಕಾಗಿ ಯೋಚಿಸಬೇಕಾಗಿಲ್ಲ. ಕನ್ನಡಿಯಲ್ಲಿ ನೋಡಿಕೊಂಡು ಸಿಂಗರಿಸಿ ಕೊಳ್ಳುವಂತೆ, ಪ್ರತಿಯೊಬ್ಬನೂ ಗೀತೆಯಲ್ಲಿ ಹೇಳಿರುವ ದೈವಾಸುರ ಸಂಪತ್ತಿನ ಲಕ್ಷಣಗಳನ್ನು ನೋಡಿಕೊಳ್ಳಲಿ. ಬೇಕಾದವನು ತಿದ್ದಿ ಕೊಳ್ಳಲಿ. ಇತರರನ್ನು ತಿದ್ದುವುದಕ್ಕಿಂತ ತನ್ನನ್ನು ತಾನು ತಿದ್ದಿಕೊಳ್ಳು ವುದು ಹೆಚ್ಚಿನ ಕೆಲಸ. "ನಬುದ್ಧಿಭೇದಂ ಜನಯೇದಜ್ಞಾನಾಂ ಕರ್ಮಸಂ ಗಿನಾಂ"—ತಿಳಿಯದ ಕರ್ಮಿಗಳಿಗೆ ಏನೇನೋ ಹೇಳಿ ಬುದ್ಧಿ ಕೆಡಿಸ ಬಾರದು. ಆದರೆ ಸಹಧರ್ಮಿಗಳು ಸಿಕ್ಕಿದರೆ, ಬೋಧಯಂತಃ ಪರಸ್ಪರಂ-ಒಬ್ಬರಿಗೊಬ್ಬರು ಹೇಳಬೇಕು. "ತುಷ್ಯಂತಿ ಚ ರಮಂತಿ ಚ." ಹಾಗೆಮಾಡಿದರೇನೇ ತೃಪ್ತಿ: ಹಾಗೆಮಾಡಿದರೇನೇ ಆನಂದ.

ಆಯಿತು ದೈವ ಅಸುರ ಲಕ್ಷಣಗಳನ್ನು ನೋಡಿಕೊಂಡರೆ ಸಾಕೇ ? ಎಂದರೆ, ಅದಕ್ಕಿಂತ ಹೆಚ್ಚಾಗಿ ನೀನೇನೆಂದುಕೊಂಡಿದ್ದೀಯೆ ಅದು ಮುಖ್ಯ. "ಯೋ ಯಚ್ಛ್ರದ್ಧಃ ಸ ಏವ ಸಃ"—ಯಾರು ತಾನು ಏನೆಂದುಕೊಂಡರೆ ಅದೇ ಅವನು. ಅದರಿಂದ ತನ್ನನ್ನು ತಾನು ತಿಳಿದುಕೊಳ್ಳಬೇಕೆಂದಿರುವವನು ಮೊದಲು ತನ್ನ ಶ್ರದ್ಧೆಯನ್ನು ಪರೀ

ಕ್ಷಿಸಿಕೊಳ್ಳಬೇಕು. ಸಾತ್ವಿಕ ರಾಜಸ ತಾಮಸಗಳಲ್ಲಿ ತನ್ನ ಶ್ರದ್ಧೆಯು ಯಾವುದು ಎಂಬುದನ್ನು ನೋಡಿಕೊಂಡು ಉತ್ತಮಪಡಿಸಿಕೊಳ್ಳಬೇಕು. ಶ್ರದ್ಧೆಯಿದೆಯೆಂದು ತೋರಿದಂತೆ ಮಾಡುವಂತಿಲ್ಲ ಶ್ರದ್ಧೆಯೆಂದರೆ ಶಾಸ್ತ್ರ ವಿಧಿಪೂರ್ವಕವಾಗಿರಬೇಕು. ಅದಿಲ್ಲದಿದ್ದರೆ, ಅದು ಅಶ್ರದ್ಧೆ : ಕಾಮಪ್ರೇರಿತವಾದುದು.

ಇದಿಷ್ಟೂ ಹೇಳಿದಮೇಲೆ, ಸ್ವಾಮಿಯು ಹದಿನೆಂಟನೆಯ ಅಧ್ಯಾಯದಲ್ಲಿ ಎಲ್ಲವನ್ನೂ ಉಪಸಂಹಾರಮಾಡುತ್ತಾನೆ. "ಜ್ಞಾನಸ್ಯ ಯಾ ನಿಷ್ಠಾ ಪರಾ"-ಜ್ಞಾನವಾದಮೇಲೆ ಮಾಡಬೇಕಾದುದು ಏನೂ ಇಲ್ಲ ಎನ್ನಬಾರದು. ಬ್ರಹ್ಮತ್ವವನ್ನು ಪಡೆಯುವವರೆಗೂ ಇಂದ್ರಿಯ ಮನೋಬುದ್ಧ್ಯಹಂಕಾರಗಳನ್ನು ದಮನಮಾಡಿಡಬೇಕು. ಬ್ರಹ್ಮೀಭೂತನಾದ್ದಕ್ಕೆ ಗುರುತೇನು ? "ನ ಶೋಚತಿ ನ ಕಾಂಕ್ಷತಿ"–ಅವನಿಗೆ ಶೋಕವಿಲ್ಲ: ಕಾಮವಿಲ್ಲ. ವೀತಶೋಕರಾಗನವನು. ಆಗ ಅವನು ಭಕ್ತ. ಭಕ್ತಿಯಿಂದಲೇ ಬ್ರಹ್ಮವು ಯಾವುದು ? ಎಷ್ಟುಮಟ್ಟಿನದು? ಎಂಬುದು ಅರ್ಥವಾಗುವುದು. ಆಗ ನನ್ನ ಪ್ರಸಾದವನ್ನು ಪಡೆದು ದಾಟುವನು. ಎಂದು ಗೀತೋಪದೇಶ ಅಥವಾ ಬ್ರಹ್ಮೋಪದೇಶಮಾಡಿ, ಕೊನೆಯ ಮಾತಾಗಿ ಹೇಳಿದ: "ಅಥ ಚೇತ್ತ್ವಮಹಂಕಾರಾನ್ನ ಶ್ರೋಷ್ಯಸಿ ವಿನಂಕ್ಷ್ಯಸಿ." ಅಹಂಕಾರ ವಶನಾಗಿ ಕೇಳದೆಹೋದರೆ, ನೀನು ನಾಶವಾಗುವೆ-ಅಬ್ಬಾ! ಎಂಥಾಮಾತು !

ಇಲ್ಲಿ ನಾವು ಇನ್ನೆರಡು ಮಾತು ಮನಸ್ಸಿಟ್ಟು ನೋಡಬೇಕು. ಈಶ್ವರನು ಎಲ್ಲರ ಹೃದಯದಲ್ಲೂ ಇದ್ದಾನೆ ಅರ್ಜುನ-ಎಂದ ಕೃಷ್ಣ. ಈಗ ನಮಗೆ ಬೇಕಾಗಿರುವುದು ಈ ಮಾತು. ಪರಸ್ಪರ ವಿಶ್ವಾಸವಿಲ್ಲದೆ ಒಬ್ಬರನ್ನೊಬ್ಬರು ಬೈದುಕೊಂಡು ತಿರುಗುವ ಈ ಕಾಲದಲ್ಲಿ ಎಲ್ಲರ ಹೃದಯದಲ್ಲೂ ಈಶ್ವರನಿದ್ದಾನೆ ಎಂಬ ಉಪದೇಶ ಅಮೃತಪ್ರಾಯವಾದುದು. ನಮ್ಮೆಲ್ಲಾ ರೋಗಕ್ಕೂ ಔಷಧವಿಲ್ಲದೆ. "ಈಶ್ವರ ನಮ್ಮ ಹೃದಯದಲ್ಲೂ ಇದ್ದಾನೆ: ಎದುರಿನವರ ಹೃದಯದಲ್ಲೂ ಇದ್ದಾನೆ; ನಾವು ಅವರಿಗೆ ತಪ್ಪಿ ನಡೆದರೆ, ಅದು ಅಲ್ಲಿರುವ ಈಶ್ವರನಿಗೆ

ದ್ರೋಹ: ಅವರು ನಮ್ಮಲ್ಲಿ ತಪ್ಪಿ ನಡೆಯಲು ಅವಕಾಶಕೊಟ್ಟರೆ ಅದೂ ನಮ್ಮಲ್ಲಿರುವ ಈಶ್ವರನಿಗೆ ದ್ರೋಹ" ಎಂಬ ಭಾವನೆ ಎಲ್ಲೆಲ್ಲೂ ಮೂಡಿ ಬಲಿಯಬೇಕು. ಆಗ " ಪರಸ್ಪರಂ ಭಾವಯಂತಃ ಶ್ರೇಯಃ ಪರಮವಾಪ್ಸ್ಯಥ "—ಒಬ್ಬರನ್ನೊಬ್ಬರು ಗೌರವಿಸಿ ಉತ್ತಮವಾದ ಶ್ರೇಯಸ್ಸನ್ನು ಪಡೆಯಿರಿ ಎಂಬ ಮಾತು ಸಾರ್ಥಕವಾಗುವುದು.

ಗೀತೆಯು ಹೀಗೆ ಪ್ರತಿಯೊಬ್ಬರೂ ತಾವು ತಾವು ಶುದ್ಧರಾಗಿ, ಕೃತಾರ್ಥರಾಗಿ, ಕ್ಷೀಣಕಲ್ಮಷರಾದ ಋಷಿಗಳಾಗಿ, ಪ್ರಭುವಿನ ದೂತರಾಗಿ, ಲೋಕೋದ್ಧಾರಕರಾಗುವ ಮಾರ್ಗವನ್ನು ಬೋಧಿಸುವುದು. " ಉದ್ಧರೇದಾತ್ಮನಾತ್ಮಾನಂ ನಾತ್ಮಾನಮವಸಾದಯೇತ್ "–ಆತ್ಮನನ್ನು ಆತ್ಮನಿಂದಲೇ ಎಂದರೆ, ತನ್ನನ್ನು ತನ್ನ ಪ್ರಯತ್ನದಿಂದಲೇ ಉದ್ಧರಿಸಿಕೊಳ್ಳಬೇಕು. ತಾನು ತನ್ನನ್ನು ಕೆಡಿಸಿಕೊಳ್ಳಬಾರದು" ಎಂಬ ಗೀತೋಪದೇಶ ಜನಕ್ಕೆ ಅರ್ಥವಾಗಲಿ: ಹಿಡಿಯಲಿ: ಎಲ್ಲರ ಆಚರಣಕ್ಕೆ ಬರಲಿ.

ತಥಾಸ್ತು

WD P. 951—GPB—2,000—16-7-58